ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 24 ಸೋಮವಾರ 2023

ಸಂಪುಟ: 44 | ಸಂಚಿಕೆ: 99 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕುಡಿಯುವ ನೀರಿನ ಸಮಸ್ಯೆ ಎದುರಿಸಲು
ಮುನ್ನೆಚ್ಚರಿಕೆ ಕ್ರಮ
ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಹಣ ಬಿಡುಗಡೆ

ಬೆಂಗಳೂರು, ಜು.23–ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆಯಿಂದ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ರೂ. 5.14 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇದರಿಂದ, ಈ ಹಿಂದೆ ಒದಗಿಸಿದ್ದ 1 ಕೋಟಿ ಹಣ ಸೇರಿದಂತೆ ಸರ್ಕಾರ ಈವರೆಗೂ ಒಟ್ಟು ರೂ. 6.14 ಕೋಟಿ ಹಣ ನೀಡಿದಂತಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಪ್ರಿಯಾಂಕ್ ಖರ್ಗೆ

ರಾಜ್ಯದ ಹಲವೆಡೆ ಮುಂಗಾರಿನ ಅಭಾವ ಎದುರಾಗಿದ್ದು ಹಲವು ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಲಕ್ಷಣಗಳು ಕಾಣುತ್ತಿವೆ. ಹೀಗಾಗಿ ಗ್ರಾಮೀಣ ಭಾಗದ ಜನರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಬಾರದು ಎನ್ನುವ ಉದ್ದೇಶದಿಂದ ರಾಜ್ಯ ಸರ್ಕಾರ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ವತಿಯಿಂದ ರಾಜ್ಯದಲ್ಲಿ ಬರದ ಛಾಯೆ ಎದುರಾಗುವ ಮುನ್ನವೇ ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ಕರೆದು ಮುಂಜಾಗ್ರತಾ ಕ್ರಮಗಳನ್ನ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.


ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ವತಿಯಿಂದ ಎಲ್ಲಾ ಜಿಲ್ಲೆಗಳ ಸಿಇಒಗಳೊಂದಿಗೆ ಕಳೆದ ಒಂದು ತಿಂಗಳಲ್ಲಿ 2 ವಿಸ್ತೃತ ಸಭೆ ನಡೆಸಿ ಕುಡಿಯುವ ನೀರಿಗೆ ಸಮಸ್ಯೆ ಎದುರಾಗದಂತೆ ಪೂರ್ವ ನಿಯೋಜಿತ ರೂಪು–ರೇಷೆಯನ್ನು (ಕಂಟಿನ್ಜೆನ್ಸಿ ಪ್ಲಾನ್) ತಯಾರಿಸುವಂತೆ ಸೂಚನೆ ನೀಡಲಾಗಿತ್ತು. ಇದೀಗ ಆ ವರದಿ ಪ್ರಕಾರ ಜಿಲ್ಲಾವಾರು ಎಷ್ಟು ತಾಲೂಕುಗಳಲ್ಲಿ ಮಳೆಯಾಗಿದೆ, ಎಷ್ಟು ತಾಲೂಕಿನಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಲಿದೆ, ಎಲ್ಲೆಲ್ಲಿ ಕೆರೆಗಳಲ್ಲಿ ನೀರಿನ ಪ್ರಮಾಣ ಕ್ಷೀಣಿಸುತ್ತಿದೆ, ಯಾವ ಹಳ್ಳಿಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್ ಅಥವಾ ಬಾಡಿಗೆ ಬೋರ್ ವೆಲ್ ಮೂಲಕ ಒದಗಿಸಬೇಕು ಎಂಬುದನ್ನ ಸಂಪೂರ್ಣವಾಗಿ ಪರಿಶೀಲಿಸಿ ಅಧಿಕಾರಿಗಳಿಂದ ವರದಿ ಸಿದ್ಧಪಡಿಸಿ ಹಣ ಬಿಡುಗಡೆ ಮಾಡಲಾಗಿದೆ. ಈ ಮೂಲಕ ರಾಜ್ಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ಯಾವುದೇ ಪ್ರಕರಣವೂ ಎದುರಾಗದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.



ವರದಿಯಲ್ಲಿ ನೀಡಿರುವಂತೆ ಒಟ್ಟು 101 ತಾಲೂಕುಗಳ 366 ಗ್ರಾಪಂಗಳಲ್ಲಿ 514 ಹಳ್ಳಿಗಳಿಗೆ 254 ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ ಮಾಡಲಾಗುವುದು. ಒಟ್ಟು ರಾಜ್ಯಾದ್ಯಂತ ಟ್ಯಾಂಕರ್‌ಗಳಲ್ಲಿ ಪ್ರತಿದಿನ 703 ಟ್ರಿಪ್‌ಗಳ ಮೂಲಕ ಕುಡಿಯುವ ನೀರನ್ನ ಪೂರೈಕೆ ಮಾಡಲಾಗುವುದು. ಜೊತೆಗೆ 465 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆದು ಕುಡಿಯುವ ನೀರನ್ನು ಜನರಿಗೆ ಸರಬರಾಜು ಮಾಡಲೂ ಹಣ ಒದಗಿಸಲಾಗಿದೆ. ಒಟ್ಟು ಟ್ಯಾಂಕರ್ ನೀರು ಪೂರೈಕೆಗೆ ರೂ. 4.21 ಕೋಟಿ ಹಣವನ್ನ ನೀಡಲಾಗಿದ್ದು, ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯಲು 93 ಲಕ್ಷ ಹಣವನ್ನ ನೀಡಲಾಗಿದೆ. ಈ ಮೂಲಕ ರಾಜ್ಯದಲ್ಲಿ ಕುಡಿ ಯುವ ನೀರಿನ ಸಮಸ್ಯೆ ನಿವಾರಣೆಗೆ ಮುನ್ನೆಚ್ಚರಿಕೆಯಿಂದ ಸರ್ಕಾರ ಸರ್ವ ಸನ್ನದ್ಧವಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಕೊಡಗಲ್ಲಿ ಮುಂದುವರೆದ ವರುಣಾರ್ಭಟ

- ಹಾರಂಗಿ ಜಲಾಶಯದಿಂದ 35 ಸಾವಿರ ಕ್ಯೂಸೆಕ್ ನೀರು ಹೊರಕ್ಕೆ
- ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತ, ಪ್ರವಾಸಿಗರ ಪ್ರವೇಶಕ್ಕೆ ನಿಷೇಧ
- ಹಲವು ಗ್ರಾಮಗಳಿಗೆ ಸಂಪರ್ಕ ಕಡಿತ
- ಉರುಳಿ ಬಿದ್ದ ಮರ, ವಿದ್ಯುತ್ ಕಂಬ





ಮಡಿಕೇರಿ, ಜು.23– ಕೊಡಗಿನಲ್ಲಿ ಪುಷ್ಯ ಮಳೆ ಆರ್ಭಟ ಮುಂದುವರೆದಿದ್ದು, ಎಲ್ಲಾ ನದಿ ತೊರೆಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ. ಪರಿಣಾಮ ಕೆಲವು ಕಡೆಗಳಲ್ಲಿ ಪ್ರವಾಹ ಏರ್ಪಟ್ಟಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಭಾರಿ ಗಾಳಿ ಸಹಿತ ಸುರಿಯುತ್ತಿರುವ ಮಳೆಯಿಂದಾಗಿ ಮರಗಳು ಉರುಳಿ ಬಿದ್ದು, ವಿದ್ಯುತ್ ಕಂಬಗಳು ಮತ್ತು ತಂತಿಗಳಿಗೆ ಹಾನಿಯಾಗಿದ್ದು, ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಮಳೆಯ ನಡುವೆಯೇ ವಿದ್ಯುತ್ ಲೈನ್‌ಗಳ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಆರೆಂಜ್ ಅಲರ್ಟ್ ಜಾರಿಯಲ್ಲಿದೆ. ಹಾರಂಗಿ ಜಲಾಶಯಕ್ಕೆ 20,900 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 35,000 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

ತ್ರಿವೇಣಿ ಸಂಗಮದಲ್ಲಿ ಪ್ರವಾಹ: ಬ್ರಹ್ಮಗಿರಿ, ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿರುವ ಪರಿಣಾಮ ಭಾಗಮಂಡಲ ತ್ರಿವೇಣಿ ಸಂಗಮ ಸಂಪೂರ್ಣ ಮುಳುಗಿದೆ. ಹಳೆಯ ಕೇಶ ಮುಂಡನ ಕಟ್ಟಡ ಪ್ರವಾಹ ನೀರಿನಿಂದ ಆವೃತವಾಗಿದ್ದು, ಸಂಗಮಕ್ಕೆ ತೆರಳುವ ಎಲ್ಲಾ ಮೆಟ್ಟಿಲುಗಳು ಮುಳುಗಡೆಯಾಗಿದೆ. ಸ್ಥಳದಲ್ಲಿ ಭಾಗಮಂಡಲ ಪೊಲೀಸರು ಬ್ಯಾರಿಕೇಡ್ ಅಳವಡಿಸಿ, ಭಕ್ತರ ಸುರಕ್ಷತೆ ದೃಷ್ಟಿಯಿಂದ ಸಂಗಮಕ್ಕೆ ತೆರಳುವುದನ್ನು ನಿಷೇಧಿಸಿದ್ದಾರೆ. ಭಾಗಮಂಡಲ ಭಗಂಡೇಶ್ವರ ದೇವಾಲಯದ ಆವರಣಕ್ಕೆ ಕಾವೇರಿ ನದಿ ನೀರು ಉಕ್ಕೇರಿದ್ದು, ನದಿ ಪಾತ್ರದ ಗದ್ದೆಗಳಿಗೆ ನೀರು ನುಗ್ಗಿದೆ. ಭತ್ತದ ಕೃಷಿ ಕಾರ್ಯ ● 8ನೇ ಪುಟಕ್ಕೆ





ನಾಪೋಕ್ಲು, ಕಕ್ಕಬ್ಬೆ, ಕುಂಜಿಲ ಸೇರಿದಂತೆ ನದಿ ಪಾತ್ರದ ಗ್ರಾಮಗಳಲ್ಲಿ ಜನ, ವಾಹನ ಸಂಚಾರ ಬಂದ್ ಆಗಿದೆ.

ಕೆಆರ್‌ಎಸ್, ಕಬಿನಿ ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆ

ಮೈಸೂರು, ಜು.23(ಬಿಎಲ್‌ಯು)– ಕೊಡಗಿನಲ್ಲಿ ಮಳೆಯ ಆರ್ಭಟ ಮುಂದುವರೆದಿರುವುದರಿಂದ ಕಾವೇರಿ ನದಿ ಹರಿವು ಕೂಡ ಹೆಚ್ಚಾಗಿದ್ದು, ಕೃಷ್ಣರಾಜ ಸಾಗರ ಜಲಾಶಯದ ನೀರಿನ ಪ್ರಮಾಣ ಏರಿಕೆಯಾಗಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 92.60 ಅಡಿಗಳಾಗಿದೆ. ಜಲಾಶಯಕ್ಕೆ 16,848 ಕ್ಯೂಸೆಕ್ ನೀರು ಹರಿದುಬರುತ್ತಿದ್ದು, ಜಲಾಶಯದಿಂದ 5,283 ಕ್ಯೂಸೆಕ್ ನೀರು ಬಿಡಲಾಗುತ್ತಿದೆ.

ಕಬಿನಿ ಜಲಾಶಯದ ಗರಿಷ್ಠ ಮಟ್ಟ 2284 ಅಡಿಗಳಾಗಿದ್ದು, ಇಂದಿನ ಮಟ್ಟ 2276.77 ಅಡಿಗಳಾಗಿದೆ. ಜಲಾಶಯಕ್ಕೆ 17,412 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 2500 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಕಬಿನಿ ಜಲಾಶಯದಲ್ಲಿ 15.33 ಟಿಎಂಸಿ ನೀರು ಶೇಖರಣೆಯಾಗಿದೆ. ಕೆಆರ್‌ಎಸ್‌ನಿಂದ ವಿಸಿ ನಾಲೆಗೆ 1,502 ಕ್ಯೂಸೆಕ್ ಹಾಗೂ ನದಿಗೆ 2,522 ಕ್ಯೂಸೆಕ್ ಸೇರಿದಂತೆ ಒಟ್ಟು 5,283 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಮೈಸೂರಲ್ಲಿ ದಟ್ಟ ಮೋಡ ಆವರಿಸಿದ್ದು, ತುಂತುರು ಮಳೆ ಸುರಿಯುತ್ತಿದೆ. ಇಂದು ಬೆಳಿಗ್ಗೆಯಿಂದಲೇ ವರುಣನ ಸಿಂಚನವಾಗುತ್ತಿದೆ. ಭಾನುವಾರವಾದ ಕಾರಣ ಶಾಲಾ ಕಾಲೇಜಿಗೆ ಹೋಗುವ ಮಕ್ಕಳು ಹಾಗೂ ಕೆಲಸಕ್ಕೆ ಹೋಗುವರಿಗೆ ತೊಂದರೆ ಆಗಲಿಲ್ಲ. ಭಾನುವಾರದ ರಜಾ ಮಜಾದಲ್ಲಿರುವ ಬಹಳಷ್ಟು ಜನರು ತುಂತುರು ಮಳೆಯ ಕಾರಣ ಮನೆ ಬಿಟ್ಟು ಹೊರಗೆ ಬರಲಿಲ್ಲ.

ನಿವೃತ್ತ ಶಿಕ್ಷಕನ ಕತ್ತುಕೊಯ್ದು ಭೀಕರ ಹತ್ಯೆ


ಮೈಸೂರು, ಜು.23(ಎಸ್‌ಬಿಡಿ)– ನಿವೃತ್ತ ಶಿಕ್ಷಕರೊಬ್ಬರನ್ನು ಕತ್ತು ಕೊಯ್ದು ಹತ್ಯೆ ಮಾಡಿರುವ ಘಟನೆ ಮೈಸೂರಿನ ವರುಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವರದಿಯಾಗಿದೆ.

ನಂಜನಗೂಡು ಪಟ್ಟಣದ ನಿವಾಸಿ, ನಿವೃತ್ತ ಶಿಕ್ಷಕ ನಾಗರಾಜು(70) ಹತ್ಯೆಯಾದವರು. ಇವರ ಶವ ಮೈಸೂರು ತಾಲೂಕಿನ ದೇವಲಾಪುರ ರಸ್ತೆಯ ಪಕ್ಕದಲ್ಲಿ ಭಾನುವಾರ ಬೆಳಗ್ಗೆ ಪತ್ತೆಯಾಗಿದೆ.

ನಾಗರಾಜು ಮೂಲತಃ ಉಮ್ಮತ್ತೂರು ಗ್ರಾಮದವರಾಗಿದ್ದು, ನಂಜನಗೂಡು ಪಟ್ಟಣದಲ್ಲಿ ನೆಲೆಸಿದ್ದಾರೆ. ಎಂದಿನಂತೆ ಶನಿವಾರ ಗ್ರಾಮದಲ್ಲಿರುವ ಜಮೀನಿಗೆ ಹೋಗಿ ಬರುವುದಾಗಿ ಹೇಳಿ ಮನೆಯಿಂದ ಹೋಗಿದ್ದರು. ಆದರೆ ರಾತ್ರಿಯಾದರೂ ವಾಪಸ್ಸಾಗದ ಕಾರಣ ಮನೆಯವರು ಮೊಬೈಲ್‌ಗೆ ಕರೆ ಮಾಡಿದ್ದಾರೆ. ಆದರೆ ಸಂಪರ್ಕ ಸಾಧ್ಯವಾಗಿಲ್ಲ. ಮಳೆಯಿದ್ದ ಕಾರಣ ಊರಿನಲ್ಲೇ ಉಳಿದುಕೊಂಡಿರಬಹುದು ಎಂದು ಭಾವಿಸಿದ್ದರು. ಆದರೆ ಭಾನುವಾರ ಬೆಳಗ್ಗೆ ದೇವಲಾಪುರ ● 8ನೇ ಪುಟಕ್ಕೆ

ಮಂತ್ರಾಲಯದಲ್ಲಿ ವಿಶ್ವದ ಅತಿ ಎತ್ತರದ ಶ್ರೀರಾಮ ಪ್ರತಿಮೆ ನಿರ್ಮಾಣ
ಕೇಂದ್ರ ಗೃಹ ಸಚಿವ ಅಮಿತ್ ಶಾರಿಂದ ಶಂಕುಸ್ಥಾಪನೆ





ರಾಯಚೂರು: ಮಂತ್ರಾಲಯದ ಹೊರವಲಯದಲ್ಲಿ ಸ್ಥಾಪಿಸಲಾಗುವ ವಿಶ್ವದ ಅತಿ ಎತ್ತರದ 108 ಅಡಿಯ ಪಂಚಲೋಹ ಶ್ರೀರಾಮ ಪ್ರತಿಮೆ ಸ್ಥಾಪನೆಗೆ ಕೇಂದ್ರ ಗೃಹ ಸಚಿವ ಅಮಿಶ್ ಶಾ ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮಿ ಭೂಮಿ ಪೂಜೆ ಮಾಡಿ ನೆರೆದಿದ್ದ ಭಕ್ತರಿಗೆ ಆಶೀರ್ವಚನ ನೀಡಿದರು. ಹೈದರಾಬಾದ್ ಮೂಲದ ಜೈ ಶ್ರೀರಾಮ್ ಫೌಂಡೇಶನ್‌ನಿಂದ 300 ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ ಸುಮಾರು 10 ಎಕರೆ ಪ್ರದೇಶದಲ್ಲಿ ಶ್ರೀರಾಮ ಪ್ರತಿಮೆ ಹಾಗೂ ಥೀಮ್ ಪಾರ್ಕ್ ನಿರ್ಮಾಣವಾಗುತ್ತಿದೆ. ಗುಜರಾತ್‌ನಲ್ಲಿನ ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಮೆ ನಿರ್ಮಿಸಿದ ಶಿಲ್ಪಿ ರಾಮ ಹಾಂಜಿ ಸುತಾರ್‌ಗೆ ಶ್ರೀರಾಮ ಪ್ರತಿಮೆ ತಯಾರಿಕೆ ಜವಾಬ್ದಾರಿ ನೀಡಲಾಗಿದೆ. ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದ ಅಮಿತ್ ಶಾ ವಿಶ್ವದಲ್ಲೇ ಅತಿ ಎತ್ತರದ ಶ್ರೀರಾಮ ಪ್ರತಿಮೆ ಮಂತ್ರಾಲಯದಲ್ಲಿ ಪ್ರತಿಷ್ಠಾಪನೆಯಾಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಭೋರ್ಗರೆಯುತ್ತಿದೆ ಚುಂಚನಕಟ್ಟೆ ಧನುಷ್ಕೋಟಿ ಜಲಪಾತ
ಧುಮ್ಮಿಕ್ಕುವ ಜಲಧಾರೆ ಕಣ್ತುಂಬಿಕೊಳ್ಳಲು ಮುಗಿಬಿದ್ದ ಪ್ರವಾಸಿಗರು

ಎಂ.ಟಿ.ಯೋಗೇಶ್‌ಕುಮಾರ್

ಚುಂಚನಕಟ್ಟೆ, ಜು.23–ಕೊಡಗು ಜಿಲ್ಲೆಯಲ್ಲಿ ಕಳೆದ ಕೆಲ ದಿನಗಳಿಂದ ಅಬ್ಬರಿಸುತ್ತಿರುವ ಮಳೆಯಿಂದಾಗಿ ಜೀವನದಿ ಕಾವೇರಿ ಮೈದುಂಬಿ ಹರಿಯುತ್ತಿದ್ದು, ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆಯ 'ಧನುಷ್ಕೋಟಿ' ಭೋರ್ಗರೆಯಲಾರಂಭಿಸಿದ್ದು, ಪ್ರವಾಸಿಗರ ಆಕರ್ಷಣೀಯ ಕೇಂದ್ರಬಿಂದುವಾಗಿದೆ.

ಈ ಬಾರಿ ಮುಂಗಾರು ಹಂಗಾಮ ದುರ್ಬಲವಾದಂತೆ ಕಂಡು ಬಂದಿದ್ದು, ಆರಂಭದಲ್ಲಿ ಮಳೆಯ ತೀವ್ರ ಕೊರತೆಯಿಂದ ಜಲಾಶಯಗಳು, ನದಿಗಳು ನೀರಿನ ಕೊರತೆ ಎದುರಿಸಿದ್ದವು. ಅದರಲ್ಲೂ ಮೈಸೂರು ಭಾಗದ ಜೀವನಾಡಿಯಾಗಿರುವ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿ ನೀರಿನ ಪ್ರಮಾಣ ಕುಸಿತದಿಂದಾಗಿ ಬರಗಾಲದ ಛಾಯೆ ಆವರಿಸುವ ಆತಂಕ ಮನೆ ಮಾಡಿತ್ತು. ಜೂನ್ ಅಂತ್ಯದಲ್ಲಿ ಎಂಟ್ರಿ ಕೊಡಬೇಕಾಗಿದ್ದ ಮುಂಗಾರು ಮಾನ್ಸೂನ್ ಕೈಕೊಟ್ಟ ಪರಿಣಾಮ ನದಿಗಳು ಸೊರಗಿದ್ದವು. ಆದರೆ, ಕಳೆದೊಂದು ವಾರದಿಂದ ಕೊಡಗಲ್ಲಿ ಮಳೆ ಅಬ್ಬರ ತೀವ್ರಗೊಳ್ಳುತ್ತಿರುವುದರಿಂದ ಜೀವನದಿ ಕಾವೇರಿ ಮೈದಳೆದಿದೆ. ● 8ನೇ ಪುಟಕ್ಕೆ



ಪುರಾಣದಲ್ಲೂ ಉಲ್ಲೇಖ ಶ್ರೀರಾಮ, ಲಕ್ಷ್ಮಣ, ಸೀತೆಯ ಹೆಜ್ಜೆ.....

ಧನುಷ್ಕೋಟಿ ಜಲಪಾತ ಪುರಾಣದಲ್ಲಿ ಉಲ್ಲೇಖವಾಗಿದೆ. ಜಲಪಾತದಲ್ಲಿ ಸೀತೆ 'ಮಡು' ಎಂದು ಕರೆಯಲ್ಪಡುವ ಸ್ಥಳವೂ ಇರುವುದು ಜಲಪಾತಕ್ಕೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರ ಸೆಳೆತಕ್ಕೂ ಕಾರಣ. ಪುರಾಣದಲ್ಲಿ ಚುಂಚನಕಟ್ಟೆಗೆ ಶ್ರೀರಾಮ, ಲಕ್ಷ್ಮಣ, ಸೀತೆ ಬಂದಿದ್ದರೆಂಬ ಪ್ರತೀತಿಯೂ ಇದೆ. ಆ ವೇಳೆ ಜಲಪಾತದ ಬಳಿ ಸೀತೆ ಸ್ನಾನ ಮಾಡುವಾಗ ಆಕಸ್ಮಿಕವಾಗಿ ಲಕ್ಷ್ಮಣ ಆ ಸ್ಥಳಕ್ಕೆ ಬಂದ. ಇದರಿಂದ ಸೀತಾ ಮಾತೆ ಲಕ್ಷ್ಮಣನ ಕಣ್ಣಿಗೆ ಬೀಳದಂತೆ ಜಲಪಾತದ ಬಲಬದಿಗೆ ಬಂದಾಗ ದೊಡ್ಡ ಕಲ್ಲು ಬಂಡೆ ಸೀಳಿಕೊಂಡು ಸೀತೆಗೆ ಮರೆ ಮಾಡಿತಂತೆ. ಆ ಸ್ಥಳವನ್ನು ಸೀತೆ ಮಡು ಎಂತಲೂ, ಸ್ನಾನ ಮಾಡಲು ಎಣ್ಣೆ, ಸೀಗೆ ಕಾಯಿ ಇಟ್ಟಿದ್ದರೂ ಎನ್ನಲಾದ ಬಂಡೆಯೂ ಇಂದಿಗೂ ಇದೆ. ರಭಸವಾಗಿ ಹರಿಯುವ ನೀರು ಎಣ್ಣೆ, ● 8ನೇ ಪುಟಕ್ಕೆ

ಸಾತ್ವಿಕ್–ಚಿರಾಗ್ ಮುಡಿಗೆ ಕೊರಿಯಾ ಓಪನ್ ಗರಿ!

ವಿಶ್ವ ನಂ.1 ಜೋಡಿ ಎದುರು ಪ್ರಶಸ್ತಿ ಗೆದ್ದು ಬೀಗಿದ ಭಾರತೀಯರು

ಕೊರಿಯಾ,ಜು.23–ಭಾರತದ ಪುರುಷರ ಡಬಲ್ಸ್ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿ ಪ್ರತಿಷ್ಠಿತ 2023ರ ಕೊರಿಯಾ ಓಪನ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಪುರುಷರ ಡಬಲ್ಸ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಅಗ್ರ ಶ್ರೇಯಾಂಕಿತ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್–ಮುಹಮ್ಮದ್ ರಿಯಾನ್ ಜೋಡಿ ಎದುರು ರೋಚಕ ಗೆಲುವು ಸಾಧಿಸುವ ಮೂಲಕ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಸಾತ್ವಿಕ್ ಸಾಯಿರಾಜ್ ರಂಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿಯ ಫೈನಲ್‌ವರೆಗಿನ ಹಾದಿ ಅಷ್ಟೊಂದು ಸುಲಭವಾಗಿರಲಿಲ್ಲ. ಮೂರನೇ ಶ್ರೇಯಾಂಕಿತವಾಗಿದ್ದ ಭಾರತದ ಜೋಡಿ, ಹಲವು ಬಲಿಷ್ಠ ಬ್ಯಾಡ್ಮಿಂಟನ್ ಜೋಡಿಗಳಿಗೆ ಸೋಲುಣಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತ್ತು. ಈ ಪೈಕಿ ವಿಶ್ವ ಎರಡನೇ ಶ್ರೇಯಾಂಕಿತ ಚೈನೀಸ್ ಜೋಡಿಯಾದ ಲಿಯಾಂಗ್ ವೀ ಕೆಂಗ್ ಮತ್ತಯ ವಾಂಗ್ ಚಾಂಗ್ ಜೋಡಿಯನ್ನು ಸೆಮೀಸ್‌ನಲ್ಲಿ ಮಣಿಸಿ ಸಾತ್ವಿಕ್–ಚಿರಾಗ್ ಜೋಡಿ ಫೈನಲ್ ಪ್ರವೇಶಿಸಿತ್ತು. ಶನಿವಾರ ನಡೆದ ಪುರುಷರ ಡಬಲ್ಸ್ ಸೆಮೀಸ್‌ನಲ್ಲಿ ವಿಶ್ವ ನಂ.2 ಚೀನಾದ ಲಿಯಾಂಗ್ ವೀ ಕೆಂಗ್–ವಾಂಗ್ ಚಾಂಗ್ ವಿರುದ್ಧ ವಿಶ್ವ ನಂ.3 ಸಾತ್ವಿಕ್–ಚಿರಾಗ್ 21–15, 24–22 ಅಂತರದಲ್ಲಿ ಗೆಲುವು ಸಾಧಿಸಿದರು. ಈ ಮೊದಲು ಚೀನಾ ಜೋಡಿ ವಿರುದ್ಧ 2 ಬಾರಿ ಸೋತಿದ್ದ ಭಾರತದ ಜೋಡಿಗೆ ಇದು ಮೊದಲ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿತ್ತು.



ಚಾಂಪಿಯನ್ ವಿಜೇತ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ.

ಫೈನಲ್‌ನಲ್ಲಿ ವಿಶ್ವ ನಂ.1 ಶ್ರೇಯಾಂಕಿತ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್–ಮುಹಮ್ಮದ್ ರಿಯಾನ್ ಎದುರು ಚಿರಾಗ್ ಶೆಟ್ಟಿ ಹಾಗೂ ಸಾತ್ವಿಕ್ ಸಾಯಿರಾಜ್ ರಂಕಿರೆಡ್ಡಿ ಜೋಡಿ ಜಿದ್ದಾಜಿದ್ದಿನ ಪೈಪೋಟಿ ನಡೆಸುವ ಮೂಲಕ ಚಾಂಪಿಯನ್ ಪಟ್ಟ ಅಲಂಕರಿಸುವಲ್ಲಿ ಸಫಲವಾಯಿತು. 40 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಮೊದಲ ಗೇಮ್‌ನಲ್ಲಿ ಸೋಲು ಅನುಭವಿಸಿದರೂ ಉಳಿದೆರಡು ಗೇಮ್‌ಗಳಲ್ಲಿ ಭರ್ಜರಿ ಗೆಲುವು ಸಾಧಿಸುವಲ್ಲಿ ಭಾರತದ ಜೋಡಿ ಸಫಲವಾಯಿತು. ಫೈನಲ್‌ನಲ್ಲಿ ಸಾತ್ವಿಕ್–ಚಿರಾಗ್ ಜೋಡಿ 17–21, 21–13,21–14 ಗೇಮ್‌ಗಳಲ್ಲಿ ಗೆಲುವಿನ ನಗೆ ಬೀರಿತು.

2023ರ BWF ವರ್ಲ್ಡ್ ಟೂರ್‌ನಲ್ಲಿ ಈಗಾಗಲೇ ಸ್ವಿಸ್ ಓಪನ್ ಹಾಗೂ ಇಂಡೋನೇಷ್ಯಾ ಓಪನ್ ಪ್ರಶಸ್ತಿ ಗೆದ್ದಿದ್ದ ಚಿರಾಗ್ ಶೆಟ್ಟಿ–ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಸಾಧನೆಯ ಕಿರೀಟಕ್ಕೆ ಇದೀಗ ಮತ್ತೊಂದು ಗರಿ ಸೇರ್ಪಡೆಯಾದಂತೆ ಆಗಿದೆ. ಕೊರಿಯಾ ಓಪನ್ ಪ್ರಶಸ್ತಿ ಜಯಿಸುವ ಮೂಲಕ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿ 2024 ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆಗಿಟ್ಟಿಸಿಕೊಳ್ಳುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಿಟ್ಟಿದ್ದಾರೆ.

ಜು.27, ಮೈಸೂರಲ್ಲಿ ಕೈ ಶಾಸಕಾಂಗ ಸಭೆ

ಮೈಸೂರು,ಜು.23–ಮೈಸೂರಿನಲ್ಲಿ ಜು. 27ರಂದು ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷ (ಸಿಎಲ್‌ಪಿ)ದ ಸಭೆ ನಡೆಯಲಿದೆ. ನಗರದ ರ್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಅಂದು ಸಂಜೆ 6.30ಕ್ಕೆ ಸಿಎಲ್‌ಪಿ ನಾಯಕರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪರಿಷತ್ ಸಭಾ ನಾಯಕ ಎನ್.ಎಸ್.ಬೋಸರಾಜು ಹಾಗೂ ಪಕ್ಷದ ಎಲ್ಲಾ ಕಾರ್ಯಾಧ್ಯಕ್ಷರು ಭಾಗವಹಿಸಲಿದ್ದಾರೆ ಎಂದು ಸಿಎಲ್‌ಪಿ ಕಾರ್ಯದರ್ಶಿ ಈ.ತುಕಾರಾಮ್ ತಿಳಿಸಿದ್ದಾರೆ.

ಮೈಸೂರು ಮಿತ್ರ

ಅಂಚೆ ಇಲಾಖೆ ನೌಕರರಿಂದ ಡಾ.ಅಂಬೇಡ್ಕರ್ ಜಯಂತಿ



ಮೈಸೂರು, ಜು.23(ಜಿಎ)–ನಗರದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಅಖಿಲ ಭಾರತ ಅಂಚೆ ಇಲಾಖೆ ಪ.ಜಾತಿ, ಪ.ಪಂಗಡಗಳ ನೌಕರರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ವಿಭಾಗದ ವತಿಯಿಂದ ಭಾನುವಾರ ಆಯೋಜಿಸಿದ್ದ ದ್ವೈವಾರ್ಷಿಕ ಅಧಿವೇಶನ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತಿ ಕಾರ್ಯಕ್ರಮವನ್ನು ಉರಿಲಿಂಗಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಐದು ಪತ್ರಿಕೆಗಳ ಸಂಪಾದಕರಾಗಿ, ಐದು ಖಾತೆಯ ಮಂತ್ರಿಯಾಗಿ, ಭಾರತದ ಮೊಟ್ಟ ಮೊದಲ ಕಾನೂನು ಮಂತ್ರಿಯಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರು ನಿಧನರಾದಾಗ ಅವರ ಬಳಿ 5000 ರೂ. ಹಣ ಕೂಡ ಇರಲಿಲ್ಲ. ಹಾಗಾಗಿ ಅವರ ಜೀವನವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಶೋಷಿತ ಜನ ಅಂಬೇಡ್ಕರ್ ಹೇಳಿದಂತೆ ಮಣ್ಣಿನ ಒಳಗೆ ಕೊಳೆತು ಹೋಗುವ ಬೀಜವಾಗಬಾರದು, ಮೊಳಕೆ ಒಡೆದು ಹೆಮ್ಮರವಾಗಬೇಕು. ಯಾರ ಗುಲಾಮಗಿರಿಯಲ್ಲೂ ಬದುಕು ಬಾರದು. ಸ್ವಾಭಿಮಾನಿಗಳಾಗಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ಅಂಚೆ ಇಲಾಖೆ ಪ.ಜಾತಿ, ಪ.ಪಂಗಡಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಲಕ್ಷ್ಮೀನಾರಾಯಣ, ಬಸವ ಕಲ್ಯಾಣ ಶ್ರೀ ಪಂಚಾಕ್ಷರಿ ಸ್ವಾಮೀಜಿ, ವಿಜಯವಾಡ ಅಂಚೆ ಸೇವೆಗಳ ನಿರ್ದೇಶಕ ಸಂದೇಶ್ ಮಹದೇವಪ್ಪ, ಮಾಜಿ ಮಹಾಪೌರ ಪುರುಷೋತ್ತಮ್, ಬೆಂಗಳೂರಿನ ಸಹಾಯಕ ಪೋಸ್ಟ್ ಮಾಸ್ಟರ್ ಜನರಲ್ ಕೊರಗಪ್ಪ, ಬೆಂಗಳೂರಿನ ಎಸ್ಸಿ, ಎಸ್ಟಿ ಅಸೋಸಿಯೇಷನ್‌ನ ಕಾರ್ಯದರ್ಶಿ ವಿ.ಕೃಷ್ಣಮೂರ್ತಿ, ಬಾಗಲಕೋಟೆಯ ಸಹಾಯಕ ಅಂಚೆ ಅಧೀಕ್ಷಕ ಸಿ.ಜಿ.ಕಾಂಬ್ಳೆ, ಸಂಘದ ಕಾರ್ಯದರ್ಶಿ ಸಿ.ಆರ್.ರಂಗಸ್ವಾಮಿ, ನಿವೃತ್ತ ಹಿರಿಯ ಅಂಚೆ ಅಧೀಕ್ಷಕರಾದ ಓಬಸಯ್ಯ, ಚೂಡಯ್ಯ, ಎಸ್.ಮಹದೇವಯ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸೇವಾ ಮನೋಭಾವ ದೂರವಾಗಿ ವೈದ್ಯಕೀಯ ವೃತ್ತಿ ವ್ಯಾಪಾರೀಕರಣವಾಗುತ್ತಿದೆ

ನಾರಾಯಣ ನಮನ ಅಭಿನಂದನ ಕಾರ್ಯಕ್ರಮದಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್ ಬೇಸರ

ಮೈಸೂರು,ಜು.23(ಬಿಎಲ್‌ಯು)–ಸೇವಾ ಮನೋಭಾವ ಹಾಗೂ ಮಾನವೀಯ ವೃತ್ತಿಯಾಗಿದ್ದ ವೈದ್ಯಕೀಯ ವೃತ್ತಿ ಕೂಡ ವ್ಯಾಪಾರೀಕರಣವಾಗುತ್ತಿದೆ ಎಂದು ಚಾಮರಾಜನಗರ ಲೋಕಸಭಾ ಸದಸ್ಯ ಶ್ರೀನಿವಾಸ ಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕುವೆಂಪುನಗರದ ಗಾನ ಭಾರತಿ ಸಭಾಂಗಣದಲ್ಲಿ ಇಂದು ಡಾ.ವಿ.ಲಕ್ಷ್ಮೀನಾರಾಯಣ್ ಅಭಿನಂದನ ಸಮಿತಿ ಆಯೋಜಿಸಿದ್ದ ನಾರಾಯಣ ನಮನ ಅಭಿನಂದನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಂದು ವೃತ್ತಿಗೂ ಘನತೆ ಹಾಗೂ ಗೌರವ ಇದ್ದೆ ಇರುತ್ತದೆ. ಅದರಲ್ಲೂ ವೈದ್ಯ ವೃತ್ತಿ ಇದನ್ನೆಲ್ಲಾ ಮೀರಿದ ಶ್ರೇಷ್ಠ ವೃತ್ತಿಯಾಗಿದೆ. ಈ ನಿಟ್ಟಿನಲ್ಲಿ ವೈದ್ಯರನ್ನು 'ವೈದ್ಯೋ ನಾರಾಯಣ ಹರಿ' ಎಂದು ದೇವರಂತೆ ಗೌರವಯುತವಾಗಿ ಕಾಣುತ್ತೇವೆ. ಆದರೆ ವೈದ್ಯ ವೃತ್ತಿಯಲ್ಲಿ ಸೇವಾ ಮನೋಭಾವ ಕಡಿಮೆಯಾಗುತ್ತಿದೆ. ಮಾನವೀಯ ಗುಣ ದೂರವಾಗಿ ವ್ಯಾಪಾರೀಕರಣವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭ್ರಷ್ಟಾಚಾರ ಮುಕ್ತ ಹಾಗೂ ಲಂಚ ಮುಕ್ತ ಜಾತ್ಯಾತೀತ ಸಮಾಜ ಆದರ್ಶ ರಾಜ್ಯದ ಕಲ್ಪನೆಯಾಗಬೇಕು. ಈ ಮೂಲಕ ಬಡವ–ಶ್ರೀಮಂತ ಎನ್ನದೆ ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ ದೊರೆಯಬೇಕು. ಇಲ್ಲದಿದ್ದರೆ ಸಮಾಜ ಪರಿಪೂರ್ಣವಾಗಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಈ ಮೊದಲು ವೈದ್ಯಕೀಯ ಪದವಿ ಮುಗಿಸಿ ಬಂದವರಿಗೆ ಸೇವೆ ಮಾಡುವ ಮನೋಭಾವ ಇತ್ತು. ಅದರಂತೆ ಬಹಳಷ್ಟು ವೈದ್ಯರು ಸೇವಾ ಮನೋಭಾವ ಹಾಗೂ ಮಾನವೀಯತೆಯಿಂದ ಕೆಲಸ ಮಾಡುತ್ತಿದ್ದರು. ಆದರೆ ಇಂದು ಸೇವಾ ಮನೋಭಾವ ಹಾಗೂ ಮಾನವೀಯ ಗುಣ ದೂರವಾಗುತ್ತಿದ್ದು, ವೈದ್ಯ ವೃತ್ತಿ ವ್ಯಾಪಾರೀಕರಣವಾಗುತ್ತಿದೆ.

ಆದರೆ ಡಾ.ಲಕ್ಷ್ಮಿನಾರಾಯಣ ಅವರು ಈ ಆರೋಪದಿಂದ ಮುಕ್ತರಾಗಿದ್ದಾರೆ. ಕೋಲಾರದ ಕುಗ್ರಾಮದಿಂದ ಕಷ್ಟದಲ್ಲಿ ಶಿಕ್ಷಣ ಮುಗಿಸಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವೃತ್ತಿಗೆ ಸೇರಿದರು. ವೈದ್ಯಕೀಯ ಕಾಲೇಜಿನ ಶುಲ್ಕ ಪಾವತಿಸಲು ಅವರ ಕುಟುಂಬಸ್ಥರು ಜಮೀನು ಮಾರಾಟ ಮಾಡಬೇಕಾಯಿತು. ಇಷ್ಟು ಕಷ್ಟದಲ್ಲಿ ವೈದ್ಯಕೀಯ ಪದವಿ ಪಡೆದ ಅವರು ವಿದೇಶದಲ್ಲಿ ಕೂಡ ಉನ್ನತ ವ್ಯಾಸಂಗ ಮಾಡಿದರು. ತಮ್ಮ ಸೇವಾ ಮನೋಭಾವ ಗುಣಗಳಿಂದ ಡಾ.ಲಕ್ಷ್ಮಿನಾರಾಯಣ ಅವರು ಶ್ರೀಸಾಮಾನ್ಯರ ವೈದ್ಯ ಎಂದು ಹೆಸರುವಾಸಿಯಾಗಿದ್ದಾರೆ ಎಂದು ಶ್ರೀನಿವಾಸ ಪ್ರಸಾದ್ ಅವರು ಡಾ.ಲಕ್ಷ್ಮಿನಾರಾಯಣ ಅವರ ಬಗ್ಗೆ ಗುಣಗಾನ ಮಾಡಿದರು.

2024ರ ಮಾರ್ಚ್ 17ಕ್ಕೆ ನಾನು ಚುನಾವಣಾ ರಾಜಕೀಯಕ್ಕೆ ಕಾಲಿಟ್ಟು 50 ವರ್ಷವಾಗಲಿದೆ. ಯಾವುದೇ ಕಪ್ಪುಚುಕ್ಕೆ ಇಲ್ಲದೆ ಇಷ್ಟು ವರ್ಷ ರಾಜಕಾರಣ ಮಾಡಿದ್ದೇನೆ. ಕಳೆದ ಚುನಾವಣೆಯಲ್ಲೇ ನಾನು ಸ್ಪರ್ಧೆ ಮಾಡುತ್ತಿರಲಿಲ್ಲ. ಆದರೆ ಸ್ವಾಭಿಮಾನ ಹಾಗೂ ಹಠ, ಛಲದ ಕಾರಣ ಲೋಕಸಭಾ ಚುನಾವಣೆಯಲ್ಲಿ ನಿಂತು ಸ್ಪರ್ಧೆ ಮಾಡಿದೆ ಎಂದು ಶ್ರೀನಿವಾಸಪ್ರಸಾದ್ ಸ್ಪಷ್ಟಪಡಿಸಿದರು.

ಇದೇ ವೇಳೆ ಮಾತನಾಡಿದ ಶಾಸಕ ಟಿ.ಎಸ್. ಶ್ರೀವತ್ಸ ಅವರು, ಡಾ.ಲಕ್ಷ್ಮಿನಾರಾಯಣ ಅವರ ಬಗ್ಗೆ ಎಲ್ಲಾ ಕ್ಷೇತ್ರದ ಜನರಿಗೂ ಪರಿಚಯವಿದೆ. ಇದರಿಂದ ಎಲ್ಲರೂ ಡಾ.ಲಕ್ಷ್ಮಿನಾರಾಯಣ ಅವರ ಬಗ್ಗೆ ಗೌರವ ಭಾವನೆ ಇಟ್ಟುಕೊಂಡಿದ್ದಾರೆ ಎಂದರು.

ಮಾತೃ ಹೃದಯಿಯಾಗಿರುವ ಕೆಲವೇ ಕೆಲವು ವೈದ್ಯರಲ್ಲಿ ಡಾ.ಲಕ್ಷ್ಮಿನಾರಾಯಣ ಅವರು ಕೂಡ ಒಬ್ಬರು. ವೈದ್ಯ ಸೇವೆ ಧನಲಕ್ಷ್ಮಿ ಎನ್ನುವ ಈಗಿನ ಪರಿಸ್ಥಿತಿಯಲ್ಲಿ ಸೇವೆಯೇ ನನ್ನ ಮೂಲ ಧ್ಯೇಯ ಎಂದು ಡಾ.ಲಕ್ಷ್ಮಿನಾರಾಯಣ ಅವರು ವೈದ್ಯ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಕೌಟಿಲ್ಯ ರಘು ಹೇಳಿದರು.

ವೈದ್ಯ ವೃತ್ತಿಯಲ್ಲಿ ಸಾರ್ಥಕ ಸೇವೆ ಸಲ್ಲಿಸುತ್ತಿರುವ ಡಾ.ಲಕ್ಷ್ಮಿನಾರಾಯಣ ಹಾಗೂ ಲಕ್ಷ್ಮಿದೇವಿ ಅವರನ್ನು ಇದೇ ವೇಳೆ ಅಭಿನಂದಿಸಲಾಯಿತು. ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್ತ, ಹಿರಿಯ ಪತ್ರಕರ್ತ ರವೀಂದ್ರಭಟ್ಟ ಐನಕೈ, ಆರ್‌ಎಸ್‌ಎಸ್ ಮುಖಂಡ ಮ.ವೆಂಕಟರಾಮ್, ವಿಶ್ರಾಂತ ಪ್ರಾಧ್ಯಾಪಕ ಡಾ.ಪ್ರೀತಿ ಶುಭಚಂದ್ರ, ಪ್ರೊ. ನೀ.ಗಿರಿಗೌಡ, ಬಾ.ವೆ.ಶ್ರೀಧರ, ಎಂಜಿಆರ್ ಅರಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಗಾನಭಾರತಿ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಗಣ್ಯರು ಡಾ.ಲಕ್ಷ್ಮಿನಾರಾಯಣ ಹಾಗೂ ಲಕ್ಷ್ಮಿದೇವಿ ಅವರನ್ನು ಅಭಿನಂದಿಸಿದರು.

ಆರೋಗ್ಯ ಶಿಬಿರಗಳ ಸದುಪಯೋಗ ಪಡೆಯಿರಿ

ಜೀವಿಕ ಸಂಸ್ಥೆಯ ಸಂಚಾಲಕ ಬಸವರಾಜು ಅಭಿಮತ





ಮೈಸೂರು,ಜು.23– ಗ್ರಾಮೀಣ ಭಾಗದ ಜನರು ತಮ್ಮ ಗ್ರಾಮಗಳಲ್ಲಿ ನಡೆಯುವ ಆರೋಗ್ಯ ಶಿಬಿರಗಳ ಸದುಪಯೋಗಪಡೆದುಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಜೀವಿಕ ಸಂಸ್ಥೆಯ ಜಿಲ್ಲಾ ಸಂಚಾಲಕ ಬಸವರಾಜು ತಿಳಿಸಿದರು.

ಸರಗೂರು ತಾಲೂಕು ಪಂಚಾಯತಿ, ಆರೋಗ್ಯ ಇಲಾಖೆ, ಜೀವಿಕ ಸಂಸ್ಥೆ ಮತ್ತು ಗ್ರಾಮ ಪಂಚಾಯತಿಗಳ ಸಹಯೋಗದಲ್ಲಿ ತಾಲೂಕಿನ ಹಂಚೀಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಸಹಳ್ಳಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಜೀತವಿಮುಕ್ತರ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ, ಮಾತನಾಡಿದರು.

ಜೀತವಿಮುಕ್ತರು ಹಾಗೂ ಗ್ರಾಮದ ಎಲ್ಲಾ ಜನರಿಗೂ ಆರೋಗ್ಯ ತಪಾಸಣೆ ನಡೆಸುವ ಉದ್ದೇಶದಿಂದ ಈ ಶಿಬಿರ ಆಯೋಜಿಸಲಾಗಿದ್ದು, ಇದನ್ನು ಪ್ರತಿಯೊಬ್ಬರು ಸದುಪಯೋಗಪಡಿಸಿಕೊಳ್ಳಬೇಕು, ಏಕೆಂದರೆ ಇಂದಿನ ಕಾಲದಲ್ಲಿ ತುಂಬಾ ಖಾಯಿಲೆಗಳು ನಮಗೆ ಗೊತ್ತಿಲ್ಲದೆ ನಮ್ಮ ದೇಹ ಸೇರುತ್ತಿವೆ. ಕೊರೊನಾ ಎಂಬ ಮಹಾಮಾರಿ ಜನಜೀವನವನ್ನು ಹೇಗೆ ಅಸ್ತವ್ಯಸ್ತ ಮಾಡಿದೆ ಎಂಬುದು ತಿಳಿದಿದೆ. ಅದಕ್ಕೋಸ್ಕರ ಗ್ರಾಮಗಳಲ್ಲಿ ಆರೋಗ್ಯ ಶಿಬಿರ ಆಯೋಜಿಸಿದಾಗ ಅದರ ಉಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು.

ಗ್ರಾಮ ಪಂಚಾಯತಿಗಳಿಂದ ಪ್ರತಿ ಕುಟುಂಬಕ್ಕೂ ಶೌಚಾಲಯ ನಿರ್ಮಿಸಲಾಗಿದೆ. ಆದರೂ ಶೌಚಾಲಯ ಬಳಸುತ್ತಿಲ್ಲ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುವುದು ಹೆಚ್ಚುತ್ತದೆ. ಎಲ್ಲರೂ ಕಡ್ಡಾಯವಾಗಿ ಶೌಚಾಲಯ ಬಳಸಿ ಎಂದು ಕಿವಿಮಾತು ಹೇಳಿದರು.

ಶಿಬಿರದಲ್ಲಿ ಹಂಚೀಪುರ, ಬಿದರಹಳ್ಳಿ, ಇಟ್ನಾ, ಹೆಗ್ಗನೂರು, ಸಾಗರೆ, ಮನುಗನಹಳ್ಳಿ ಮತ್ತು ಕೊತ್ತೇಗಾಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಜೀತವಿಮುಕ್ತರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಲಾಯಿತು. ಈ ವೇಳೆ ಕಾರ್ಯನಿರ್ವಾಹಕ ಅಧಿಕಾರಿ ಕೆ.ಸುಷ್ಮಾ, ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು, ವಿವಿಧ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಜರಿದ್ದರು.

ನಾನು ಕಾಂಗ್ರೆಸ್ ಸೇರಲ್ಲ, ಬಿಜೆಪಿಯಲ್ಲೇ ಇರುತ್ತೇನೆ

ತೇಜಸ್ವಿನಿ ಅನಂತಕುಮಾರ್ ಸ್ಪಷ್ಟನೆ

ಮೈಸೂರು, ಜು.23(ಬಿಎಲ್‌ಯು)– ನಾನು ಕಾಂಗ್ರೆಸ್ ಪಕ್ಷ ಸೇರುತ್ತಿದ್ದೇನೆ ಎಂಬುವುದು ಶುದ್ಧ ಸುಳ್ಳು. ಅನಂತಕುಮಾರ್ ಅವರು ಕಟ್ಟಿ ಬೆಳೆಸಿದ ಬಿಜೆಪಿಯಲ್ಲೆ ಇರುತ್ತೇನೆ ಎಂದು ಮಾಜಿ ಕೇಂದ್ರ ಸಚಿವ ದಿವಂಗತ ಅನಂತಕುಮಾರ್ ಪತ್ನಿ ತೇಜಸ್ವಿನಿ ಅನಂತಕುಮಾರ್ ಅವರು ಸ್ಪಷ್ಟಪಡಿಸಿದ್ದಾರೆ.

ಮೈಸೂರಿನಲ್ಲಿ ಮಾತನಾಡಿದ ಅವರು, ನಾನು ಬಿಜೆಪಿ ಉಪಾಧ್ಯಕ್ಷೆಯಾಗಿ ಕೆಲಸ ಮಾಡುತ್ತಿದ್ದೇನೆ. ಸೈದ್ಧಾಂತಿಕವಾಗಿ ಬಿಜೆಪಿ ಸಿದ್ಧಾಂತಕ್ಕೆ ಬದ್ಧವಾಗಿದ್ದೇನೆ. ಇತ್ತೀಚೆಗೆ ನಾನು ಹೇಳಿದ ವಿಚಾರ ಒಂದಾದರೆ, ಸೋಷಿಯಲ್ ಮೀಡಿಯಾದಲ್ಲಿ ಬರುವುದು ಮತ್ತೊಂದಾಗಿರುತ್ತದೆ. ನಾನು ಪಕ್ಷದ ಜೊತೆ ಇದ್ದೇನೆ. ಪಕ್ಷ ಕೂಡ ನನ್ನ ಜೊತೆ ಇದೆ ಎಂದರು.



ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಹಿಂದೆಯೂ ಅವಕಾಶ ಕೇಳಿಲ್ಲ, ಈಗಲೂ ಕೇಳುವುದಿಲ್ಲ. ಆದರೆ ಟಿಕೆಟ್ ಕೊಟ್ಟರೆ ನೋಡೋಣ. ಎಲ್ಲದಕ್ಕೂ ಸಮಯ ಉತ್ತರ ಕೊಡಲಿದೆ. ಆದರೆ ಯಾವುದೇ ಆಕಾಂಕ್ಷೆಗಳನ್ನು ಇಟ್ಟುಕೊಂಡು ರಾಜಕಾರಣ ಮಾಡಬಾರದು ಎಂಬ ನನ್ನ ಪತಿಯ ಆದರ್ಶದ ಹಾದಿಯಲ್ಲೆ ಸಾಗುತ್ತಿದ್ದೇನೆ ಎಂದು ತೇಜಸ್ವಿನಿ ಅವರು ಹೇಳಿದರು.

ಚುನಾವಣಾ ಪ್ರಚಾರದ ವೇಳೆ ದೆಹಲಿಗೆ ಬರುವಂತೆ ಆಹ್ವಾನ ನೀಡಿದ್ದರು. ಬಹಳ ದಿನದ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದೇನೆ. ಅಲ್ಲಿ ರಾಜಕಾರಣ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ಮಾಡಿದ್ದೇನೆ ಎಂದು ಅವರು ತಿಳಿಸಿದರು.

ತೆಲಂಗಾಣದಲ್ಲಿ ಭೀಕರ ರಸ್ತೆ ಅಪಘಾತ: ಬಿಆರ್‌ಎಸ್ ಮುಖಂಡ, ಪುತ್ರನ ದುರ್ಮರಣ

ಮೇದಕ್ (ತೆಲಂಗಾಣ), ಜು.23– ತೆಲಂಗಾಣದಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಮುಖಂಡ ಶೌರ್ಯ ನಾಯಕ್ ಮತ್ತು ಅವರ ಪುತ್ರ ಸಾವನ್ನಪ್ಪಿದ್ದಾರೆಂದು ಭಾನುವಾರ ತಿಳಿದು ಬಂದಿದೆ. ನರಸಿಂಗಿಯಿಂದ ಚೇಗುಂಟಾಗೆ ಪ್ರಯಾಣಿಸುತ್ತಿದ್ದಾಗ ರಸ್ತೆ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನರಸಿಂಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಿದೆ.

ಶೌರ್ಯ ನಾಯಕ್ ಮತ್ತು ಅವರ ಮಗ ಅಂಕಿತ್ ಅವರು ನರಸಿಂಗಿ ಗ್ರಾಮದಿಂದ ಚೇಗುಂಟಾ ಕಡೆಗೆ ಪ್ರಯಾಣಿಸುತ್ತಿದ್ದರು. ಈ ವೇಳೆ ಕಾರಿನ ಟೈರ್ ಒಡೆದು ನಿಯಂತ್ರಣ ತಪ್ಪಿ ಡಿವೈಡರ್ ಡಿಕ್ಕಿ ಹೊಡೆದಿದೆ. ಬಳಿಕ ಲಾರಿಯೊಂದಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತದೇಹಗಳನ್ನು ರಾಮಾಯಣ ಪೇಟೆ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಷ್ಟ್ರೀಯ ಮಟ್ಟದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ

ಮೈಸೂರು,ಜು.23–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾಣಿಜ್ಯ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ 5 ದಿನಗಳ ರಾಷ್ಟ್ರೀಯ ಮಟ್ಟದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಜು.25ರಂದು ಬೆಳಗ್ಗೆ 10 ಗಂಟೆಗೆ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲ್ಸೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಂಐಎಫ್‌ಎಸ್‌ಇ ಸಂಸ್ಥೆಯಲ್ಲಿ 'ಫೈರ್ ಅಂಡ್ ಸೇಫ್ಟಿ' ಕೋರ್ಸ್; ಉದ್ಯೋಗ ಗ್ಯಾರಂಟಿ

ಮೈಸೂರು, ಜು.23(ಪಿಎಂ)– ಪ್ರಸಕ್ತ ಸಾಲಿನಲ್ಲಿ ಐಟಿಐ, ಡಿಪ್ಲೊಮಾ ಅಥವಾ ಪದವಿ ಪೂರೈಸಿದ ನಂತರ ಮುಂದೇನು ಎಂಬ ಗೊಂದಲವೇ? ಹಾಗಾದರೆ 'ಫೈರ್ ಅಂಡ್ ಸೇಫ್ಟಿ' ಕೋರ್ಸ್ ಇಲ್ಲವೇ 'ಹೆಲ್ತ್ ಅಂಡ್ ಸೇಫ್ಟಿ' ಇಂಜಿನಿಯರಿಂಗ್ ವ್ಯಾಸಂಗದ ಮೂಲಕ ಗ್ಯಾರಂಟಿ ಉದ್ಯೋಗ ಪಡೆಯಬಹುದು.

ದೇಶ–ವಿದೇಶಗಳಲ್ಲಿ ಸಾಕಷ್ಟು ಉದ್ಯೋಗಾವಕಾಶ ಹೊಂದಿರುವ ಕೋರ್ಸ್ 'ಫೈರ್ ಅಂಡ್ ಸೇಫ್ಟಿ' ಮಾತ್ರ. ಅದರಲ್ಲೂ ಐಟಿಐ, ಡಿಪ್ಲೊಮಾ ಅಥವಾ ಪದವಿ ಪೂರೈಸಿದವರು ತಮ್ಮ ವಿದ್ಯಾರ್ಹತೆಯೊಂದಿಗೆ 'ಫೈರ್ ಅಂಡ್ ಸೇಫ್ಟಿ' ಕೋರ್ಸ್ ಸರ್ಟಿಫಿಕೇಟ್ ಅನ್ನೂ ಹೊಂದಿದ್ದರೆ, ಅದು ಕಲಿಕೆಯ ಮೌಲ್ಯ ಹೆಚ್ಚಿಸುವ ಜೊತೆಗೆ ಜಾಬ್ ಮಾರ್ಕೆಟ್‌ನಲ್ಲಿ ಮುಂಚೂಣಿಯಲ್ಲಿ ತಂದು ನಿಲ್ಲಿಸುತ್ತದೆ.

ಈ ನಿಟ್ಟಿನಲ್ಲಿ ಕಳೆದ 16 ವರ್ಷಗಳಿಂದ 'ಫೈರ್ ಅಂಡ್ ಸೇಫ್ಟಿ' ವಿಷಯ ಸಂಬಂಧ ಶೇ.100ರಷ್ಟು ಉದ್ಯೋಗಾವಕಾಶದೊಂದಿಗೆ ವಿದ್ಯಾರ್ಥಿಗಳನ್ನು ತರಬೇತುಗೊಳಿಸುತ್ತಿರುವ ಮಂಗಳೂರಿನ ಎಂಐಎಫ್‌ಎಸ್‌ಇ (ಮಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಫೈರ್ ಅಂಡ್ ಸೇಫ್ಟಿ ಇಂಜಿನಿಯರಿಂಗ್ ಸಂಸ್ಥೆ) ಸಂಸ್ಥೆಯಲ್ಲಿ ಕೋರ್ಸ್ ಮಾಡಿರುವ 17,500 ಮಂದಿ ದೇಶ–ವಿದೇಶದ ವಿವಿಧ ಉನ್ನತ ಸಂಸ್ಥೆಗಳಲ್ಲಿ ಫೈರ್ ಅಂಡ್ ಸೇಫ್ಟಿ ವಿಭಾಗದಲ್ಲಿ ಅಧಿಕಾರಿಗಳಾಗಿ ಉದ್ಯೋಗ ಪಡೆದಿದ್ದಾರೆ. ಬಹುತೇಕ ಮಂದಿ ಗಲ್ಫ್ ಸೇರಿದಂತೆ ಇತರ ರಾಷ್ಟ್ರಗಳಲ್ಲಿ ಉದ್ಯೋಗದಲ್ಲಿದ್ದಾರೆ. ಉಳಿದಂತೆ ರಾಜ್ಯದ ವಿವಿಧ ನಗರಗಳು ಮತ್ತವಲ್ಲದೆ, ಮಹಾರಾಷ್ಟ್ರ, ಗುಜರಾತ್, ಹೈದರಾಬಾದ್ ಮತ್ತು ಚೆನ್ನೈನಲ್ಲೂ ಸಾಕಷ್ಟು ಮಂದಿ ಉದ್ಯೋಗದಲ್ಲಿದ್ದಾರೆ.



ಹೆಚ್ಚಿನ ಮಾಹಿತಿಗೆ www.mifse.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಅಲ್ಲದೆ, ಮಂಗಳೂರಿನ ಪಂಪ್‌ವೆಲ್‌ನ ಸಿಪಿ ಕಾಂಪ್ಲೆಕ್ಸ್‌ನ ಎರಡನೇ ಮಹಡಿಯಲ್ಲಿರುವ ಸಂಸ್ಥೆಯ ಪ್ರಧಾನ ಕಚೇರಿ ಅಥವಾ ಉಡುಪಿಯ ನಗರ ಬಸ್ ನಿಲ್ದಾಣ ಸಮೀಪದ ರಾಜ್ ಟವರ್ಸ್‌ನ ಮೂರನೇ ಮಹಡಿಯಲ್ಲಿರುವ ಸಂಸ್ಥೆಯ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮೂರೇ ತಿಂಗಳಲ್ಲಿ ಸಿಗಲಿಗೆ ಜಾಬ್!: ಎಂಐಎಫ್‌ಎಸ್‌ಇ ಸಂಸ್ಥೆಯಲ್ಲಿ ಒಂದು ವರ್ಷ ಮತ್ತು ಆರು ತಿಂಗಳ ಕೋರ್ಸ್‌ಗಳ ಜೊತೆಗೆ 3 ತಿಂಗಳ ಕ್ರ್ಯಾಶ್ ಕೋರ್ಸ್ ಕೂಡ ಮಾಡಬಹುದು. ಮೂರು ತಿಂಗಳ ಈ ಕೋರ್ಸ್ ಪೂರ್ಣಗೊಳ್ಳುತ್ತಿದ್ದಂತೆ ಶೇ.100ರಷ್ಟು ಉದ್ಯೋಗ ಗ್ಯಾರಂಟಿ. ಇದು ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶವಾಗಿದೆ. ಸಂಸ್ಥೆಗೆ ಪ್ರವೇಶಾತಿ ಪಡೆಯ ಬಯಸುವ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ 10 ಸಾವಿರ ರೂ. ಸ್ಪಾಟ್ ಡಿಸ್ಕೌಂಟ್ ವಿಶೇಷತೆಯಾಗಿದೆ. ಎಕ್ಸ್‌ಕ್ಲೂಸಿವ್ ಪ್ರಾಯೋಗಿಕ ತರಬೇತಿಯನ್ನೂ ಸಂಸ್ಥೆ ನೀಡುತ್ತಿದೆ. ಎಂಐಎಫ್‌ಎಸ್‌ಇ ಸಂಸ್ಥೆಯು ಒಟ್ಟು 10 ಶಾಖೆಗಳನ್ನು ಹೊಂದಿದೆ. ಮಂಗಳೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ನಗರ ವಿಶ್ವವಿದ್ಯಾನಿಲಯಗಳಿಂದ ಮಾನ್ಯತೆ ಪಡೆದಿದ್ದು, 'ಎನ್‌ಎಸ್‌ಡಿಸಿ–ಸ್ಕಿಲ್ ಇಂಡಿಯಾ'ದ ಮಾನ್ಯತೆಯನ್ನೂ ಹೊಂದಿದೆ. ಯುಕೆ ಮೂಲದ ಪರೀಕ್ಷಾ ಮಂಡಳಿಯಾದ ಎನ್‌ಇಬಿಓಎಸ್‌ಹೆಚ್ (ನೆಬೋಷ್) ಇಂಟರ್‌ನ್ಯಾಷನಲ್ ಸರ್ಟಿಫಿಕೇಶನ್ ಪಡೆಯಲೂ ಸಂಸ್ಥೆಯಲ್ಲಿ ಅವಕಾಶವಿದೆ.

ವಿದ್ಯಾರ್ಥಿಗಳಲ್ಲಿ ಮಾಹಿತಿ ಕೊರತೆ

'ಫೈರ್ ಆಂಡ್ ಸೇಫ್ಟಿ' ಎಂದಾಕ್ಷಣ ಬಹುತೇಕ ಮಂದಿ 'ಅಗ್ನಿಶಾಮಕ ದಳ' ಎಂದು ಭಾವಿಸುತ್ತಾರೆ. ಆದರೆ ಇದು ಅಗ್ನಿಶಾಮಕ ದಳಕ್ಕಿಂತಲೂ ಒಂದು ಹೆಜ್ಜೆ ಮುಂದಿದೆ. ಉದ್ದಿಮೆ, ಕಚೇರಿ, ಸಂಸ್ಥೆಗಳಲ್ಲಿ ಅವಘಡ–ದುರಂತಗಳು ನಡೆಯದಂತೆ ಅಲ್ಲಿನ ಕಾರ್ಮಿಕರು ಮತ್ತು ಉದ್ಯೋಗಿಗಳಲ್ಲಿ ಜಾಗೃತಿ ಮೂಡಿಸುವುದು, ಮುನ್ನೆಚ್ಚರಿಕಾ ಕ್ರಮಗಳನ್ನು ಪರಿಶೀಲಿಸಿ, ಸೂಕ್ತ ಮಾರ್ಗದರ್ಶನ ನೀಡುವುದೇ ಇದಾಗಿದೆ. ಇದರಲ್ಲಿ ಸೇಫ್ಟಿ ಅಸಿಸ್ಟೆಂಟ್ ಹುದ್ದೆಯಿಂದ ಆರಂಭವಾಗಿ ಸೇಫ್ಟಿ ಸೂಪರ್‌ವೈಸರ್, ಸೇಫ್ಟಿ ಟೆಕ್ನಿಷಿಯನ್, ಸೇಫ್ಟಿ ಇಂಜಿನಿಯರ್, ಡಿಜಿಎಂ ಸೇಫ್ಟಿ ಹುದ್ದೆವರೆಗೆ ಉದ್ಯೋಗಾವಕಾಶಗಳಿದ್ದು, ತಿಂಗಳಿಗೆ ಲಕ್ಷಕ್ಕೂ ಮೇಲ್ಪಟ್ಟು ವೇತನ ಪಡೆಯುವವರೂ ಇದ್ದಾರೆ.

ಮಕ್ಕಳು ಹಾಳಾಗಲು ಪಾಲಕರೇ ಕಾರಣ



ಮೈಸೂರು, ಜು. 23– ಶ್ರೀ ಛಾಯಾ ದೇವಿ ವಿದ್ಯಾನಿಕೇತನ ಶಾಲೆಯ ವತಿಯಿಂದ ಪೋಷಕರಿಗಾಗಿ ಇಂದಿನ ತಂತ್ರಜ್ಞಾನ ಮತ್ತು ಮೊಬೈಲ್ ಯುಗದಲ್ಲಿ ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ವಿಷಯ ಕುರಿತು ಕೆಪಿಟಿಸಿಎಲ್ ಸಮುದಾಯ ಭವನದಲ್ಲಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ವೇಳೆ ಸಂಪನ್ಮೂಲ ವ್ಯಕ್ತಿ ಡಾ ಅಂಥೋಣಿ ಪಾಲ್‌ರಾಜ್ ಮಾತನಾಡಿ, ಮಕ್ಕಳನ್ನು ಬೆಳೆಸುವಲ್ಲಿ ಹೆತ್ತವರಿಗಾಗಿ ಇರಬೇಕಾದ ಆಸಕ್ತಿ, ಅನುಭವ, ಜಾಗರೂಕತೆ, ಕಾಳಜಿ, ಬದ್ಧತೆ, ಪರಿಜ್ಞಾನದ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ಪೋಷಕರು ಕೇವಲ ಸಂಡೆ ಮಮ್ಮಿ ಡ್ಯಾಡಿ ಆಗದೇ ಪ್ರತಿನಿತ್ಯವೂ ಜವಾಬ್ದಾರಿಯುತ ಪೋಷಕರಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಎನ್.ಆರ್. ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಶಿಕ್ಷಕರಾದ ಮಂಜುನಾಥ್, ಶಿಕ್ಷಕರಾದ ಪ್ರಶಾಂತ್, ರೇಣುಕಾ, ರೂಪ ಮತ್ತು ಸುಜಾತ ಹಾಗೂ 350ಕ್ಕೂ ಹೆಚ್ಚು ಪೋಷಕರು ಭಾಗವಹಿಸಿದ್ದರು.



ಮೈಸೂರಿನ ಹೆಲ್ಪಿಂಗ್ ಹ್ಯಾಂಡ್ಸ್ ಸಂಸ್ಥೆಯು ತನ್ನ ಆರೋಗ್ಯ ಯೋಜನೆಯಡಿ ಬೋಗಾದಿ ಕೆ. ಹೆಮ್ಮನಹಳ್ಳಿ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಸಿದ್ದರಾಜುಗೆ ವ್ಹೀಲ್‌ಚೇರ್ ಕೊಡುಗೆಯಾಗಿ ನೀಡಿತು. ಯುವ ಸಂಘಟನೆ ಮಾಜಿ ಅಧ್ಯಕ್ಷ ರಾಜನ್ ಬಾಗ್‌ಮಾರ್, ಮನೋಹರ್ ಶಂಕ್ಲ, ಅಧ್ಯಕ್ಷ ರಾಕೇಶ್ ಬಾಂಟಿಯಾ, ಕಾರ್ಯದರ್ಶಿ ಕಿರಣ್ ಸಲೇಚಾ, ಉಪಾಧ್ಯಕ್ಷ ನವರತ್ನ ಡರ್ಲಾ, ಖಜಾಂಚಿ ವಿಕಾಸ್ ಡರ್ಲಾ, ಜಂಟಿ ಕಾರ್ಯದರ್ಶಿ ದಿನೇಶ್ ಪಿಪಾಡ, ಶಾಲಾ ಸಮಿತಿ ಅಧ್ಯಕ್ಷ ಅಭಿಷೇಕ್ ಸಿಂಗಾವಿ, ಭರತ್ ಪಟ್ವಾ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.7.2023 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಕೃಷ್ಣ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ಕಾಲೇಜು ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ):** ಸಾಂಸ್ಕೃತಿಕ ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ರೇಂಜರ್ಸ್, ರೆಡ್‌ಕ್ರಾಸ್ ಘಟಕದ ಚಟುವಟಿಕೆಗಳ ಸಮಾರೋಪ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಉದಯೋನ್ಮುಖ ನಟಿ, ಗಾಯಕಿ ಕು. ಅದಿತಿ ಸಾಗರ್, ಅಧ್ಯಕ್ಷತೆ: ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಪ್ರಾಂಶುಪಾಲರಾದ ಡಾ.ಡಿ.ರವಿ, ಸ್ಥಳ: ಕಾಲೇಜಿನ ಕಲಾಮಂಟಪ, ಬೆಳಗ್ಗೆ 11 ಗಂಟೆಗೆ.


■ **ಶ್ರೀ ವ್ಯಾಸರಾಜಪುರ ಮಠ, ಸೋಸಲೆ (ಮುನಿತ್ರಮ ಪೀಠ), ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿ. ಶ್ರೀನಿಧಿ ಆಚಾರ್ಯ ಪ್ಯಾಟಿ (ಬಾಲಕಾಂಡ) ಅವರಿಂದ ಪ್ರವಚನ, ಸ್ಥಳ: ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ 7ರವರೆಗೆ.

■ **ಸಹಾರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ, ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ, ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಶ್ರಾವಣ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಜೆ 6 ರಿಂದ 7ರವರೆಗೆ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀನಿಧಿ ಆಚಾರ್ಯ ಪ್ಯಾಟಿ ಅವರಿಂದ ಪ್ರವಚನ ಸ್ಥಳ: ಶ್ರೀ ಸೋಸಲೆ ವ್ಯಾಸರಾಜ ಮಠ, ಕೃಷ್ಣಮೂರ್ತಿಪುರಂ.

■ **ಶ್ರೀ ಕೃಷ್ಣ ಟ್ರಸ್ಟ್ ಚಾತುರ್ಮಾಸ್ಯ ಸಮಿತಿ:** ಪೇಜಾವರ ಅಧೋಕ್ಷಜ ಮಠ ಶ್ರೀ ಪ್ರಸನ್ನತೀರ್ಥ ಸ್ವಾಮೀಜಿಗಳ 36ನೇ ಚಾತುರ್ಮಾಸ್ಯ ವ್ರತ, ಭಜನೆಗಳು, ಭಾಗವತ ಪ್ರವಚನ, ರಾಮಾಯಣ ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮಗಳು, ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 5 ರಿಂದ 8 ಗಂಟೆವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕೆ.ಗುಣಪಾಲ್ ಜೈನ್, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: 'ಮಹಾ ಮೋಜಣಿ' ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಭಾವಗೀತೆಗಳು: ಮೈಸೂರು ಅನಂತಸ್ವಾಮಿ, ಶಿವಮೊಗ್ಗ ಸುಬ್ಬಣ್ಣ, 9.05 ವಸುದೈವ ಕುಟುಂಬಕಂ– ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮ– ಹೆಸರಾಂತ ಅಂಕಣಕಾರರಾದ ಪ್ರೊ. ಎಚೆಸ್ಕೆ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಅವರು ನಡೆಸಿದ್ದ ಸಂವಾದದ 3ನೇ ಭಾಗ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 10.00 ಲಯ ಸಂಭ್ರಮ–"ಕರ್ನಾಟಕ ಮತ್ತು ಮೈಸೂರು ಸಂಸ್ಥಾನದಲ್ಲಿ ಮೃದಂಗವಾದನದ" ಪರಂಪರೆ. ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ: ಮದ್ವೇಶ್ ವಿ., 12.45 ನಮ್ಮ ಆರೋಗ್ಯ: "ವಿಶ್ವ ಹೆಪಾಟಿಟಿಸ್ ದಿನಾಚರಣೆಯ ಸಂಬಂಧವಾಗಿ ಹೆಪಟಿಟಿಸ್" ವಿಧಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಮಾಧುರಿ ಕುಲಕರ್ಣಿ ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುವವರು ಬೇದ್ರೆ ಮಂಜುನಾಥ್, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ–ಲಲಿತಾ ಹೆಚ್.ಎಂ., 3.00 ವಿ.ದೇಶಿಕಾಚಾರ್– ವೇಣುವಾದನ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ವಿಷಯ– ಪಂಚಕರ್ಮ ಚಿಕಿತ್ಸೆ ಏಕೆ ಬೇಕು, ಭಾಗವಹಿಸುವ ವೈದ್ಯರು– ಡಾ. ಶಶಿರೇಖಾ, ಪ್ರಸ್ತುತಿ–ಎಂ.ಎಸ್.ಭಾರತಿ, 4.45 ಹಿಂದಿ ಪಾಠ: ಶಾಂತಾ ಡಿ. ಕಿಣಿ, 6.50 ಕೃಷಿರಂಗ: ಕಿಸಾನ್ ವಾಣಿ–ಕೃಷಿ ಇಲಾಖೆ ಕಾರ್ಯಚಟುವಟಿಕೆಗಳನ್ನು ಕುರಿತು ಸಂವಾದದಲ್ಲಿ ಭಾಗವಹಿಸುವವರು ವಿ.ಎಸ್.ಅಶೋಕ್ ಮತ್ತು ಮಮತಾ, ಪ್ರಸ್ತುತಿ–ಎನ್.ಕೇಶವಮೂರ್ತಿ. **ರಾತ್ರಿ:** 9.30 ಹಳ್ಳಿ ಹಾಡು: ಪ್ರಸ್ತುತಿ– ಅಬ್ದುಲ್ ರಶೀದ್, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ.

ಸಾವಿರಕ್ಕೂ ಹೆಚ್ಚು ಔಷಧಿ ಗಿಡ ವಿತರಣೆ



ಮೈಸೂರು,ಜು.23(ಎಸ್‌ಪಿಎನ್)–ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 47ನೇ ವಾರ್ಡ್‌ನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಔಷಧಿ ಗಿಡಗಳನ್ನು ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಎಲ್.ಅರುಣ್ ವಿತರಿಸಿದರು.

ಮೈಸೂರು ವಿಶ್ವಮಾನವ ಜೋಡಿ ರಸ್ತೆಯ 47ನೇ ವಾರ್ಡ್ ವ್ಯಾಪ್ತಿಯ ಸುಮಾ ಸೋಪಾನ ಉದ್ಯಾನವನದಲ್ಲಿ ಹೆಚ್.ವಿ.ರಾಜೀವ್ ಸ್ನೇಹ ಬಳಗ, ಹಸಿರುವ ಮೈಸೂರು ಲಕ್ಷ ವೃಕ್ಷ ಆಂದೋಲನ ಹಾಗೂ ಸ್ವಚ್ಛ ಭಾರತ್ ಪರಿವಾರ್ ಸಹಯೋಗದೊಂದಿಗೆ ನಡೆದ ಸರಳ ಸಮಾರಂಭದಲ್ಲಿ ಭಾಗವಹಿಸಿ ವಿತರಣೆ ಮಾಡಿದರು.

ಕೃಷ್ಣ ತುಳಸಿ, ಮೈಸೂರು ವೀಳ್ಯದೆಲೆ, ಅಮೃತಬಳ್ಳಿ, ಇನ್ಸುಲಿನ್, ಕರಿಬೇವು, ದೊಡ್ಡ ಪತ್ರೆ ಗಿಡ(ಕೆಮ್ಮು ಕಡಿಮೆ ಮಾಡಲು), ಅಲೋವೇರ, ರಾಕ್ಳಿ, ನಿಂಬೆಗಿಡ, ಕಾಮಕಸ್ತೂರಿ, ದಾಸವಾಳ, ದಾಳಿಂಬೆ, ಆಡುಸೋಗೆ, ಪಾರಿಜಾತ, ಪಪ್ಪಾಯಿ ಮತ್ತು ಸೀಬೆ ಗಿಡಗಳು ಸೇರಿದಂತೆ ಇತರೆ ತಳಿಯ ಗಿಡಗಳನ್ನು ವಿತರಿಸಿದರು.

ಈ ವೇಳೆ ಹೆಚ್.ವಿ.ರಾಜೀವ್ ಸ್ನೇಹ ಬಳಗದ ಸದಸ್ಯ ಆರ್.ಕುಮಾರ್ (ಹುಡ್ಕೋ) ಮಾಹಿತಿ ನೀಡಿ, ನಗರಾದ್ಯಂತ ಔಷಧಿಗಳ ವಿತರಣೆಯನ್ನು ಕಳೆದ 7 ವರ್ಷಗಳಿಂದ ನಡೆಸಿಕೊಂಡು ಬರಲಾಗಿದೆ. ಪರಿಸರ ಪ್ರಿಯರ ಹುಟ್ಟುಹಬ್ಬ, ಮದುವೆ ಹಾಗೂ ಇತರೆ ಶುಭ ಸಮಾರಂಭದಲ್ಲಿ ಗಿಡಗಳ ವಿತರಣೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ದ್ಯುತಿ ಮೋಟಾರ್ಸ್‌ನ ಶ್ರೀಕಾಂತರಾಜೇ ಅರಸ್, ಕೋಟಿ ವೃಕ್ಷ ಅಭಿಯಾನ ಶ್ರೀಕಾಂತ್, ಆರ್ ಕುಮಾರ್ (ಹುಡ್ಕೋ), ವಾಸದೇವ, ವೀರಣ್ಣ, ಭಾರತಿ, ಆಟೋ ಕುಮಾರ್, ಕುಮಾರಸ್ವಾಮಿ, ಪುರುಷೋತ್ತಮ್ ಭಟ್, ನಾಗೇಶ್, ಅನಂತ ನಾಗ್, ಶಂಕರ್ ಸೇರಿದಂತೆ ಇತರರಿದ್ದರು.

ಮೈಸೂರು ಮೃಗಾಲಯದಲ್ಲಿ ಯುವ ಸಂಘಟನೆ ಆರಂಭ

● ವಿವಿಧ ಶಾಲಾ-ಕಾಲೇಜುಗಳ 60 ವಿದ್ಯಾರ್ಥಿಗಳು ಭಾಗಿ ● ಪ್ರತಿ ಭಾನುವಾರ ತರಗತಿ





ಮೈಸೂರು,ಜು.23(ಎಂಟಿವೈ)– ಪರಿಸರ ಸಂರಕ್ಷಣೆ ಹಾಗೂ ವನ್ಯಸಂಪತ್ತಿನ ಸಂರಕ್ಷಣೆ ಮಹತ್ವದ ಬಗ್ಗೆ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಮೈಸೂರಿನ ಮೃಗಾಲಯದಲ್ಲಿ 31ನೇ ಯುವ ಸಂಘಟನೆಯ ಚಟುವಟಿಕೆ ಭಾನುವಾರದಿಂದ ಆರಂಭವಾಯಿತು.

ಮೈಸೂರು ಮೃಗಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ 2023ನೇ ಸಾಲಿನ 31ನೇ ಯುವ ಸಂಘಟನೆಯನ್ನು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೂತ್ ಅವರು ಉದ್ಘಾಟಿಸಿದರು. ಬಳಿಕ ಮಾತಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯದಿಂದ ವಿವಿಧ ಸಮಸ್ಯೆಗಳು ಉದ್ಭವಿಸುತ್ತಿದೆ. ಪರಿಸರ ಮಾಲಿನ್ಯದಿಂದಾಗಿ ದುಷ್ಪರಿಣಾಮ ಬೀರುತ್ತಿದೆ. ಅನೇಕ ಸವಾಲುಗಳ ನಮ್ಮನ್ನು ಕಾಡುತ್ತಿದೆ. ಈ ನಿಟ್ಟಿನಲ್ಲಿ ಪರಿಸರ ಸಂರಕ್ಷಣೆಯ ಜವಾಬ್ದಾರಿ ಎಲ್ಲರ ಮೇಲೆ ಹೆಚ್ಚಾಗುತ್ತಿದೆ. ಜನ ಸ್ವಾರ್ಥ ಬಿಡಬೇಕು. ಪರಿಸರ ಹಾಗೂ ಅರಣ್ಯ ಸಂಪತ್ತನ್ನು ಮುಂದಿನ ಪೀಳಿಗೆಗೂ ಕಾಪಾಡಿಕೊಳ್ಳಬೇಕು. ನಮ್ಮ ಭೂಮಿಯನ್ನು ರಕ್ಷಿಸಬೇಕು. ನಾಗರಿಕ ಸುಖ–ಸಂತೋಷಕ್ಕಾಗಿ ನಿಸರ್ಗದ ಸಂಪತ್ತನ್ನೆಲ್ಲ ಬಳಸಿಕೊಳ್ಳುವುದು ಸುಸ್ಥಿರ ಅಭಿವೃದ್ಧಿ ಆಗುವುದಿಲ್ಲ. ಉತ್ತಮ ಪರಿಸರವನ್ನು ಮುಂದಿನ ಪೀಳಿಗೆಗೂ ಉಳಿಸುವುದು ಎಲ್ಲರ ಹೊಣೆಗಾರಿಕೆ ಎಂದರು.

ಆಧುನಿಕ ಯುಗದಲ್ಲಿ ಬಹುತೇಕರು ಹಣ ಸಂಪಾದನೆ ಮಾಡಿ ನೆಮ್ಮದಿ ಪಡೆಯಲು ಕಸರತ್ತು ಮಾಡುತ್ತಿದ್ದಾರೆ. ಇದು ಸರಿಯಲ್ಲ. ಪರಿಸರ ಉಳಿದರೆ ಮನುಷ್ಯ ಉಳಿಯುತ್ತಾನೆ. ಪರಿಸರ ಹಾಳಾದರೆ ಇಡೀ ಭೂಮಂಡಲಕ್ಕೆ ಕಂಟಕ ಎದುರಾಗಲಿದೆ. ಇನ್ನಾದರೂ ಜನ ಎಚ್ಚೆತ್ತುಕೊಳ್ಳಬೇಕು. ಪರಿಸರ ಸಂರಕ್ಷಣೆ, ವನ್ಯಜೀವಿಗಳ ರಕ್ಷಣೆಗೆ ಸಹಕರಿಸಬೇಕು. ಅರಣ್ಯ ನಾಶ, ಮರಗಳ ಹನನಕ್ಕೆ ಕಡಿವಾಣ ಬೀಳಬೇಕು. ಯುವ ಪೀಳಿಗೆಯಲ್ಲಿ ಪರಿಸರದ ಮಹತ್ವದ ಅರಿವು ಮೂಡಿಸಬೇಕು. ಮೈಸೂರು ಮೃಗಾಲಯವು ಯುವ ಸಂಘಟನೆ ಮೂಲಕ ಪರಿಸರದ ಕಾಳಜಿಯನ್ನು ಮಕ್ಕಳಲ್ಲಿ ಮೂಡಿಸುವ ಕಾರ್ಯ ನಡೆಸುತ್ತಿರುವುದು ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಯುವ ಸಂಘಟನೆ: ಮೃಗಾಲಯದ ಯುವ ಸಂಘಟನೆ ಒಂದು ಶೈಕ್ಷಣಿಕ ಕಾರ್ಯಕ್ರಮವಾಗಿದ್ದು, ಪರಿಸರ ಶಿಕ್ಷಣ ಒದಗಿಸಲಿದೆ. 12ರಿಂದ 18 ವರ್ಷ ವಯಸ್ಸಿನ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಯುವ ಸಂಘಟನೆ ಸೇರಲು ಅವಕಾಶ ನೀಡಲಾಗಿದ್ದು, ಈ ಬಾರಿ 60 ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗಿದೆ. ಪ್ರತಿ ಭಾನುವಾರ ಬೆಳಗ್ಗೆ 8.30ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿವಿಧ ಚಟುವಟಿಕೆ ನಡೆಯಲಿದ್ದು, ಯುವ ಸಂಘಟನೆಯ ವಿದ್ಯಾರ್ಥಿಗಳಿಗೆ ವನ್ಯಪ್ರಾಣಿಗಳ ವೈವಿಧ್ಯತೆ, ಮೌಲ್ಯತೆ, ಸಂರಕ್ಷಣೆ ಹಾಗೂ ಮೃಗಾಲಯ ಪರಿಸರದಲ್ಲಿ ಪ್ರಾಣಿಗಳ ನಿರ್ವಹಣೆ, ಅವುಗಳ ವರ್ತನೆ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಒದಗಿಸಲಾಗುತ್ತದೆ. ಅಲ್ಲದೆ, ಪ್ರಾಣಿಗಳ ಜೀವನ ಕ್ರಮ, ಆಹಾರ ಪದ್ಧತಿ, ಜೀವಿತಾವಧಿ, ವರ್ತನೆ ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ತಿಳಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್‌ಕುಮಾರ್ ಇದ್ದರು.

ಇಂದು ಸ್ವಾತಂತ್ರ್ಯ ಅತಿರೇಕಕ್ಕೆ ಹೋಗಿದೆ: ಪೇಜಾವರ ಶ್ರೀಗಳ ವಿಷಾದ



ಮೈಸೂರು, ಜು.23(ಸಿಎನ್)–ಅಂದಿನ ಸ್ವಾತಂತ್ರ್ಯಕ್ಕೂ ಈಗಿರುವ ಸ್ವಾತಂತ್ರ್ಯಕ್ಕೂ ತುಂಬಾ ವ್ಯತ್ಯಾಸವಿದೆ. ಈಗಿರುವ ಸ್ವಾತಂತ್ರ್ಯ ಅತಿರೇಕಕ್ಕೆ ಹೋಗಿದ್ದು, ನಮ್ಮ ಅಸ್ತಿತ್ವದ ಬಗ್ಗೆ ಪ್ರಶ್ನೆ ಕೇಳುವಂತ ಸ್ಥಿತಿ ನಿರ್ಮಾಣವಾಗಿದೆ. ನಾವೆಲ್ಲರೂ ಒಗ್ಗಟ್ಟಾಗಿದ್ದರೆ, ಯಾರನ್ನು ಬೇಕಾದರೂ ಹೆದರಿಸುವ ಧೈರ್ಯ ನಮ್ಮದಾಗುತ್ತದೆ ಎಂದು ಉಡುಪಿಯ ಪೇಜಾವರ ಮಠಾಧೀಶರಾದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಕರೆ ನೀಡಿದರು.

ತಿಲಕ್ ನಗರದ ಶನೇಶ್ವರ ದೇವಸ್ಥಾನದ ಬಳಿ ವೀರ ಸಾವರ್ಕರ್ ಯುವ ಬಳಗ ವತಿಯಿಂದ ಭಾನುವಾರ ಆಯೋಜಿಸಲಾಗಿದ್ದ 'ಲೋಕಮಾನ್ಯ ಬಾಲ ಗಂಗಾಧರ ತಿಲಕರ 167ನೇ ಜಯಂತ್ಯುತ್ಸವ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ ಈ ಮಹಾನ್ ಚೇತನರು ಕೊಟ್ಟ ಭಿಕ್ಷೆ ಅವರು ಕೊಟ್ಟಿರುವ ಸ್ವಾತಂತ್ರ್ಯ ಕೈ ತಪ್ಪಿ ಹೋಗದ ಹಾಗೇ ನಾವು ಕಾಪಾಡಿಕೊಳ್ಳಬೇಕು. ಆ ಮೂಲಕ ಬಾಲಗಂಗಾಧರ ತಿಲಕರಿಗೆ ಗೌರವ ಸಮರ್ಪಿಸಬೇಕು. ಎಲ್ಲರೂ ಒಗ್ಗಟ್ಟಿನಲ್ಲಿ ಬಾಳಬೇಕು, ನಮ್ಮಲ್ಲಿ ಒಡಕು ಮೂಡಿ, ಮೂರನೇಯವರು ನಮ್ಮ ನಡುವೆ ಬೇಳೆ ಬೇಯಿಸಿಕೊಳ್ಳಲು ಅವಕಾಶ ನೀಡಬಾರದು ಎಂದು ಒಗ್ಗಟ್ಟಿನ ಮಂತ್ರ ಪಠಿಸಿದರು.

ಬಳಿಕ ಖ್ಯಾತ ವಾಗ್ಮಿ ನಿತ್ಯಾನಂದ ವಿವೇಕ್ ವಂಶಿ ಮಾತನಾಡಿ, ಮೈಸೂರಿನ ನಗರದ ರಸ್ತೆಗಳಿಗೆ ಮಹಾತ್ಮರ ಪೂರ್ಣ ಹೆಸರಿಟ್ಟಿದ್ದಾರೆ. ಆದರೆ ಎಲ್ಲಾ ವೃತ್ತಗಳಲ್ಲಿನ ಹೆಸರುಗಳನ್ನು ತುಂಡರಿಸಲಾಗಿದೆ. ಉದಾಹರಣೆಗೆ ಮಹಾತ್ಮ ಗಾಂಧೀಜಿ ಅವರ ಹೆಸರು ಎಂ.ಜಿ ರಸ್ತೆ, ಜಾನ್ಸಿ ರಾಣಿ ಲಕ್ಷ್ಮಿ ಬಾಯಿ ಹೆಸರನ್ನು, ಜೆಎಲ್‌ಬಿ ರಸ್ತೆ, ಕೃಷ್ಣದೇವರಾಯರ ಹೆಸರು ಕೆಡಿ ರಸ್ತೆ ಹೀಗೆ ಹತ್ತು ಹಲವು ಸಾಕ್ಷಿಗಳಿವೆ. ಹೆಸರಿಟ್ಟರೆ ಒಳ್ಳೆಯದೇ ಆದರೆ ಅವುಗಳನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೆ ಯಾವ ಸಂದೇಶ ನೀಡುತ್ತೇವೆ ಎನ್ನುವುದು ಮುಖ್ಯವಾಗುತ್ತದೆ ಎಂದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮೊದಲನೇ ಸಾಮೂಹಿಕ ನಾಯಕ ತಿಲಕರು. ವೈವಿಧ್ಯಪೂರ್ಣ, ವಿಶಿಷ್ಟ ವ್ಯಕ್ತಿತ್ವ, ಪತ್ರಕರ್ತರಾಗಿ, ಶಿಕ್ಷಣ ತಜ್ಞರಾಗಿ ಲೇಖಕರಾಗಿ, ಸ್ವದೇಶಿ ಉದ್ಯಮಿಯಾಗಿ, ರಾಜಕೀಯ ನೇತಾರರಾಗಿ ಹಿಂದೂ, ಮುಸ್ಲಿಂ ಐಕ್ಯತಾ ಪುರುಷರಾಗಿ ಸಮಾಜ ಸುಧಾರಕರಾಗಿ, ರಾಷ್ಟ್ರ ನಾಯಕರಾಗಿ, ಪ್ರಚಂಡ ಜನ ಜಾಗೃತಿ ಮೂಡಿಸಿದ ಅವರ ವ್ಯಕ್ತಿತ್ವಕ್ಕೆ ಸರಿಸಾಟಿಯಿಲ್ಲ.

ಸ್ವಾತಂತ್ರ್ಯ ಹೋರಾಟದ ಲಾಲ್, ಬಾಲ್, ಪಾಲ್ ಸುಪ್ರಸಿದ್ಧ ತ್ರಿಮೂರ್ತಿಗಳಲ್ಲಿ ಒಬ್ಬರಾಗಿದ್ದ ತೀವ್ರಗಾಮಿ ನಾಯಕ ತಿಲಕರು ಒಟ್ಟು 88 ತಿಂಗಳ ಕಠಿಣ ಸಮಯ ಕಾರಾಗೃಹದಲ್ಲಿದ್ದಾಗ ಕುಪ್ರಸಿದ್ಧ ಕರಿನೀರಿನ ಶಿಕ್ಷೆಗೆ ಗುರಿಯಾಗಿದ್ದರು ಎಂದು ಸುದೀರ್ಘವಾಗಿ ಸ್ಮರಿಸಿದರು.

ಈ ಸಂದರ್ಭ ಚಾಮರಾಜ ಕ್ಷೇತ್ರ ಮಾಜಿ ಶಾಸಕ ಎಲ್.ನಾಗೇಂದ್ರ ನಗರ ಪಾಲಿಕೆ ಸದಸ್ಯ ರಂಗಸ್ವಾಮಿ, ವೀರ ಸಾವರ್ಕರ್ ಯುವ ಬಳಗದ ಅಧ್ಯಕ್ಷ ರಾಕೇಶ್ ಭಟ್, ವಿಶ್ವ ಹಿಂದೂ ಪರಿಷತ್ ಮೈಸೂರು ಜಿಲ್ಲಾ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್, ಜೀವಧಾರ ರಕ್ತನಿಧಿ ಕೇಂದ್ರ ಗಿರೀಶ್, ವಾರ್ಡಿನ ರಾಜು, ಶಿವಾಜಿ ರಾವ್, ಸ್ವಾಮಿ, ರಾಜೇಂದ್ರ ಶಂಕರ, ಶಿವಣ್ಣ, ಗುರುಪ್ರಸಾದ್, ತಿಲಕನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಜೀವಿತ ಶ್ರೀನಿವಾಸ್, ನಾಗಮಣಿ, ದರ್ಶನ್ ಮೂರ್ತಿ ಹಾಗೂ ಗ್ರಾಮಸ್ಥರು ಭಾಗಿಯಾಗಿದ್ದರು.

ಅಸಹಾಯಕರಿಗೆ ಮನೆನಿರ್ಮಾಣ ಸಂಕಲ್ಪ

ಪೇಜಾವರ ಶ್ರೀಗಳು ಮೈಸೂರಿನಲ್ಲಿ 80 ದಿನಗಳ ಕಾಲ ಚಾತುರ್ಮಾಸ ವ್ರತವನ್ನು ಕೈಗೊಂಡಿರುವ ಪ್ರಯುಕ್ತ, ಸಮಾಜಮುಖಿ ಕೆಲಸಗಳಲ್ಲಿ ತೊಡಗುವ ದೃಷ್ಟಿಯಿಂದ, ನಮ್ಮನ್ನೆಲ್ಲಾ ಸೇರಿಸಿ ಒಂದು ಸಭೆ ಮಾಡಿದ್ದರು. ಸಭೆಯಲ್ಲಿ ಮೈಸೂರಿನ ಎಲ್ಲಾ ಬಡಾವಣೆಗಳಿಗೆ ಅನ್ವಯಿಸುವಂತೆ, ಸರಿಯಾದ ದಾಖಲೆಯಿದ್ದು ಈಗಾಗಲೇ ಮನೆಗಳು ಶಿಥಿಲಾವಸ್ಥೆ ತಲುಪಿ ಸರಿಪಡಿಸಿಕೊಳ್ಳಲಾಗದ ಅಸಹಾಯಕ ಬಡ ಜನರಿಗೆ ಮನೆ ನಿರ್ಮಾಣ ಮಾಡಿಕೊಡುವ ಸಂಕಲ್ಪ ಮಾಡಿದ್ದಾರೆ ಎಂದು ಮಾಹಿತಿ ನೀಡಿದರು.

-ಟಿ.ಎಸ್.ಶ್ರೀವತ್ಸ, ಶಾಸಕರು, ಕೃಷ್ಣರಾಜ ವಿಧಾನಸಭಾ ಕ್ಷೇತ್ರ.

ಸ್ಟಾರ್ ಹುಂಡೈನಲ್ಲಿ ಗ್ರ್ಯಾಂಡ್ 'ಹುಂಡೈ ಎಕ್ಸ್‌ಟರ್' ಬಿಡುಗಡೆ



ಮೈಸೂರಿನ ಬನ್ನಿಮಂಟಪದಲ್ಲಿರುವ ಸ್ಟಾರ್ ಹುಂಡೈ ಶೋ ರೂಮ್‌ನಲ್ಲಿ ಇತ್ತೀಚೆಗೆ ಎಲ್ಲಾ ಹೊಸ ಹುಂಡೈ ಎಕ್ಸ್‌ಟರ್ ಕಾರ್‌ಗಳನ್ನು ಬಿಡುಗಡೆ ಮಾಡಲಾಯಿತು. ಕೆಪಿಆರ್ ಸಮೂಹ ಸಂಸ್ಥೆಯ (ಸ್ಟಾರ್ ಹುಂಡೈ) ವ್ಯವಸ್ಥಾಪಕ ನಿರ್ದೇಶಕ ಪಿ.ವಿ.ಜಯರಾಮ್, ಇವರ ಪುತ್ರ ಹೇಮಂತ್, 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ, ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಆಡಳಿತ ಮುಖ್ಯಸ್ಥ ಮತ್ತು ಪಿಆರ್ ಯಶವಂತ್ ಮತ್ತು ಚಿರಾಗ್ ಆ್ಯಡ್ಸ್‌ನ ವಿವೇಕ್ ಅವರು ಚಿತ್ರದಲ್ಲಿದ್ದಾರೆ. ಇದೇ ವೇಳೆ ಮಾತನಾಡಿದ ಪಿ.ವಿ.ಜಯರಾಮ್, ಹೊಸ ಹುಂಡೈ ಎಕ್ಸ್‌ಟರ್ ಸಂಬಂಧ ನಮಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಹೀಗಾಗಿ ಇದರ ಬಿಡುಗಡೆ ನಮ್ಮಲ್ಲಿ ರೋಮಾಂಚನ ಉಂಟು ಮಾಡಿದೆ. ಈ ನೂತನ ವಾಹನವು ಹುಂಡೈನ ಶ್ರೇಷ್ಠತೆ ಮತ್ತು ಬದ್ಧತೆಯ ಮೈಲುಗಲ್ಲನ್ನು ಪ್ರತಿನಿಧಿಸುತ್ತದೆ. ಜೊತೆಗೆ ಮೈಸೂರಿನ ನಮ್ಮ ಮೌಲ್ಯಯುತ ಗ್ರಾಹಕರಿಗೆ ಇದನ್ನು ತಲುಪಿಸಲು ನಾವು ಹೆಮ್ಮೆಪಡುತ್ತೇವೆ. ಗೌರವಾನ್ವಿತ ಅತಿಥಿಗಳ ಉಪಸ್ಥಿತಿಗೆ ನಾವು ಕೃತಜ್ಞತರಾಗಿದ್ದು, ನಮ್ಮ ಪ್ರೀತಿಯ ಗ್ರಾಹಕರು, ನಮ್ಮನ್ನು ಬೆಂಬಲಿಸುವವರ ನಂಬಿಕೆಯು ನಾವು ಇನ್ನಷ್ಟು ಉತ್ತಮ ಸೇವೆ ಒದಗಿಸಲು ಸ್ಫೂರ್ತಿ ನೀಡುತ್ತದೆ ಎಂದು ಹೇಳಿದರು.

ಮಣಿಪುರದಲ್ಲಿ ಮಹಿಳೆಯರ ವಿವಸ್ತ್ರಗೊಳಿಸಿ ಮೆರವಣಿಗೆ ಘಟನೆ ಖಂಡಿಸಿ ಪ್ರತಿಭಟನೆ



ಮೈಸೂರು, ಜು.23(ಎಸ್‌ಬಿಡಿ)– ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ನಡೆಸಿ, ಅತ್ಯಾಚಾರವೆಸಗಿರುವುದನ್ನು ಖಂಡಿಸಿ ಮೈಸೂರಿನಲ್ಲಿ ಎಐಡಿಎಸ್‌ಓ ವತಿಯಿಂದ ಭಾನುವಾರ ಪ್ರತಿಭಟಿಸಲಾಯಿತು.

ನಗರದ ರಾಮಸ್ವಾಮಿ ವೃತ್ತದ ಬಳಿ ಡಿ.ಸುಬ್ಬಯ್ಯ ರಸ್ತೆಯಲ್ಲಿರುವ ಸಂಘಟನೆ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಮಣಿಪುರದಲ್ಲಿ ಹಿಂಸಾಚಾರದ ಜೊತೆಗೆ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯವೆಸಗಲಾಗುತ್ತಿದೆ. ಈ ಅಮಾನವೀಯ ಕೃತ್ಯವೆಸಗಿದವರಿಗೆ ಕಠಿಣಾತಿ ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಲಾಯಿತು.

ಈ ವೇಳೆ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್ ಮಾತನಾಡಿ, ಮಣಿಪುರದಲ್ಲಿ ಮಹಿಳೆಯರಿಬ್ಬರ ಬೆತ್ತಲೆ ಮೆರವಣಿಗೆ ನಡೆಸಿ, ಸಾಮೂಹಿಕ ಅತ್ಯಾಚಾರವೆಸಗಿರುವುದನ್ನು ಸಂಘಟನೆ ಅತ್ಯುಗ್ರವಾಗಿ ಖಂಡಿಸುತ್ತದೆ. ಸಮುದಾಯಗಳ ಸಂಘರ್ಷದ ನೆಪದಲ್ಲಿ ಹತ್ಯೆ, ಅತ್ಯಾಚಾರ ನಡೆಸಲಾಗುತ್ತಿದೆ. ಎರಡು ತಿಂಗಳಿಂದ ಮಣಿಪುರದಲ್ಲಿ ಅಮಾನುಷ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು..

ಈ ಸಂದರ್ಭದಲ್ಲಿ ಮಾನ ವತೆ ಉಳಿವಿಗೆ ಎಲ್ಲರೂ ಒಂದಾಗ ಬೇಕಿದೆ ಎಂದು ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಸಂಘಟನೆ ಪದಾಧಿಕಾರಿಗಳಾದ ನಿತಿನ್, ಚಂದ್ರಕಲಾ, ಸ್ವಾತಿ, ಚಂದನ, ವಿದ್ಯಾರ್ಥಿಗಳಾದ ಸಿದ್ದರಾಜು, ಶ್ರೀಶೈಲ, ಚೇತನ್, ಮೋಹನ್, ದಿವ್ಯ ಮತ್ತಿತರರು ಭಾಗವಹಿಸಿದ್ದರು.



ಮೈಸೂರು ಮಹಾನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರು ತಾವು ಓದಿದ ಯಾದವಗಿರಿ ಸರ್ಕಾರಿ ಶಾಲೆಗೆ ಬಿಸಿನೀರು ಹಾಗೂ ಶುದ್ಧ ನೀರಿನ ಯಂತ್ರ(ವಾಟರ್ ಫಿಲ್ಟರ್) ನೀಡಿದರು. ಈ ಸಂದರ್ಭದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ನಾಗವೇಣಿ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ಮಹೇಶ್, ಡಾ.ವಿಜಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ಸ್ಪರ್ಶ; ಕರ್ತವ್ಯನಿರತ ಲೈನ್‌ಮ್ಯಾನ್ ಸಾವು



ಮೈಸೂರು, ಜು. 23(ಸಿಎನ್) ವಿದ್ಯುತ್ ಪ್ರವಹಿಸಿ ಕರ್ತವ್ಯನಿರತ ಚೆಸ್ಕಾಂ ಸಿಬ್ಬಂದಿ ಸಾವನ್ನಪ್ಪಿದ ಘಟನೆ ಮೈಸೂರಿನ ಹೂಟಗಳ್ಳಿ ಬಡಾವಣೆಯಲ್ಲಿ ಭಾನುವಾರ ನಡೆದಿದೆ. ಟ್ರಾನ್ಸ್‌ಫಾರ್ಮರ್ ಸಮಸ್ಯೆ ಇದೆ ಎಂದು ಸರಿಪಡಿಸುತ್ತಿರುವ ವೇಳೆ ವಿದ್ಯುತ್ ಲೈನ್‌ನಿಂದ ವಿದ್ಯುತ್ ಪ್ರವಹಿಸಿ, ಸಹಾಯಕ ಲೈನ್‌ಮ್ಯಾನ್ ಸಂತೋಷ್(26) ಮೃತರಾಗಿದ್ದಾರೆ. ಈ ಅವಘಡಕ್ಕೆ ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ, ಮುಂಜಾಗ್ರತಾ ಕ್ರಮ ಕೈಗೊಳ್ಳದೇ ದುರಸ್ತಿ ಮಾಡಲು ತಿಳಿಸಿದ್ದಾರೆ. ಇವರ ಬೇಜವಾಬ್ದಾರಿಯಿಂದಲೇ ಸಂತೋಷ್ ಸಾವಿಗೀಡಾಗಿದ್ದಾನೆ ಎಂದು ಮೃತನ ಪೋಷಕರು ಹಾಗೂ ಸ್ನೇಹಿತರು ಆರೋಪಿಸಿದ್ದಾರೆ. ಇನ್ನು ಘಟನಾ ಸ್ಥಳಕ್ಕೆ ಎಸಿಪಿ ಗಜೇಂದ್ರ ಪ್ರಸಾದ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	92.60 ಅಡಿ
ಒಳಹರಿವು	16848 ಕ್ಯುಸೆಕ್
ಹೊರಹರಿವು	5283 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಭಾನುವಾರ	2276.77 ಅಡಿ
ಒಳ ಹರಿವು	17412 ಕ್ಯುಸೆಕ್
ಹೊರ ಹರಿವು	2500 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಭಾನುವಾರ	2854.86 ಅಡಿ
ಒಳ ಹರಿವು	20900 ಕ್ಯುಸೆಕ್
ಹೊರ ಹರಿವು	35000 ಕ್ಯುಸೆಕ್

ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ಅವರಿಗೆ ಮುದ್ದುರಾಮ ಪ್ರಶಸ್ತಿ ಪ್ರದಾನ



ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ಅವರಿಗೆ 'ಮುದ್ದುರಾಮ ಪ್ರಶಸ್ತಿ' ಹಾಗೂ ಚೌಪದಿ ರಚನಾಕಾರ ಎಂ.ಮುತ್ತುಸ್ವಾಮಿಯವರಿಗೆ 'ಮುದ್ದುರಾಮ ಪುರಸ್ಕಾರ' ನೀಡಿ ಗೌರವಿಸಲಾಯಿತು. ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹಿರಿಯ ಸಾಹಿತಿಗಳಾದ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, ಕೆ.ಸಿ.ಶಿವಪ್ಪ, ಶಿಕ್ಷಣ ತಜ್ಞ ಗುರುರಾಜ ಕರಜಗಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ ಮತ್ತಿತರಿದ್ದರು.

ಮೈಸೂರು, ಜು.23(ಎಂಕೆ)– ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಖ್ಯಾತ ವಾಗ್ಮಿ, ಸಂಸ್ಕೃತಿ ಚಿಂತಕ ಹಿರೇಮಗಳೂರು ಕಣ್ಣನ್ ಅವರಿಗೆ 'ಮುದ್ದುರಾಮ ಪ್ರಶಸ್ತಿ' ಹಾಗೂ ಚೌಪದಿ ರಚನಾಕಾರ ಎಂ.ಮುತ್ತುಸ್ವಾಮಿಯವರಿಗೆ 'ಮುದ್ದುರಾಮ ಪುರಸ್ಕಾರ' ನೀಡಿ ಗೌರವಿಸಲಾಯಿತು.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಶಸ್ತಿ, ಪುರಸ್ಕಾರ ಹಾಗೂ ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಪ್ರಶಸ್ತಿ–ಪುರಸ್ಕಾರ ನೀಡಿ ಆಶೀರ್ವದಿಸಿದರು. ಬಳಿಕ ವಾಗ್ಮಿ ಹಿರೇಮಗಳೂರು ಕಣ್ಣನ್ ರಚಿತ 'ಮುದ್ದರಾಮ ಲಹರಿ', ಲೇಖಕಿ ಶ್ವೇತಾ ಪ್ರಕಾಶ್ ಅವರ 'ಪದ್ಮ ಪಲ್ಲವ' ಹಾಗೂ ಮುದ್ದುರಾಮ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಎ.ಚೇತನ್ ರಾಮ್ ರಚಿತ 'ಸಾಧ್ಯವೆಂದರೆ ಸಾಧ್ಯ(ಮೂರನೇ ಮುದ್ರಣ)' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ವಾಗ್ಮಿ ಹಿರೇಮಗಳೂರು ಕಣ್ಣನ್, ಪ್ರಶಸ್ತಿ ಪಡೆದುಕೊಳ್ಳಲು ನಾನು ಮೊದಲು ಒಪ್ಪಿರಲಿಲ್ಲ. ಆದರೆ ಸಾಹಿತಿ ಕೆ.ಸಿ. ಶಿವಪ್ಪ ಅವರ ಮನಸ್ಸನ್ನು ನೋಯಿಸಬಾರದು ಎಂದು ಒಪ್ಪಿ ಪಡೆದಿದ್ದೇನೆ. ಆದರೆ ಸಂಭಾವನೆಯನ್ನು ಮುಟ್ಟುವುದಿಲ್ಲ ಎಂದು ಹೇಳಿದ್ದೆ ಎಂದ ಅವರು, ಮಂಗಳೂರು ವಿಭಾಗದಲ್ಲಿ ಸಂಸ್ಕಾರ ಭಾರತೀ ಎಂಬ ನೃತ್ಯ ಸಂಸ್ಥೆಯನ್ನು ಸ್ಥಾಪನೆ ಮಾಡಿ, ರಾಷ್ಟ್ರದೇವೋಭವ ಎಂಬ ನೃತ್ಯ ರೂಪಕವನ್ನು ತಯಾರಿಸಿ ಯುವ ಸಮೂಹದಲ್ಲಿ ರಾಷ್ಟ್ರೀಯತೆಯನ್ನು ಪಸರಿಸುತ್ತಿರುವ ಚಂದ್ರಶೇಖರ ಶೆಟ್ಟಿ ಅವರ ಸಂಸ್ಥೆಗೆ ಮುದ್ದರಾಮ ಪ್ರಶಸ್ತಿಯೊಂದಿಗೆ ನೀಡಿದ್ದ 50 ಸಾವಿರ ರೂ. ಜೊತೆಗೆ ಬಸ್ ಚಾರ್ಜ್ ಸೇರಿ 52 ಸಾವಿರ ರೂ.ಗಳನ್ನು ನೀಡಿದರು. ಹಾಗೆಯೇ 'ಮುದ್ದುರಾಮ ಪುರಸ್ಕಾರ' ಸ್ವೀಕರಿಸಿದ ಚೌಪದಿ ರಚನಾಕಾರ ಎಂ.ಮುತ್ತುಸ್ವಾಮಿ ಕೂಡ ತಮಗೆ ನೀಡಿದ್ದ 25 ಸಾವಿರ ರೂ. ಪುರಸ್ಕಾರದ ಮೊತ್ತವನ್ನು ಸಾಮಾಜಿಕ ಕಾರ್ಯಕ್ಕೆ ಬಳಸುವುದಾಗಿ ತಿಳಿಸಿದರು.

ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಮಾತನಾಡಿ, ಸಾಮಾನ್ಯವಾಗಿ ನಮ್ಮ ಜೊತೆಗಿದ್ದವರ ನಡುವೆ ಒಂದಷ್ಟು ಅಂತರವಿದ್ದರೆ ಅವರೆಷ್ಟು ದೊಡ್ಡವರು ಎಂಬುದು ತಿಳಿಯುತ್ತದೆ. ರಾಮ–ಕೃಷ್ಣ ಇದ್ದಾಗ ಅವರನ್ನು ದೇವರೆಂದು ಎಷ್ಟು ಜನ ಅರ್ಥ ಮಾಡಿಕೊಂಡಿದ್ದರೋ ಗೊತ್ತಿಲ್ಲ. ಆದರೆ ನಂತರ ಅವರ ಮಹತ್ವ ತಿಳಿದಾಗಲೇ ದೇವರೆಂದು ಕರೆದದ್ದು. ಅದರಂತೆ ನಮ್ಮ ನಡುವಿರುವ ಕಣ್ಣನ್ ಅವರು, ಸಾಧನೆಯಲ್ಲಿ ಅತ್ಯಂತ ದೊಡ್ಡ ವ್ಯಕ್ತಿಯಾಗಿದ್ದಾರೆ. ತಮ್ಮಲ್ಲಿರುವ ಕಾವ್ಯ, ಸಂಗೀತ, ಸಾಹಿತ್ಯ ಎಲ್ಲವನ್ನೂ ಸೇರಿಸಿ ಹದಮಾಡಿ ನಮಗೆಲ್ಲಾ ಉಣಬಡಿಸಿ ಬಹಳ ರಸಿಕರಾಗಿದ್ದಾರೆ ಎಂದು ಬಣ್ಣಿಸಿದರು.

ಹಿರಿಯ ಸಾಹಿತಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುದ್ದುರಾಮ ಪ್ರತಿಷ್ಠಾನದ ಅಧ್ಯಕ್ಷರೂ ಆದ ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ, ಪ್ರತಿಷ್ಠಾನದ ಉಪಾಧ್ಯಕ್ಷ ನೀಲಗಿರಿ ಎಂ.ತಳವಾರ, ಖಜಾಂಚಿ ಶಿವಕುಮಾರ್, ಸಹ ಕಾರ್ಯದರ್ಶಿ ನ.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೋಡಿ ಮಾಡಿದ ಜುಗಲ್‌ಬಂದಿ...

ವಾಗ್ಮಿ ಹಿರೇಮಗಳೂರು ಕಣ್ಣನ್ ಹಾಗೂ ಶಿಕ್ಷಕಿ ನಾಗಶ್ರೀ ತ್ಯಾಗರಾಜನ್ ನಡುವೆ ನಡೆದ ಜುಗಲ್‌ಬಂದಿ ಮೋಡಿ ಮಾಡಿತು. ರಾಮಾಯಣ ರಚಿಸಿದ ವಾಲ್ಮೀಕಿ ಮಹರ್ಷಿ ಕುರಿತ ಮುದ್ದಾಮನ ಚೌಪದಿಗಳಾದ 'ಕೈ ಹಿಡಿದು ಬರೆಸಿದರು ಯಾರೋ ಅತಿ ಮಮತೆಯಲಿ, ಇಲ್ಲದಿರೆ ಈ ಮಸಿಗೆ ಚೆಲು ಬಣ್ಣವೆಲ್ಲಿ, ನಂಬಿ ನೀ ನಮಿಸದಿರೆ ನಗುವನೋ ಗುರುದೇವಾ... ಮಸಿ ನೀನು.. ಗುರು ಅವನು ಮುದ್ದುರಾಮ...' ದೇವನೊಲಿದರೆ ಆಗ ಲಿಪಿ ಮೂಡಿ ಸಾಂಗತ್ಯ, ಇಲ್ಲದಿರೆ ಕಾಳೆಲ್ಲಾ.. ಕಲ್ಲು ನೆಲದಲ್ಲಿ.. ಯಾವ ಕವಿತೆಗೆ ಯಾವ ರಾಗ ಬರುವುದೋ ಕೂಡಿ ಬಲ್ಲವರು ಯಾರಯ್ಯಾ ಮುದ್ದುರಾಮ...' ಎಂದು ಹಾಡಿ ನೆರೆದಿದ್ದವರ ಮನಗೆದ್ದರು.

ಮಹನೀಯರ, ಪರಮಪೂಜ್ಯರ ಬಗ್ಗೆ ತಿಳಿಸಬೇಕು...

ತಾಯಿಯ ಕುತ್ತಿಗೆಗೆ ಹಗ್ಗಹಾಕಿ ಎಳೆದು, ಅವಳ ಜೀವವನ್ನು ತೆಗೆದು ಸೂಟ್‌ಕೇಸ್‌ನಲ್ಲಿ ಮೃತದೇಹವನ್ನಿಟ್ಟು ಪೊಲೀಸ್ ಸ್ಟೇಷನ್‌ಗೆ ಬಂದ ಹೆಣ್ಣು ಮಗಳು ನನಗೆ ಗೊತ್ತಾಗಲಿಲ್ಲ ತಾಯಿಯನ್ನು ಕೊಂದು ಬಿಟ್ಟೆ ಎನ್ನುವ ಕೆಟ್ಟ ಸಂಸ್ಕಾರ... ದಿಗಂಬರ ಸನ್ಯಾಸಿಯ ಮೈಯನ್ನು ತುಂಡು ತುಂಡು ಮಾಡಿ, ವಿದ್ಯುಚ್ಛಕ್ತಿ ಮೂಲಕ ಕೊಂದು ಕೊಳವೆಬಾವಿಗೆ ಹಾಕುವಷ್ಟರ ಮಟ್ಟಿಗೆ ಬೆಳೆದಿರುವ ಕೆಟ್ಟ ಸಂಸ್ಕೃತಿಯನ್ನು ತೆಗೆದು ಹಾಕಬೇಕಾದರೆ ಕೇವಲ ಹಾಡು–ಕಥೆ ಮಾತ್ರವಲ್ಲ ಮಹನೀಯರ ಕಥೆಗಳನ್ನು ಹೇಳಿಕೊಡುವುದರ ಜೊತೆಗೆ ಪರಮ ಪೂಜ್ಯರ ಬಗ್ಗೆ ತಿಳಿಸಬೇಕು.

- ಹಿರೇಮಗಳೂರು ಕಣ್ಣನ್, ಖ್ಯಾತ ವಾಗ್ಮಿ

ನಕ್ಕರೆ ಅದೇ ಸ್ವರ್ಗ

ಗಂಡ : ಲೇ ಪಕ್ಕದ ಮನೆ ಮೇಲೆ ಐಟಿ ರೈಡ್ ಆಗ್ತಾ ಇದೆ ಕಣೆ...
ತಿಮ್ಮ : ಇನ್ನೇನು ಮತ್ತೆ.. ದಿನ ಟೊಮೆಟೋ ಬಾತ್ ಮಾಡಿದ್ರೆ...!

ಮೈಸೂರು ಮಿತ್ರ

ಸೋಮವಾರ, 24 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಮನುಷ್ಯ ಯಾವತ್ತೂ ಶ್ರೀಗಂಧದ ಮರದ ಹಾಗೆ ಬದುಕಬೇಕು. ಅದು ಕತ್ತರಿಸಿದಷ್ಟು ಸುಗಂಧ ನೀಡುತ್ತದೆ, ಹಾಗೆಯೇ ಯಾರೇ ಎಷ್ಟೇ ಕೀಳಾಗಿ ಕಂಡರೂ, ಅವಮಾನ ಮಾಡಿದರೂ ಒಳ್ಳೆಯದನ್ನೇ ಬಯಸಬೇಕು. ನಮ್ಮ ಒಳ್ಳೆಯತನ ಕಾಡಾಡಲು ದೇವರು ಇರ್ತಾನೆ...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆತ್ತ ತಾಯಿ, ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು

ನಿಮ್ಮ ಪತ್ರಗಳು

ಮಣಿಪುರ ಹೇಯ ಕೃತ್ಯ: ಎತ್ತ ಸಾಗುತ್ತಿದೆ ಭಾರತ...

ಮಾನ್ಯರೆ,

ನಿರ್ಭಯಾ, ಸೌಜನ್ಯ, ಹತ್ರಾಸ್, ಉನ್ನಾವೋ ಗ್ಯಾಂಗ್ ರೇಪ್, ಮಹಿಳಾ ಕುಸ್ತಿ ಪಟುಗಳ ಮೇಲೆ ಲೈಂಗಿಕ ದೌರ್ಜನ್ಯ, ಬಿಲ್ಕಿಸ್ ಬಾನು ಪ್ರಕರಣಗಳನ್ನು ಮರೆಯುವಂತಿಲ್ಲ. ಸದ್ಯ, ನಾಲ್ಕೈದು ತಿಂಗಳಿಂದ ಮಣಿಪುರದಲ್ಲಿ ಸಮುದಾಯಗಳ ನಡುವೆ ಮೀಸಲಾತಿ ಹಕ್ಕು ಕುರಿತು ನಡೆಯುತ್ತಿರುವ ಘರ್ಷಣೆ ಎಲ್ಲೆ ಮೀರಿದೆ. ಈಗ ಆ ಎರಡು ಸಮುದಾಯಗಳಾದ ಮೈತೇಯಿ ಹಾಗೂ ಬುಡಕಟ್ಟು ಕುಕಿ ಜನಾಂಗದ ನಡುವೆ ನಡೆಯುತ್ತಿರುವ ಜನಾಂಗೀಯ ದ್ವೇಷದ ದಳ್ಳುರಿಗೆ ನೂರ ಐವತ್ತಕ್ಕೂ ಹೆಚ್ಚು ಸಾವು ಸಂಭವಿಸಿದೆ. ಮಕ್ಕಳು, ಮಹಿಳೆಯರಿಗೆ ಸೂಕ್ತ ರಕ್ಷಣೆ ಇಲ್ಲದೆ ಕಾನೂನು ಸುವ್ಯವಸ್ಥೆಯೇ ಇಲ್ಲಿ ನಾಶವಾಗಿದೆ. ಮಣಿಪುರ ರಾಜ್ಯದ ಘಟನೆ ಇಡೀ ದೇಶವನ್ನೆ ದಿಗ್ಭ್ರಮೆಗೊಳಿಸಿದೆ. ಕೆಲವರ ಕ್ರೂರ ವರ್ತನೆಯಿಂದ ಎರಡು ತಿಂಗಳ ಹಿಂದೆಯೇ ನಡೆದಿದ್ದ ಆದಿವಾಸಿ ಕುಕಿ ಮಹಿಳೆಯರ ನಗ್ನ ಮೆರವಣಿಗೆ ಹಾಗೂ ಅವರ ಮೇಲಿನ ಸಾಮೂಹಿಕ ಅತ್ಯಾಚಾರದ ವಿಡಿಯೋ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವುದರಿಂದ ಸಮ ಸಮಾಜ ನಾಚುತ್ತ, ಜಗತ್ತಿನ ಮುಂದೆ ಭಾರತ ಬೆತ್ತಲಾಗಿದೆ. ಹೀಗೆ ಹೆಣ್ಣಿನ ಮೇಲೆ ನಿರಂತರವಾಗಿ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಶೋಷಣೆ, ಅತ್ಯಾಚಾರ ಇದಕ್ಕೆಲ್ಲಾ ಕೊನೆಯೇ ಇಲ್ಲವೇ.? ಮನುಷ್ಯನ ಮಾನವೀಯ ಸಂಬಂಧಗಳ ಮೌಲ್ಯಗಳು ದಿನ ಕಳೆದಂತೆ ಮರೆಯಾಗುತ್ತಿದೆ. ದೇಶದಲ್ಲಿ ಮಹಿಳೆಯರ ಸುರಕ್ಷಿತತೆ ಬಗ್ಗೆ ಬಣ್ಣದ ಮಾತುಗಳನ್ನು ಆಡುತ್ತಿರುವ ನಮ್ಮನ್ನಾಳುವ ಅಧಿಕಾರಸ್ಥರ ಮಾತುಗಳು ಅರ್ಥಹೀನವಾಗುತ್ತಿದೆ. ಕೇವಲ ಚುನಾವಣೆಗಳಲ್ಲಿ ತಂತ್ರ-ಪ್ರತಿತಂತ್ರ ಹೂಡಿ ಗೆದ್ದೆತ್ತಿನ ಬಾಲ ಹಿಡಿಯುವ ನಾಯಕರುಗಳು ಇಂತಹದೆಲ್ಲ ನಡೆದಾಗ ಅನ್ಯಾಯಕ್ಕೆ ಒಳಗಾದ, ನೊಂದವರ ಪರ ನ್ಯಾಯ ಕೊಡಿಸಲು ಸಾಧ್ಯವಾಗದದ್ದು ನಾಟಕವಲ್ಲವೆ. ಈ ಹೇಯ ಕೃತ್ಯವನ್ನು ನಡೆಸಿದ ಕ್ರೂರಿಗಳನ್ನು ಗಲ್ಲು ಶಿಕ್ಷೆಗೆ ಒಳಪಡಿಸಬೇಕಿದೆ. 'ಮಧ್ಯರಾತ್ರಿಯಲ್ಲಿ ಹೆಣ್ಣು ಮಗಳೊಬ್ಬಳು ರಸ್ತೆಯಲ್ಲಿ ನಿರ್ಭೀತಿಯಿಂದ ನಡೆದುಕೊಂಡು ಹೋಗುವಂತಾದರೆ ಆಗ ನಿಜವಾದ ಸ್ವಾತಂತ್ರ್ಯ ಸಿಕ್ಕಂತೆ' ಎಂದಿದ್ದರು ಗಾಂಧೀಜಿ. "ಮಹಿಳೆಯರ ಮೇಲಿನ ದಬ್ಬಾಳಿಕೆ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ, ಜಾತಿ ಹಾಗೂ ವ್ಯವಸ್ಥೆಯಲ್ಲಿನ ದೋಷ ಸರಿಪಡಿಸಲು ಶ್ರಮಿಸಿದ ಮಹಾನ್ ಚೇತನಗಳು ನಡೆದ ದಾರಿ ಪಾಲಿಸುತ್ತಿದ್ದಾರೆಯೆ ನಮ್ಮನ್ನು ಈಗ ಆಳ್ವಿಕೆ ನಡೆಸುತ್ತಿರುವವರು? ಉತ್ತರವೇ ದೊರಕದು.

– ಅನಿಲ್‌ಕುಮಾರ್, ನಂಜನಗೂಡು

ನಮ್ಮ ಮೈಸೂರು ಪಾಕ್ ನಮ್ಮ ಹೆಮ್ಮೆ



ಮಾನ್ಯರೇ,

ನಮಗೆಲ್ಲಾ ಮೈಸೂರು ಪಾಕ್ ತಿಂದಷ್ಟೇ ಸಿಹಿ ಸುದ್ದಿ. ವಿಶ್ವದ ಟಾಪ್ 50 ಸ್ವೀಟ್ ಫುಡ್ಸ್‌ಗಳಲ್ಲಿ ನಮ್ಮ ಮೈಸೂರಿನ ಸ್ವೀಟ್ ಮೈಸೂರು ಪಾಕ್ 14 ನೇ ಸ್ಥಾನ ಗಳಿಸಿ ವಿಶ್ವ ಪ್ರಸಿದ್ಧಿಯಾಗಿದೆ. ನಮ್ಮ ಮೈಸೂರು ಮಹಾರಾಜರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಉತ್ತಮ ಆಡಳಿತಗಾರರು, ಅಭಿವೃದ್ಧಿ ಹರಿಕಾರರು, ವಿದ್ವಾಂಸರು, ಸಂಗೀತ, ಸಾಹಿತ್ಯ ಪ್ರಿಯರು ಹಾಗೂ ಪೋಷಕರು ಆಗಿದ್ದರು. ಅವರ ಅಪಾರ ಕೊಡುಗೆ, ಜನಪರವಾದ ಕಾರ್ಯಗಳು ಅವರನ್ನು ಇಂದಿಗೂ ಅಜರಾಮರರನ್ನಾಗಿಸಿದೆ. ಅವರು ಭೋಜನ ಪ್ರಿಯರು ಕೂಡ ಆಗಿದ್ದರು ಎಂಬುದಕ್ಕೆ ಮೈಸೂರು. ಪಾಕ್ ಸಾಕ್ಷಿ. ಒಮ್ಮೆ ಮಹಾರಾಜರು ಏನಾದ್ರು ವಿಶೇಷ ತಿನಿಸು ಮಾಡು ಎಂದು ಅಡುಗೆಯವರಿಗೆ ಹೇಳಿದಾಗ, ತಕ್ಷಣ ಅಡುಗೆ ಭಟ್ಟರು ವಿಶೇಷವಾಗಿ ಕಡ್ಲೆಹಿಟ್ಟು, ಸಕ್ಕರೆಗೆ ಹದವಾಗಿ ತುಪ್ಪವನ್ನು ಸೇರಿಸುತ್ತಾ ಗೊಟಾಯಿಸಿದಾಗ, ಅದು ಒಂದು ರೀತಿ ಸುಂದರವಾಗಿ ಕಂಡು ಬಾಣಲೆಯ ತಳ ಬಿಟ್ಟಾಗ ಹರಿವಾಣಕ್ಕೆ ತುಪ್ಪ ಸವರಿ ಆ ಮಿಶ್ರಣ ಸುರಿದು, ಸಮವಾಗಿ ಕತ್ತರಿಸಿ, ಮಹಾರಾಜರಿಗೆ ಕೊಟ್ಟರು, ಮಹಾರಾಜರು ಚಪ್ಪರಿಸುತ್ತಾ ತಿನ್ನುತ್ತಾ, ಇದು ನಮ್ಮ ಮೈಸೂರಿನಲ್ಲಿ ಮಾಡಿದ ರಸಪಾಕ. ಇದಕ್ಕೆ ಮೈಸೂರು ಪಾಕ್ ಎಂದೇ ಹೆಸರು ಎಂದರು. ವಾವ್ ಅಂದಿನಿಂದ ಜನರ ನಾಲಿಗೆಯಲ್ಲಿ ನಲಿದಾಡಿದ ಮೈಸೂರು ಪಾಕ್ ಇಂದು ಜಗತ್ಪ್ರಸಿದ್ಧಿ..!!

ಹಿಂದೆಲ್ಲಾ, ಯಾವುದೇ ವಿಶೇಷ ಸಮಾರಂಭಗಳಿರಲಿ,ಮಂಗಳ ಕಾರ್ಯವಿರಲಿ, ಮೈಸೂರು ಪಾಕ್ ಇದ್ದೇ ಇರುತ್ತಿತ್ತು. ವಿಶೇಷ ಸಂಧರ್ಭಗಳಲ್ಲಿ ಅಂದರೆ ಹುಟ್ಟುಹಬ್ಬಕ್ಕೆ, ಪರೀಕ್ಷೆಯಲ್ಲಿ ಉತ್ತೀರ್ಣರಾದರೆ, ಯಾವುದೇ ಶುಭ ಸುದ್ದಿ ಘಟಿಸಿದರೆ ತಕ್ಷಣ ಸ್ವೀಟ್ ಹಂಚುತ್ತಿದ್ದುದು ಅದೇ ಮೈಸೂರು ಪಾಕ್.!!!

ಇಂದು ಮೈಸೂರು ಪಾಕ್ ವಿಶ್ವ ಮಟ್ಟದಲ್ಲಿ ಜನಪ್ರಿಯತೆ ಗಳಿಸಿ, ಎಲ್ಲರ ಬಾಯಲ್ಲಿ ಸಿಹಿ ಸಿಹಿಯಾಗಿ ನಲಿದಾಡುತ್ತಿದೆ. ಇದು ನಮ್ಮ ಮೈಸೂರಿಗೆ, ಕನ್ನಡಿಗರಿಗೆ ಹೆಮ್ಮೆ. ನಮ್ಮ ಮೈಸೂರು ನಮ್ಮ ಹೆಮ್ಮೆ, ನಮ್ಮ ಮೈಸೂರು ಪಾಕ್ ನಮ್ಮ ಹೆಮ್ಮೆ..

–ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.

ಸೊಗಸಾಗಿ ಮೂಡಿಬಂದ 'ಅಣ್ಣಾವ್ರ' ಕಾರ್ಯಕ್ರಮ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ನಾದಬ್ರಹ್ಮ ಸಭಾಂಗಣದಲ್ಲಿ ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವತಿಯಿಂದ 21ನೇ ವಾರ್ಷಿಕೋತ್ಸವದ ಪ್ರಯುಕ್ತ ನಡೆದ ಡಾ.ರಾಜ್‌ಕುಮಾರ್ ವಿಶೇಷ ಪ್ರೇಮಗೀತೆಗಳ ಕಾರ್ಯಕ್ರಮ ಸೊಗಸಾಗಿ ಎಲ್ಲರ ಮನ ಮುಟ್ಟುವಂತೆ ಮೂಡಿಬಂತು. ಮೈಸೂರ್ ಜಯರಾಂ ನೇತೃತ್ವದಲ್ಲಿ ಎಲ್ಲ ಕಲಾವಿದರೂ ಸುಶ್ರಾವ್ಯವಾಗಿ ಹಾಡಿ ಪ್ರೇಕ್ಷಕರನ್ನು ಪ್ರಫುಲ್ಲಗೊಳಿಸಿದರು. ವೇದಿಕೆ ಕಾರ್ಯಕ್ರಮವೂ ಹೆಚ್ಚು ಹೊತ್ತು ನಡೆಯದೇ ಚಿಕ್ಕ-ಚೊಕ್ಕದಾಗಿ ನಡೆದು ಅಣ್ಣಾವ್ರ ಗೀತೆಗಳಿಗೆ ಒತ್ತು ಕೊಟ್ಟಿತು. ಹಾಡುಗಳ ಆಯ್ಕೆಯೂ ಚೆನ್ನಾಗಿತ್ತು. ಅಂದಿನ ಗೀತೆ ರಚನೆ, ಹಿನ್ನೆಲೆ ಸಂಗೀತ, ಹಿನ್ನೆಲೆ ಗಾಯಕರನ್ನೊಳಗೂಡಿ ಸಮಾಜಕ್ಕೆ ಉತ್ತಮ ಸಂದೇಶ ಸಾರುವಂತದ್ದಾಗಿರುತ್ತಿತ್ತು. ಧ್ವನಿವರ್ಧಕವೂ ಹೆಚ್ಚು ಆಡಂಬರವಿಲ್ಲದೇ ಸಭಾಂಗಣಕ್ಕೆ ಎಷ್ಟು ಬೇಕೋ ಅಷ್ಟು ಇದ್ದುದರಿಂದ ಹಾಡುಗಳು ಕರ್ಕಶವಿಲ್ಲದೇ ಕಿವಿಗೆ ಇಂಪಾಗಿ ಮೂಡಿಬಂದವು. ಮೈಸೂರು ಜಯರಾಂ ಅಣ್ಣಾವ್ರ ಅಪ್ಪಟ ಅಭಿಮಾನಿ. ಅವರು ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿಕೊಂಡು, ಮೈಸೂರು ಜನರಿಗೆ ಆಗಾಗ್ಗೆ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಇವರ ಜೊತೆಗೆ ಸರ್ವಮಂಗಳಾ ಹಾಗೂ ತೇಜಸ್ವಿನಿ ಉತ್ತಮ ಸಹಕಾರ ನೀಡಿದರು. ಸುಧೀಂದ್ರರವರ ನಿರೂಪಣೆ ಅರ್ಥಗರ್ಭಿತವಾಗಿತ್ತು. ಒಟ್ಟಿನಲ್ಲಿ ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್‌ನವರು ಪ್ರೇಕ್ಷಕರಿಗೆ ಉತ್ತಮ ಮನರಂಜನೆ ನೀಡಿದರು. ಮೈಸೂರ್ ಜಯರಾಂ ಹಾಗೂ ಅವರ ತಂಡಕ್ಕೆ ಅಭಿನಂದನೆಗಳು.


–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ವರ್ತಮಾನವ ಭವಿಷ್ಯ ನುಂಗಿತ್ತಾ ತಂಗಿ...!



"ಎಷ್ಟೋ ಜನರಿಗೆ ವಯಸ್ಸಿದ್ದಾಗ ದುಡಿದು ಬಿಡಬೇಕು, ವಯಸ್ಸಾದ ಮೇಲೆ ಆರಾಮಾಗಿ ಕುಳಿತು ಮಕ್ಕಳು ಹಾಗೂ ಮೊಮ್ಮಕ್ಕಳೊಂದಿಗೆ ಸುಖ ಅನುಭವಿಸಬಹುದು ಎಂಬ ತಪ್ಪು ತಿಳುವಳಿಕೆ ಇರುತ್ತದೆ. ಅದಕ್ಕಾಗಿ ಅನೇಕ ಸಣ್ಣ ಸಣ್ಣ ಆಸೆಗಳನ್ನು ಪೂರೈಸಿಕೊಳ್ಳದೇ ಪೈಸೆ ಪೈಸೆಯನ್ನು ಕೂಡಿಡುತ್ತಾರೆ. ದುಡಿಯುವ ವಯಸ್ಸು ಮುಗಿದು ಕುಳಿತು ಸುಖ ಪಡುವ ವಯಸ್ಸಿನಲ್ಲಿ ಭೂಮಿಯಿಂದಲೇ ನಿರ್ಗಮಿಸಿಬಿಡುತ್ತಾರೆ. ಪ್ರತಿಯೊಂದು ವಯೋಮಾನದಲ್ಲಿ ಅನುಭವಿಸುವ ಸುಖ ಸಂತೋಷಗಳು ಇರುತ್ತವೆ. ಅವುಗಳನ್ನು ಮನಗಂಡು ಅನುಭವಿಸಿಬಿಡಬೇಕು, ವಿನಾಕಾರಣ ಮುಂದೂಡಬಾರದು. ನಾಳೆ ಎಂಬುದು ಅನಿಶ್ಚಿತ. ಯಾರೂ ಭವಿಷ್ಯವನ್ನು ನಿಖರವಾಗಿ ಹೇಳಲಾರರು. ಅಂದ ಮಾತ್ರಕ್ಕೆ ಗಳಿಸಿದ್ದೆಲ್ಲವನ್ನೂ ಬೇಕಾಬಿಟ್ಟಿ ಖರ್ಚುಮಾಡಿ ಎಂಬುದು ಇದರ ಅರ್ಥವಲ್ಲ. ಅಗತ್ಯವಿರುವುದಕ್ಕಾದರೂ ಖರ್ಚು ಮಾಡಿ ಖುಷಿಪಡಬೇಕು. ಉಳಿತಾಯಕ್ಕೆ ಆಗಲಿ ಖರ್ಚಿಗೇ ಆಗಲಿ ಇತಿಮಿತಿ ಹೇರಿಕೊಳ್ಳಬೇಕು. ಹೇಗೆ ಬೇರೆಯವರ ನೋವನ್ನು ನಾವು ಅನುಭವಿಸಲು ಸಾಧ್ಯವಿಲ್ಲವೋ ಹಾಗೇ ಬೇರೆಯವರ ಸಂತೋಷದಿಂದ ನಮಗೆ ಸಂತೋಷ ಸಿಗುತ್ತದೆ ಎನ್ನುವುದು ಬಾಲಿಶವಾದ ವಾದ. ನಮ್ಮ ಸಂತೋಷವನ್ನು ನಾವು ಅನುಭವಿಸಬೇಕು, ಅದು ಆಂತರಿಕ ಸಂತೋಷ. ಅನ್ಯರ ಸಂತೋಷದಲ್ಲಿ ಸಂತೋಷ ಸಿಗುವುದು ಬಾಹ್ಯವಾದದ್ದು.

ಮನುಷ್ಯನ ಬದುಕಿನಲ್ಲಿ ಕಾಲ ಎಂಬುದು ಬಹಳ ಮಹತ್ವ ಪಡೆದುಕೊಂಡಿದೆ. ಭೂತಕಾಲದ ತಳಹದಿ ಮೇಲೆ, ಭವಿಷ್ಯತ್ ಕಾಲದ ನಿರೀಕ್ಷೆಯಲ್ಲಿ ವರ್ತಮಾನದಲ್ಲಿ ಎಲ್ಲವನ್ನೂ ಕಟ್ಟುತ್ತಾ ಹೋಗುತ್ತಾನೆ. ಅದು ಮನೆ ಇರಬಹುದು ಅಥವಾ ಕನಸಿರಬಹುದು. ಭವಿಷ್ಯದಲ್ಲಿ ಸುಖ ಹಾಗೂ ನೆಮ್ಮದಿ ಸಿಗಬಹುದು ಎಂಬ ಭ್ರಮೆಯಲ್ಲಿ ವರ್ತಮಾನದಲ್ಲಿ ಇನ್ನಿಲ್ಲದ ಕಷ್ಟ ಅನುಭವಿಸುತ್ತಾನೆ. ಯಾವ ಪ್ರಾಣಿಪಕ್ಷಿಯೂ ಭವಿಷ್ಯದ ಹಿತದೃಷ್ಟಿಯಿಂದ ವರ್ತಮಾನದಲ್ಲಿ ಕಷ್ಟಪಡುವುದಿಲ್ಲ. ಕೆಲವು ಕೀಟಗಳು ಆಹಾರ ಸಂಗ್ರಹಿಸುವುದನ್ನು ಹೊರತುಪಡಿಸಿದರೆ ಉಳಿದಂತೆ ಯಾವ ಪ್ರಾಣಿಪಕ್ಷಿಯೂ ಭವಿಷ್ಯತ್ ಕಾಲದ ಕುರಿತು ಚಿಂತನೆ ನಡೆಸಿ, ಯೋಜನೆ ಸಿದ್ಧಪಡಿಸಿ ತಮ್ಮ ಮಕ್ಕಳಿಗೋಸ್ಕರ ವಾಸಸ್ಥಾನದ ನೆಲೆಗಳನ್ನು (ಗೂಡು ಇತ್ಯಾದಿ) ನಿರ್ಮಿಸುವುದಿಲ್ಲ. ಯಾವ ಪಕ್ಷಿಯೂ ಸಹ ಮರಿಗಳಿಗೆ ಆಹಾರ ಸಂಗ್ರಹಿಸಿಡುವುದಿಲ್ಲ. ಯಾವ ಹುಲಿಯು ತನ್ನ ಮರಿಗಳಿಗೋಸ್ಕರ ಜಿಂಕೆ ವನ ನಿರ್ಮಿಸುವುದಿಲ್ಲ. ಅವುಗಳು ಪ್ರಕೃತಿ ನಿಯಮದಂತೆ ಪಾಲಕರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತವೆ. ಅವುಗಳು ಮರಿಗಳಿಗೆ ಬೇಟೆಯಾಡುವುದನ್ನು, ಆಹಾರ ಸಂಪಾದಿಸುವುದನ್ನು ಕಲಿಸುತ್ತವೆ. ಮನುಷ್ಯ ಮಾತ್ರ ತನ್ನ ಮಕ್ಕಳು ಅನ್ನ, ಆಶ್ರಯಕ್ಕಾಗಿ ಅಲೆಯಬಾರದು ಎಂದು ಭಾವಿಸಿ ಅವರಿಗೆ ಸುಭದ್ರ ಭವಿಷ್ಯ ನಿರ್ಮಾಣ ಮಾಡಲು ತಮ್ಮ ಸಂಪಾದನೆಯಲ್ಲಿ ಉಳಿತಾಯ ಮಾಡಿ ಅಥವಾ ಸಾಲ ಮಾಡಿ ಜಮೀನು, ಸೈಟು, ಮನೆ, ಚಿನ್ನ ಖರೀದಿ ಎಂದು ಬಯಸಿ ವರ್ತಮಾನದಲ್ಲಿ ಕಷ್ಟ ಅನುಭವಿಸುವ ಪರಿಪಾಠ ಹೊಂದಿದ್ದಾನೆ. ಮುಂದೆ ಕಷ್ಟ ಕಾಲ ಬಂದೊದಗಿದರೆ ಇರಲಿ ಎಂದು ಸ್ವಲ್ಪ ಹಣ ಉಳಿತಾಯ ಮಾಡುವುದು ಒಳ್ಳೆಯದು. ಆದರೆ ವರ್ತಮಾನದ ಸುಖಸಂತೋಷಗಳನ್ನು ಬಲಿಕೊಟ್ಟು ಭವಿಷ್ಯಕ್ಕೋಸ್ಕರ ಮೀಸಲಿಡುವುದು ಮೂರ್ಖತನದ ಪರಮಾವಧಿ ಎನ್ನಬಹುದು. ಈ ದಿನದ ಖುಷಿಗೆ ಬದುಕುವುದು ಬಹಳ ಸರಳ. ಆದರೆ ನಾಳೆಯ ಚಿಂತೆಯಲ್ಲಿ ಬದುಕುವುದು ಸಂಕೀರ್ಣವಾಗಿರುತ್ತದೆ.

ಅನೇಕ ಪೋಷಕರು ಮಕ್ಕಳಿಗೆ ಹೇಳುವ ಸಾಮಾನ್ಯವಾದ ಒಂದು ಮಾತಿದೆ. "ಹೊಟ್ಟೆಬಟ್ಟೆ ಕಟ್ಟಿ ನಿಮ್ಮನ್ನು ಸಾಕಿದ್ದೇವೆ, ನಮ್ಮ ಸುಖವನ್ನು ಬಲಿಕೊಟ್ಟು ನಿಮಗೋಸ್ಕರ ಆಸ್ತಿ ಮಾಡಿದ್ದೇವೆ, ನಾವು ಒಳ್ಳೆಯ ಬದುಕನ್ನು ಕಾಣಲು ಸಾಧ್ಯವಾಗಲಿಲ್ಲ, ನೀವು ಸುಖವಾಗಿದ್ದರೆ ಅದರಲ್ಲಿ ನಾವು ಸುಖ ಕಾಣುತ್ತೇವೆ" ಎಂದು ಹೇಳುವುದು ಸಹಜ. ಇದು ಮಕ್ಕಳ ಮೇಲಿನ ವ್ಯಾಮೋಹದಿಂದ ಹಾಗೂ ತಾವು ಇಂದು ತ್ಯಾಗ ಮಾಡಿ ಮಕ್ಕಳ ಭವಿಷ್ಯಕ್ಕೆ ಕಷ್ಟಪಟ್ಟರೆ, ಅವರು ಮುಂದೆ ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂಬ ಒಂದು ಸಣ್ಣ ಸ್ವಾರ್ಥದಿಂದ ಮಾಡಿದ ಕೆಲಸವಾಗಿರುತ್ತದೆ. ಹೆತ್ತವರು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು, ಸಂಸ್ಕಾರ ಕೊಡಬೇಕು, ಬದುಕುವ ಕಲೆಯನ್ನು ಹೇಳಿಕೊಡಬೇಕೆ ವಿನಃ ಅವರು ಕಷ್ಟಪಡುವುದು ಬೇಡ ಸುಖವಾಗಿರಲಿ ಎಂದು ತಮ್ಮ ಸುಖವನ್ನು ತ್ಯಾಗ ಮಾಡುವುದು ಪೆದ್ದುತನವೇ ಸರಿ. ಎಷ್ಟೋ ಮನೆಗಳಲ್ಲಿ ಇಳಿವಯಸ್ಸಿನ ಪೋಷಕರು ಮಕ್ಕಳಿಗೆ ತಮ್ಮ ಕಷ್ಟನಷ್ಟಗಳನ್ನು ಹೇಳುವಾಗ ಮಕ್ಕಳು "ನಮಗಾಗಿ ನೀವು ಆಸ್ತಿ ಮಾಡಿ ಎಂದು ನಾವು ಕೇಳಿರಲಿಲ್ಲವಲ್ಲ, ನಿಮ್ಮ ಆಸ್ತಿಯೂ ಬೇಡ ನಿಮ್ಮನ್ನು ನೋಡಿಕೊಳ್ಳುವ ಜವಾಬ್ದಾರಿಯೂ ಬೇಡ" ಎಂದು ಹೇಳಿ ಅವರಿಂದ ದೂರಾದ ಅನೇಕ ಉದಾಹರಣೆಗಳಿವೆ. ಇಂದು ನಗರ ಪ್ರದೇಶದ ಎಷ್ಟೋ ಬಡಾವಣೆಗಳಲ್ಲಿ ಮಕ್ಕಳಿಗೋಸ್ಕರ ಕಟ್ಟಿದ ಮನೆಗಳು ಖಾಲಿ ಇವೆ. ಏಕೆಂದರೆ ಮಕ್ಕಳು ವಿದೇಶದಲ್ಲಿದ್ದಾರೆ, ಸಾಲ ಮಾಡಿ ಮನೆ ಕಟ್ಟಿದ ಅವರ ಹೆತ್ತವರು ವೃದ್ಧಾಶ್ರಮಗಳಲ್ಲಿದ್ದಾರೆ.

ಭವಿಷ್ಯದ ದೃಷ್ಟಿಯಿಂದ, ಮಕ್ಕಳ ಮೇಲಿನ ಅತಿಯಾದ ಪ್ರೀತಿಯಿಂದ ಗಂಡಹೆಂಡತಿ ತಮ್ಮ ಸುಖವನ್ನು ಬಲಿಕೊಡಬಾರದು. ಮುಂದೆ ಸುಖವಾಗಿರುತ್ತೇವೆ ಎಂಬ ಭ್ರಮೆಯನ್ನು ಬಿಡಬೇಕು. ಮಕ್ಕಳಿಗೆ ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟು ಕೊಟ್ಟು, ತಮ್ಮ ಭವಿಷ್ಯದ ಭದ್ರತೆಗೆ ಎಷ್ಟು ಉಳಿತಾಯ ಮಾಡಬೇಕೋ ಅಷ್ಟು ಮಾಡಿ ಉಳಿದ ಹಣದಲ್ಲಿ ಪ್ರವಾಸ, ತೀರ್ಥಯಾತ್ರೆ, ಒಳ್ಳೆಯ ಉಡುಗೆ ತೊಡುಗೆ ತೊಟ್ಟು, ಮಕ್ಕಳಷ್ಟೇ ಅಲ್ಲದೆ ತಮ್ಮೊಟ್ಟಿಗಿರುವ ಸ್ನೇಹಿತರು, ಬಂಧುಬಳಗದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ, ಅವರ ಖುಷಿಗೂ ಸ್ವಲ್ಪ ಖರ್ಚು ಮಾಡಿ ಬದುಕಿನಲ್ಲಿ ಸಿಗುವ ಸಣ್ಣ ಸುಖ ಸಂತೋಷವನ್ನು ನಿರ್ಲಕ್ಷಿಸದೇ ಅನುಭವಿಸಿಬಿಡಬೇಕು. ನಾಳೆ ಸುಖವಾಗಿರೋಣ ಎಂದು ಇಂದಿನ ಸುಖವನ್ನು ಮುಂದೂಡುವುದು ಒಳ್ಳೆಯ ಬೆಳವಣಿಗೆಯಲ್ಲ. ಮಕ್ಕಳನ್ನು ಸಾಕುವುದು ನಮ್ಮ ಧರ್ಮ, ಸಾಕೋಣ. ಅದಬಿಟ್ಟು ಅವರಿಗೋಸ್ಕರ ಅವರು ಬಯಸದ ಸಂಪತ್ತು ಕ್ರೋಢೀಕರಿಸುವುದು ಯಾವ ಧರ್ಮ.

ಬಾರದ ನಾಳೆಗೋಸ್ಕರ ಸುಖವಾದ ಇಂದಿನ ದಿನವನ್ನು ಯಾಕೆ ಉಪೇಕ್ಷಿಸಬೇಕು. ಪ್ರತಿದಿನವನ್ನು ಉತ್ತಮ ದಿನವನ್ನಾಗಿ ಪರಿವರ್ತಿಸಲು ಪ್ರಯತ್ನಿಸಬೇಕು. ನಿತ್ಯವೂ ಭವಿಷ್ಯದ ಚಿಂತೆಯಾದರೆ ವರ್ತಮಾನ ಯಾತನೆಯಾಗುತ್ತದೆ ಅಷ್ಟೆ. ಕೆಲವರಿಗೆ ಸುತ್ತ ಸುಖ ಸುತ್ತುವರಿದಿದ್ದರೂ, ಅವುಗಳನ್ನು ಸರಿಸಿ ದುಃಖವನ್ನು ಅರಸಿ ಅಪ್ಪಿಕೊಳ್ಳುವ ಇರಾದೆ ಇರುತ್ತದೆ. ಇಲ್ಲಸಲ್ಲದ ಊಹೆಗಳಿಂದ ಇಂದಿನ ಸುಖಸಂತೋಷವನ್ನು ಹಾಳು ಮಾಡಿಕೊಳ್ಳುತ್ತಾರೆ. ಡಿ.ವಿ.ಜಿ.ಯವರು ಒಂದು ಕಗ್ಗದಲ್ಲಿ ಹೀಗೆ ಹೇಳುತ್ತಾರೆ 'ಇರುವ ಭಾಗ್ಯವ ನೆನೆದು ಬಾರೆನೆಂಬುದ ಬಿಡು, ಹರುಷಕದೆ ದಾರಿಯೆಲೊ ಮಂಕುತಿಮ್ಮ'. ಹೌದು ತಮ್ಮಲ್ಲಿ ಅನೇಕ ಅಮೂಲ್ಯ ವಸ್ತುಗಳು ಇರುತ್ತವೆ, ಅದರಲ್ಲಿ ಆರೋಗ್ಯವೂ ಒಂದಾಗಿರುತ್ತದೆ. ಎಷ್ಟೋ ಜನ ಅನಗತ್ಯವಾಗಿ ದುಡಿದು ಆರೋಗ್ಯ ಹಾಳು ಮಾಡಿಕೊಳ್ಳುತ್ತಾರೆ. ಆರೋಗ್ಯಕ್ಕಿಂತ ಮತ್ತೊಂದು ಭಾಗ್ಯವುಂಟೇ? ಅದರ ಮೌಲ್ಯವನ್ನು ಅರಿಯದೆ ಕ್ಷುಲ್ಲಕ ವಸ್ತುಗಳಿಗಾಗಿ ಪರಿತಪಿಸುತ್ತಿರುತ್ತಾರೆ. ಪ್ರತಿನಿತ್ಯವೂ ತಮ್ಮ ಬಳಿ ಇಲ್ಲದೇ ಇರುವುದನ್ನು ಪಟ್ಟಿ ಮಾಡುತ್ತಾರೆ. ಸುಖವಾಗಿರಲು ಐಷಾರಾಮವೇ ಇರಬೇಕೆಂದೇನಿಲ್ಲ, ಇರುವುದರಲ್ಲಿ ಗರಿಷ್ಠ ಸುಖ ಅನುಭವಿಸಬಹುದು. ಅದಕ್ಕೆ ಒಳ್ಳೆಯ ಮನೋಭಾವ ಇರಬೇಕು ಅಷ್ಟೆ.

ಕವಿ ಗೋಪಾಲಕೃಷ್ಣ ಅಡಿಗರು ತಮ್ಮ ಕವಿತೆಯೊಂದರಲ್ಲಿ 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಎಂದು ಹೇಳಿದ್ದಾರೆ. ಕವಿವಾಣಿಯು ಅನುಭವದ ಸಾರವಾಗಿದೆ. ಮನುಷ್ಯನ ಮನೋಭಾವವೇ ಹೀಗೆ ಇರಬಹುದುದೇನೋ. ಇಂದಿನ ದಿನಮಾನದಲ್ಲಿ ಯಾರಿಗೂ ತಮ್ಮ ಬಳಿ ಇರುವ ವಸ್ತುಗಳ ಕುರಿತು ಸಮಾಧಾನವಾಗಲಿ, ಖುಷಿಯಾಗಲಿ ಇರುವುದಿಲ್ಲ. ಯಾರೂ ಸಹ ನಮ್ಮ ಬದುಕು ನಮ್ಮದು ಅವರ ಬದುಕು ಅವರದು ಎಂಬ ಮನೋಭಾವ ಹೊಂದಿಲ್ಲ. ಅನ್ಯರ ಬದುಕನ್ನು ನೋಡಿ ಈರ್ಷೆ ಪಟ್ಟು ಅವರ ಬದುಕು ಸುಂದರವಾಗಿದೆ ಎಂದು ಕಲ್ಪಿಸಿಕೊಳ್ಳುತ್ತಾರೆ. ಸಿರಿವಂತಿಕೆ ಇದ್ದರೆ ಪ್ರಪಂಚದ ಸುಖ ಹಾಗೂ ನೆಮ್ಮದಿ ನಮ್ಮ ಕಾಲಬುಡದಲ್ಲಿಯೇ ಇರುತ್ತದೆ ಎಂಬ ಭ್ರಮೆ ಇರುತ್ತದೆ. ಆ ಕಾರಣಕ್ಕೆ ಹಣ ಗಳಿಸಿ ಅಥವಾ ಸಾಲ ಮಾಡಿಯಾದರೂ ಬೇರೆಯವರ ಬಳಿ ಇರುವ ವಸ್ತುಗಳನ್ನು ಗಳಿಸಲು ಹರಸಾಹಸ ಮಾಡುತ್ತಾರೆ. ಆದರೆ ಅದಕ್ಕಾಗಿ ಇರುವ ಸುಖ ಹಾಗೂ ನೆಮ್ಮದಿಯನ್ನು ಕಳೆದುಕೊಳ್ಳುತ್ತಾರೆ. ಇರುವುದರಲ್ಲಿ ತೃಪ್ತಿ ಕಂಡುಕೊಳ್ಳುವವನು ಜಾಣನಾಗುತ್ತಾನೆ. ಅವನಿಗೆ ಬದುಕಿನ ನಿಜವಾದ ಸುಖ ಲಭಿಸುತ್ತದೆ.

ಎಷ್ಟೋ ಜನರಿಗೆ ವಯಸ್ಸಿದ್ದಾಗ ದುಡಿದು ಬಿಡಬೇಕು, ವಯಸ್ಸಾದ ಮೇಲೆ ಆರಾಮಾಗಿ ಕುಳಿತು ಮಕ್ಕಳು ಹಾಗೂ ಮೊಮ್ಮಕ್ಕಳೊಂದಿಗೆ ಸುಖ ಅನುಭವಿಸಬಹುದು ಎಂಬ ತಪ್ಪು ತಿಳುವಳಿಕೆ ಇರುತ್ತದೆ. ಅದಕ್ಕಾಗಿ ಅನೇಕ ಸಣ್ಣ ಸಣ್ಣ ಆಸೆಗಳನ್ನು ಪೂರೈಸಿಕೊಳ್ಳದೇ ಪೈಸೆ ಪೈಸೆಯನ್ನು ಕೂಡಿಡುತ್ತಾರೆ. ದುಡಿಯುವ ವಯಸ್ಸು ಮುಗಿದು ಕುಳಿತು ಸುಖ ಪಡುವ ವಯಸ್ಸಿನಲ್ಲಿ ಭೂಮಿಯಿಂದಲೇ ನಿರ್ಗಮಿಸಿಬಿಡುತ್ತಾರೆ. ಪ್ರತಿಯೊಂದು ವಯೋಮಾನದಲ್ಲಿ ಅನುಭವಿಸುವ ಸುಖ ಸಂತೋಷಗಳು ಇರುತ್ತವೆ. ಅವುಗಳನ್ನು ಮನಗಂಡು ಅನುಭವಿಸಿಬಿಡಬೇಕು, ವಿನಾಕಾರಣ ಮುಂದೂಡಬಾರದು. ನಾಳೆ ಎಂಬುದು ಅನಿಶ್ಚಿತ. ಯಾರೂ ಭವಿಷ್ಯವನ್ನು ನಿಖರವಾಗಿ ಹೇಳಲಾರರು. ಅಂದಮಾತ್ರಕ್ಕೆ ಗಳಿಸಿದ್ದೆಲ್ಲವನ್ನೂ ಬೇಕಾಬಿಟ್ಟಿ ಖರ್ಚುಮಾಡಿ ಎಂಬುದು ಇದರ ಅರ್ಥವಲ್ಲ. ಅಗತ್ಯವಿರುವುದಕ್ಕಾದರೂ ಖರ್ಚು ಮಾಡಿ ಖುಷಿಪಡಬೇಕು. ಉಳಿತಾಯಕ್ಕೆ ಆಗಲಿ ಖರ್ಚಿಗೇ ಆಗಲಿ ಇತಿಮಿತಿ ಹೇರಿಕೊಳ್ಳಬೇಕು. ಹೇಗೆ ಬೇರೆಯವರ ನೋವನ್ನು ನಾವು ಅನುಭವಿಸಲು ಸಾಧ್ಯವಿಲ್ಲವೋ ಹಾಗೇ ಬೇರೆಯವರ ಸಂತೋಷದಲ್ಲಿ ನಮಗೆ ಸಂತೋಷ ಸಿಗುತ್ತದೆ ಎನ್ನುವುದು ಒಪ್ಪುವ ಮಾತಲ್ಲ. ನಮ್ಮ ಸಂತೋಷವನ್ನು ನಾವು ಅನುಭವಿಸಬೇಕು, ಅದು ಆಂತರಿಕ ಸಂತೋಷ. ಅನ್ಯರ ಸಂತೋಷದಲ್ಲಿ ಸಂತೋಷ ಸಿಗುವುದು ಬಾಹ್ಯವಾದದ್ದು.

ಆಧ್ಯಾತ್ಮಿಕ ಗುರು ಓಶೋ ಮನುಕುಲಕ್ಕೆ ಒಂದೊಳ್ಳೆ ಸಂದೇಶವನ್ನು ನೀಡಿದ್ದಾರೆ. 'ಭೂತಕಾಲ ಗತಿಸಿಯಾಗಿದೆ, ಅದರ ಕುರಿತು ಚಿಂತಿಸರೆ ಫಲವಿಲ್ಲ, ಭವಿಷ್ಯಕಾಲ ಇನ್ನೂ ಬಂದಿಲ್ಲ, ಅದರ ಕುರಿತು ಭ್ರಮಿಸುವುದು ಒಳ್ಳೆಯದಲ್ಲ, ನಮ್ಮ ಕೈಯಲ್ಲಿ ವರ್ತಮಾನವಿದೆ, ಅದನ್ನು ಪರಿಪೂರ್ಣವಾಗಿ ಅನುಭವಿಸಿಬಿಡಬೇಕು' ಎಂದು ಹೇಳಿದ್ದಾರೆ. ಹೌದು, ಈ ಕ್ಷಣ, ಈ ದಿನವನ್ನು ಅನುಭವಿಸುವುದು ಮನುಷ್ಯ ಸಹಜ ಗುಣವಾಗಬೇಕು. ಆದ್ದರಿಂದ ಎಲ್ಲವನ್ನೂ ಮಕ್ಕಳಿಗೆ ಧಾರೆ ಎರೆಯುವುದು ತರವಲ್ಲ. ತಮ್ಮ ಆರೋಗ್ಯ ರಕ್ಷಣೆಗೆ, ಭದ್ರತೆಗೆ ತುಸು ಹಣ ಕೂಡಿಟ್ಟು, ಮಕ್ಕಳಿಗೆ ಕರ್ತವ್ಯದ ರೂಪದಲ್ಲಿ ಏನು ಕೊಡಬೇಕೋ ಅದನ್ನು ಕೊಟ್ಟು, ಉಳಿದಂತೆ ತಮ್ಮ ಜೀವನವನ್ನು ಸುಂದರವಾಗಿ ರೂಪಿಸಿಕೊಂಡು ಸುಖ ಸಂತೋಷವನ್ನು ಪೂರ್ತಿಯಾಗಿ ಅನುಭವಿಸಿಬಿಡಬೇಕು. ಜೀವನವಿಡೀ ಅನ್ಯರಿಗೋಸ್ಕರ ಬದುಕುವ ಗೀಳನ್ನು ಬಿಡಬೇಕು, ತಮಗೋಸ್ಕರ ಬದುಕುವ ಕಲೆಯನ್ನು ಕಲಿಯಬೇಕು. ಬೇರೆಯವರಿಗೋಸ್ಕರ ನಮ್ಮ ಸುಖ ಸಂತೋಷವನ್ನು ತ್ಯಾಗ ಮಾಡಬಾರದು. ನಮ್ಮ ಕಷ್ಟಕ್ಕೂ ನಾವೆ ಹೊಣೆ, ನಮ್ಮ ಸುಖಕ್ಕೂ ನಾವೆ ಹೊಣೆ. ಏನಂತೀರಿ?

ಪದ ತಾಂಬೂಲ :
ಇಂದಿಗೋಸ್ಕರ ಬದುಕುವುದು ಸರಳ,
ನಾಳೆಗೋಸ್ಕರ ಬದುಕುವುದು ಸಂಕೀರ್ಣ

ಯಾವುದಾದರೂ ವಿವಿಗೆ ಪುಟ್ಟರಾಜ ಗವಾಯಿ ಹೆಸರಿಡಬೇಕು

ಕರ್ನಾಟಕ ಕೇಂದ್ರೀಯ ವಿವಿ ಸಂಗೀತ ಮತ್ತು ಲಲಿತಕಲಾ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಜಯದೇವಿ ಜಂಗಮಶೆಟ್ಟಿ



ದಿ.ಪಂ.ಕೆ.ಎಸ್.ಹಡಪದ ಅವರ ಸ್ಮರಣಾರ್ಥ ಭಾನುವಾರ ನಡೆದ ಸಂಗೀತ ಕಾರ್ಯಕ್ರಮದಲ್ಲಿ 2023ನೇ ಸಾಲಿನ ಪಂ.ಕೆ.ಎಸ್.ಹಡಪದ ಪ್ರಶಸ್ತಿಯನ್ನು ಖ್ಯಾತ ತಬಲಾ ವಾದಕ ಪಂ.ಸಾತಲಿಂಗಪ್ಪ ದೇಸಾಯಿ ಕಲ್ಲೂರ ಅವರಿಗೆ ನೀಡಲಾಯಿತು.

ಮೈಸೂರು,ಜು.23(ಎಸ್‌ಪಿಎನ್)– ಗಾನಯೋಗಿ ಗುರು ಪಂಚಾಕ್ಷರ ಗವಾಯಿ ಮತ್ತು ಗಾನಯೋಗಿ ಗುರು ಪುಟ್ಟರಾಜ ಗವಾಯಿಗಳ ಹೆಸರು ಶಾಶ್ವತವಾಗಿ ಉಳಿಯಲು ರಾಜ್ಯದ ಯಾವುದಾದರೊಂದು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರಿಡಬೇಕು ಎಂದು ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿವಿಯ ಸಂಗೀತ ಮತ್ತು ಲಲಿತಕಲಾ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಜಯದೇವಿ ಜಂಗಮಶೆಟ್ಟಿ ಒತ್ತಾಯಿಸಿದರು.

ಮೈಸೂರು ಕುವೆಂಪುನಗರದ ಗಾನಭಾರತೀ ಸಭಾಂಗಣದಲ್ಲಿ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ ದಿ.ಪಂ.ಕೆ.ಎಸ್. ಹಡಪದ ಇವರ ಸ್ಮರಣಾರ್ಥ ಭಾನುವಾರ ಸಂಗೀತ ಕಾರ್ಯಕ್ರಮ ಹಾಗೂ 2023ನೇ ಸಾಲಿನ ಪಂ.ಕೆ.ಎಸ್.ಹಡಪದ ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಖ್ಯಾತ ತಬಲಾ ವಾದಕ ಪಂ.ಸಾತಲಿಂಗಪ್ಪ ದೇಸಾಯಿ ಕಲ್ಲೂರ ಅವರಿಗೆ 2023ನೇ ಸಾಲಿನ 'ಪಂ.ಕೆ.ಎಸ್. ಹಡಪದ' ಪ್ರಶಸ್ತಿ ವಿತರಣೆಯಾಗಿರುವುದು ಸಂತೋಷದ ಸಂಗತಿ. ಪಂ.ಕೆ.ಎಸ್.ಹಡಪದ ಅವರು ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಅಭ್ಯಾಸ ಮಾಡಿದ್ದಾರೆ. ಇಂತಹ ದಿಗ್ಗಜರು ಸಂಗೀತ ಅಭ್ಯಾಸವನ್ನು ಪುಣ್ಯಾಶ್ರಮದಲ್ಲಿ ಮಾಡಿರುವುದು ಹಿಂದೂಸ್ತಾನಿ ಸಂಗೀತ ಕ್ಷೇತ್ರಕ್ಕೆ ಹೆಮ್ಮೆಯ ವಿಷಯ. ಪುಟ್ಟರಾಜ ಗವಾಯಿ ಅಜ್ಜನವರ ಗರಡಿ ಅನೇಕ ಕಲಿತು ನಾಡಿನಲ್ಲಿ ಹೆಸರು ವಾಸಿಯಾಗಿದ್ದಾರೆ ಎಂದರು.

ಸಂಗೀತ ಕ್ಷೇತ್ರದಲ್ಲಿ ಗುರು-ಶಿಷ್ಯ ಪರಂಪರೆ ಇನ್ನೂ ಉಳಿದುಕೊಂಡಿದೆ. ಕೋಮು ಸೌಹಾರ್ದಕ್ಕೆ ಸಂಗೀತ ಕ್ಷೇತ್ರಕ್ಕಿಂತ ಮತ್ತೊಂದು ಕ್ಷೇತ್ರವಿಲ್ಲ. ಅನೇಕ ಹಿಂದೂ - ಮುಸ್ಲಿಂ ಗಾಯಕರು, ಗುರು-ಶಿಷ್ಯ ಪರಂಪರೆಯಿಂದಲೇ ಸಂಗೀತ ಕೋಮು ಸೌಹಾರ್ದ ಮೆರೆದಿದ್ದಾರೆ. ಇದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದು. ಕಲ್ಯಾಣ ಕರ್ನಾಟಕ ಭಾಗದವರು ಹೆಚ್ಚು ಹಿಂದೂಸ್ತಾನಿ ಗಾಯನ ಕ್ಷೇತ್ರದಲ್ಲಿದ್ದಾರೆ.

ಶ್ರೀ ಗುರು ಪುಟ್ಟರಾಜ ಸಂಗೀತ ಸಭಾದ ಅಧ್ಯಕ್ಷ ಪಂ.ಭೀಮಾಶಂಕರ ಬಿದನೂರ ಅವರು ಮೈಸೂರು ಭಾಗದಲ್ಲಿ ಪುಟ್ಟ ಸಂಗೀತ ಶಾಲೆಯೊಂದನ್ನು ತೆರೆದು ಹಿಂದೂಸ್ತಾನಿ ಸಂಗೀತಕ್ಕೆ ಹೆಚ್ಚಿನ ಆದ್ಯತೆ ನೀಡಿ, ಅನೇಕ ಶಿಷ್ಯ ವೃಂದವನ್ನು ತಯಾರು ಮಾಡುತ್ತಿರುವುದು ಸಂತೋಷ ಸಂಗತಿ ಎಂದು ಅಭಿಪ್ರಾಯಪಟ್ಟರು.

ಕೆ.ಎಸ್.ಹಡಪದ ಅವರು, ಅನೇಕ ಹೊಸ ರಾಗಗಳನ್ನು ಸಂಯೋಜನೆ ಮಾಡಿದ್ದರೂ ಎಂದಿಗೂ ನಾನು ಸಂಗೀತ ಕ್ಷೇತ್ರದಲ್ಲಿ ಇಷ್ಟೊಂದು ಸಾಧನೆ ಮಾಡಿದ್ದೇನೆ ಎಂದು ಹೇಳಿಕೊಳ್ಳಲಿಲ್ಲ. ಆದರೆ, ಇಂದಿನ ಪ್ರಾಧ್ಯಾಪಕರಿಗೆ ಯುಜಿಸಿಯಿಂದ ಹೊಸ ರಾಗ ಸಂಯೋಜನೆ ಮಾಡುವಂತೆ ಹೇಳಿದರೂ ನಾವು ಅತ್ತಕಡೆ ಈಗಿನ ಪ್ರಾಧ್ಯಾಪಕರು ಸ್ವಲ್ಪ ನಿರ್ಲಕ್ಷ್ಯವಹಿಸುತ್ತಾರೆ. ಹಿಂದಿನ ಕಾಲದಲ್ಲಿ ಸಂಗೀತ ಕ್ಷೇತ್ರಕ್ಕೆ ನೀಡಿದ್ದ ಮಹತ್ವ ಈಗ ನೀಡುತ್ತಿರುವ ಮಹತ್ವದ ಬಗ್ಗೆ ತಿಳಿಸಿಕೊಟ್ಟರು.

ಇದಕ್ಕೂ ಮೊದಲು ಎಸ್‌ಬಿಪಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಾದ ತ್ರೀಶಾ, ಬಿ.ಪೂರ್ವಿ, ಆರ್.ಶಾಶ್ವತ್, ಆರ್.ಧ್ಯಾನ್, ಮೊಹಿತ್, ಜೆ.ಕಿಶೋರ್, ಅಕ್ಷೋಭ್ಯ ಎ. ಭಾರದ್ವಜ್, ಅನಿರುದ್ಧ ಕಟ್ಟಿ, ಎಂ.ಸಂಜಯ್, ಮನ್ಹಾರ್ ಮೂರ್ತಿ, ಎಂ.ಪಿ.ವಿಶೃತ್, ಹೆಚ್.ಎಸ್.ಆರ್ಯದತ್ತ, ಧೀಮಂತ ಭಾರದ್ವಾಜ್ ಅವರು ಸಾಮೂಹಿಕ ತಬಲಾ ವಾದನ ನಡೆಸಿಕೊಟ್ಟರಲ್ಲದೆ, ಪಂ.ಕೆ.ಎಸ್.ಹಡಪದ ಪ್ರಶಸ್ತಿ ಪುರಸ್ಕೃತರಾದ ಪಂ.ಸಾತಲಿಂಗಪ್ಪ ದೇಸಾಯಿ ಕಲ್ಲೂರ ಹಾಗೂ ಪಂ.ಮಳೆಮಲ್ಲೇಶ್ ಹೂಗಾರ ಮತ್ತು ರಘುನಂದನ ಗೋಪಾಲ್ ಹೂಗಾರ ಅವರಿಂದ ತಬಲ 'ತ್ರಯೋ ವಾದನ' (ಜುಗಲಬಂದಿ) ನಡೆಸಿಕೊಟ್ಟರು. ಇದಕ್ಕೆ ಭಾಗ್ಯಶ್ರೀ ಹೂಗಾರ ಅವರು ಲೆಹರಾ ಸಹಕಾರ ನೀಡಿದರು. ಕಲಬುರಗಿಯ ವಿಜಯಲಕ್ಷ್ಮಿ ಪೂಜೇರ ಗಾಯನ ನಡೆಸಿಕೊಟ್ಟರು. ಇವರಿಗೆ ಭೀಮಶಂಕರ ಬಿದನೂರ, ಶ್ರೀ ಮೃತ್ಯುಂಜಯ್ಯ ಹಿರೇಮಠ ಹಾರ್ಮೋನಿಯಂ ಸಾಥ್ ನೀಡಿದ್ದಾರೆ.

ಈ ವೇಳೆ ಗಾನಭಾರತೀ ಖಜಾಂಚಿ ಜನಾರ್ಧನ್, ಜಿಎಸ್‌ಎಸ್‌ಎಸ್ ಪ್ರಾಂಶುಪಾಲ ಎಸ್.ಆರ್.ಹೇಮಲತಾ, ಮೃತ್ಯುಂಜಯ್ಯ ಹಿರೇಮಠ ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕೈಕೊಟ್ಟ ಪ್ರಿಯಕರ: ಆತ್ಮಹತ್ಯೆಗೆ ಶರಣಾದ ಪ್ರಿಯತಮೆ

● ರೀಲ್ಸ್‌ನಲ್ಲಿ ಶೋಕ ಗೀತೆಗೆ ಪ್ರಿಯಕರನೊಂದಿಗಿನ ಫೋಟೋ ಅಳವಡಿಕೆ ● ತಂದೆಗೆ ಡೆತ್‌ನೋಟ್



ಕೆ.ಆರ್.ನಗರ, ಜು.23(ಬಿಎಲ್‌ಯು)– ಪ್ರಿಯಕರ ಕೈ ಕೊಟ್ಟಿದ್ದರಿಂದ ಬೇಸತ್ತ ಯುವತಿ 'ರೀಲ್ಸ್'ನಲ್ಲಿ ಕೈಕೊಯ್ದುಕೊಂಡು, ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಕೆ.ಆರ್.ನಗರ ತಾಲೂಕು ಗೌಡೇನಹಳ್ಳಿ ಗ್ರಾಮದಿಂದ ವರದಿಯಾಗಿದೆ.

ಕೆ.ಆರ್.ನಗರ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಕಾಂ. ವ್ಯಾಸಂಗ ಮಾಡುತ್ತಿದ್ದ ಗೌಡೇನಹಳ್ಳಿ ಗ್ರಾಮದ ನಿಸರ್ಗ(20) ಎಂಬ ಯುವತಿ ಆತ್ಮಹತ್ಯೆಗೆ ಶರಣಾದವಳಾಗಿದ್ದು, ಈಕೆ ಆತ್ಮಹತ್ಯೆಗೂ ಮುನ್ನ 'ರೀಲ್ಸ್'ನಲ್ಲಿ "ಚಂದದ ಹೆಣ್ಣು ನಿನ್ನ ಸೆಳೆಯುವ ಸಮಯ ಮರೆತೆಯಾ ನೀನು ಈ ಪಾಪಿಯ ಹೃದಯ..." ಎಂಬ ಶೋಕ ಗೀತೆಗೆ ತನ್ನೊಂದಿಗೆ ಪ್ರಿಯಕರನಿರುವ ಫೋಟೋಗಳು ಹಾಗೂ ತಾನು ಕೈ ಕೊಯ್ದುಕೊಂಡಿರುವ ಫೋಟೋಗಳನ್ನು ಅಳವಡಿಸಿರುವುದಲ್ಲದೇ, ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈಕೆ ಸುಹಾಸ್ ರೆಡ್ಡಿ ಎಂಬ ಯುವಕನನ್ನು ಕಳೆದ ನಾಲ್ಕು ವರ್ಷದಿಂದ ಪ್ರೀತಿಸುತ್ತಿದ್ದಳು ಎಂದು ಹೇಳಲಾಗಿದ್ದು, ಇತ್ತೀಚೆಗೆ ಆತ ಬೇರೆ ಯುವತಿಯೊಂದಿಗೆ ಸಂಪರ್ಕ ಬೆಳೆಸಿದ್ದು, ಈಕೆಯನ್ನು ಕಡೆಗಣಿಸಿದ ಕಾರಣ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದಾಳೆ.

ತನ್ನ ತಂದೆಗೆ ಡೆತ್‌ನೋಟ್ ಬರೆದಿರುವ ಈಕೆ, "ತನ್ನನ್ನು ಸುಹಾಸ್ ರೆಡ್ಡಿ ನಾಲ್ಕು ವರ್ಷದಿಂದ ಪ್ರೀತಿಸಿ, ಎಲ್ಲಾ ರೀತಿಯಲ್ಲೂ ಬಳಸಿಕೊಂಡು ಬೇರೆ ಹುಡುಗಿ ಬಂದ ತಕ್ಷಣ ನನ್ನನ್ನು ನಡು ನೀರಲ್ಲಿ ಬಿಟ್ಟಿದ್ದಾನೆ. ಸುಹಾಸ್ ಮತ್ತು ಆತನ ಹೊಸ ಗೆಳತಿಯನ್ನು ಪದೇ ಪದೆ ಅವಮಾನಿಸಿ, ಹೀಯ್ಯಾಳಿಸಿ ಸಾಕಷ್ಟು ನೋವು ಕೊಟ್ಟಿದ್ದಾರೆ. ನಾವಿಬ್ಬರೂ ಪ್ರೀತಿಸುತ್ತಿದ್ದ ವಿಷಯ ಸುಹಾಸ್‌ನ ಮನೆಯವರಿಗೆಲ್ಲಾ ಗೊತ್ತಿದ್ದರೂ ಕೂಡ ಅವರ‍್ಯಾರೂ ನನ್ನ ಪರವಾಗಿ ಬರಲಿಲ್ಲ. ಸುಹಾಸ್‌ನ ಹೊಸ ಗೆಳತಿಯ ತಂದೆ–ತಾಯಿಗೆ ನಾನು ವಿಷಯ ತಿಳಿಸಿದರೂ ಅವರೂ ಕೂಡ ನನ್ನನ್ನು ಅವಮಾನಿಸಿ ಕೆಟ್ಟ ಮಾತುಗಳಿಂದ ಚುಚ್ಚಿ ನೋಯಿಸಿದ್ದಾರೆ. ನಾನು ಸತ್ತರೆ ಅದಕ್ಕೆ ಸುಹಾಸ್ ಹಾಗೂ ಆತನ ಹೊಸ ಗೆಳತಿ ಮತ್ತು ಆಕೆಯ ಕುಟುಂಬದವರೇ ಕಾರಣರಾಗಿದ್ದು, ಅವರನ್ನು ಸಾಯುವವರೆಗೂ ಬಿಡಬೇಡಿ. ನನಗಾದ ಮೋಸ ಬೇರೆ ಯಾವ ಹೆಣ್ಣು ಮಗಳಿಗೂ ಆಗಬಾರದು" ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾಳೆ.

ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವಸ್ಥಾನಕ್ಕೆ ಹೋದ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಶವವಾಗಿ ಪತ್ತೆ



ಮೈಸೂರು, ಜು.23(ಎಂಕೆ)– ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಹೋಗಿ ರೈಲಿನಲ್ಲಿ ವಾಪಾಸ್ಸಾಗುವಾಗ ನಾಪತ್ತೆಯಾಗಿದ್ದ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಶವವಾಗಿ ಪತ್ತೆಯಾಗಿದ್ದಾರೆ.

ಮೈಸೂರಿನ ಶ್ರೀರಾಂಪುರ 2ನೇ ಹಂತದ ಎಸ್‌ಬಿಎಂ ಕಾಲೋನಿ ನಿವಾಸಿ ಹಾಗೂ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಎಸ್.ಎನ್.ಸುಬ್ಬರಾವ್(72), ಜು.21 ರಂದು ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಹೋಗಿ ವಾಪಾಸ್ಸಾಗುವಾಗ ಅಶೋಕಪುರಂ ರೈಲ್ವೆ ನಿಲ್ದಾಣದ ಸಮೀಪದಲ್ಲಿ ಕಾಣೆಯಾಗಿದ್ದರು.

ಈ ಸಂಬಂಧ ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ರೈಲ್ವೆ ಪೊಲೀಸರು ಜು.22 ರಂದು ಕಾರ್ಯಾಚರಣೆ ನಡೆಸಿದ್ದು, ಸಂಜೆ 7.30ರ ಸುಮಾರಿಗೆ ಅಶೋಕಪುರಂ–ಕಡಕೊಳ ರೈಲು ಮಾರ್ಗದ ನಡುವೆ ಸುಬ್ಬರಾವ್ ಮೃತದೇಹ ಪತ್ತೆಯಾಗಿದೆ. ರೈಲಿನಲ್ಲಿ ಶೌಚಾಲಯಕ್ಕೆ ಹೋಗಿ ಡೋರ್ ಬಳಿ ಇರುವ ಹ್ಯಾಂಡ್‌ವಾಸ್ ಬಳಿ ಕೈ ತೊಳೆದುಕೊಳ್ಳುವಾಗ ಆಯಾತಪ್ಪಿ ರೈಲಿನಿಂದ ಕೆಳಗೆ ಬಿದ್ದು ಸಾವನ್ನಪ್ಪಿರಬಹುದು ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಇಬ್ಬರ ಬಂಧನ: 40 ಕೆಜಿ ಗಾಂಜಾ ವಶ

ಮೈಸೂರು, ಜು.23(ಎಸ್‌ಬಿಡಿ)– ಮನೆಯೊಂದರಲ್ಲಿ ದಾಸ್ತಾನು ಮಾಡಿದ್ದ 40 ಕೆಜಿ ಗಾಂಜಾವನ್ನು ಮೈಸೂರಿನ ಸಿಸಿಬಿ ಪೊಲೀಸರು ವಶಪಡಿಸಿಕೊಂಡಿದ್ದು, ಈ ಸಂಬಂಧ ಇಬ್ಬರನ್ನು ಬಂಧಿಸಿದ್ದಾರೆ.

ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಗಾಂಜಾ ದಾಸ್ತಾನು ಮಾಡಿದ್ದರ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿದ್ದರು. ಈ ವೇಳೆ 40 ಕೆಜಿಯಷ್ಟು ಗಾಂಜಾ ಪತ್ತೆಯಾಗಿದ್ದು, ದಾಸ್ತಾನು ಮಾಡಿದ್ದ ಇಬ್ಬರನ್ನು ಬಂಧಿಸಲಾಗಿದೆ.

ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಅವರ ಮಾರ್ಗದರ್ಶನ, ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ಶೇಖರ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ನಿಧನ



ಜಿ.ದುಶ್ಯಂತ್

ಮೈಸೂರು, ಜು.23– ಮೈಸೂರಿನ ಎನ್.ಆರ್.ಮೊಹಲ್ಲಾದ ನಿವಾಸಿ ಜಿ.ದುಶ್ಯಂತ್(37) ಶನಿವಾರ ಸಂಜೆ ನಿಧನರಾದರು.

ತಾಯಿ ಪ್ರಭಾಮಣಿ, ಅಕ್ಕಂದಿರಾದ ಹರಿಣಿ, ತುಳಸಿ, ಸರಸ್ವತಿ ಹಾಗೂ ಅಣ್ಣ ನರೇಂದ್ರ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಕುಣಿಗಲ್ ತಾಲೂಕು ಸಾಲುಪಾಳ್ಯ ಗ್ರಾಮದ ಜಮೀನಿನಲ್ಲಿ ಭಾನುವಾರ ಮಧ್ಯಾಹ್ನ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ನಾಗರತ್ನಮ್ಮ



ಮೈಸೂರು, ಜು.23– ಬೆಂಗಳೂರು ನಿವಾಸಿ ಕೆ.ಆರ್.ನಾಗರತ್ನಮ್ಮ (ಸುಮಿತ್ರಮ್ಮ) ಅವರು ಶುಕ್ರವಾರ ರಾತ್ರಿ ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು.

ಇವರು ಹೆಬ್ಬೂರು ಮೂಲದ ಲೇಟ್ ಹೆಚ್.ವಿ.ವೆಂಕಟಸುಬ್ಬಯ್ಯ ಅವರ ಧರ್ಮಪತ್ನಿ, ಮೂವರು ಪುತ್ರರು, ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಬೆಂಗಳೂರಿನ ಚಾಮರಾಜಪೇಟೆಯ ಹಿಂದೂ ರುದ್ರಭೂಮಿಯಲ್ಲಿ ಶನಿವಾರ ನೆರವೇರಿಸಲಾಯಿತು ಕುಟುಂಬದ ಮೂಲಗಳು ತಿಳಿಸಿವೆ.

ಸಮಾಜದ ತೊಡಕು ಸರಿಪಡಿಸುವ ಮನೋಭಾವ ಬೆಳೆಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಎಂಎಲ್‌ಸಿ ಮಧು ಜಿ.ಮಾದೇಗೌಡ ಸಲಹೆ



ಭಾರತೀನಗರ, ಜು.23– ವಿದ್ಯಾರ್ಥಿಗಳು ಸಮಾಜದ ತೊಡಕುಗಳನ್ನು ಸರಿಪಡಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ತಿಳಿಸಿದರು.

ಹನುಮಂತನಗರದ ಶ್ರೀಆತ್ಮಲಿಂಗೇಶ್ವರ ಸಮುದಾಯ ಭವನದಲ್ಲಿ ಭಾರತಿ ಕಾಲೇಜಿನ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರದ ಸಮಾಜ ಕಾರ್ಯ ವಿಭಾಗದಿಂದ ನಡೆದ ಗ್ರಾಮೀಣ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರುವುದು ಮುಖ್ಯವಲ್ಲ. ಸಮಾಜದಲ್ಲಿ ಎದುರಾಗುವ ಕೆಲ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಆಗ ನಿಮ್ಮ ಓದಿಗೆ ಸಾರ್ಥಕತೆ ಸಿಗುತ್ತದೆ ಎಂದರು.

ಪ್ರಸ್ತುತ ಪರಿಸರ ನಾಶಗೊಳ್ಳುತ್ತಿದೆ. ಹೀಗಾಗಿ ಉತ್ತಮ ಪರಿಸರ ನಿರ್ಮಾಣ ನಿಮ್ಮ ಗುರಿಯಾಗಬೇಕು. ನಮ್ಮ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಅನೇಕರು ದೇಶ–ವಿದೇಶಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿ ಸಾಧನೆ ಮಾಡಿದ್ದಾರೆ. ಅವರಂತೆ ನೀವು ಆಗಬೇಕೆಂಬುದು ನಮ್ಮ ಆಶಯ ಎಂದರು.

ಮಂಡ್ಯ ತೂಬಿನಕೆರೆ ಸರ್‌ಎಂವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಚ್.ಕೆ. ರಾಮೇಗೌಡ ಮಾತನಾಡಿ, ವಿದ್ಯಾರ್ಥಿ ದಿಸೆಯಲ್ಲೇ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಅಂಕಗಳಿಗಲ್ಲ. ಬದಲಿಗೆ ಜ್ಞಾನ ಸಂಪಾದನೆಗಾಗಿ ಎಂದ ಅವರು, ವಿದ್ಯಾರ್ಥಿಗಳು ಎಂದಿಗೂ ಉತ್ಸಾಹ ಕಳೆದುಕೊಳ್ಳಬಾರದು. ಪುಸ್ತಕಗಳನ್ನು ಓದುವುದರಿಂದ ಜ್ಞಾನ ಹಸಿವು ಹೆಚ್ಚಾಗಬೇಕು ಎಂದರು.

ಇದೇ ವೇಳೆ ಪ್ರಾಧ್ಯಾಪಕ ಹೆಚ್.ಕೆ. ರಾಮೇಗೌಡ ಅವರನ್ನು ಸನ್ಮಾನಿಸಲಾಯಿತು. ಬಿಇಟಿ ಕಾರ್ಯದರ್ಶಿ ಸಿದ್ದೇಗೌಡ, ಪ್ರಾಂಶುಪಾಲ ಡಾ.ಪಿ.ನಾಗೇಂದ್ರ, ಭಾರತೀ ಕಾಲೇಜಿನ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ ವಿಭಾಗದ ನಿರ್ದೇಶಕ ಎಸ್.ನಾಗರಾಜು, ಪ್ರಾಂಶುಪಾಲರಾದ ಪುಟ್ಟಸ್ವಾಮಿ, ಸುರೇಶ್, ಪ್ರಾಧ್ಯಾಪಕ ಕೆ.ಸಿ.ಸುಂದ್ರೇಶ್, ಸಹಪ್ರಾಧ್ಯಾಪಕ ಎಂ.ಸಿ.ರಂಜಿತ್, ಎಸ್.ಗೀತಾ, ಬಿ.ಸಿ.ಡಾ. ಬಾಬು, ಗ್ರಾಪಂ ಅಧ್ಯಕ್ಷ ಶಿವಲಿಂಗಯ್ಯ, ಪಿಡಿಓ ನಂಜುಂಡಯ್ಯ ಸೇರಿದಂತೆ ಹಲವರಿದ್ದರು.

ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ: ಕಾಮುಕನಿಗೆ ಧರ್ಮದೇಟು

ಕೆ.ಆರ್.ಪೇಟೆ, ಜು.23– ಪಟ್ಟಣದ ಬಸ್ ನಿಲ್ದಾಣದಲ್ಲಿ ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಕಾಮುಕನಿಗೆ ಜನರು ಧರ್ಮದೇಟು ನೀಡಿ ಪೊಲೀಸರಿಗೆ ಒಪ್ಪಿಸಿರುವ



ಘಟನೆ ಭಾನುವಾರ ಸಂಜೆ ನಡೆದಿದೆ. ಪಟ್ಟಣದ ಬಸ್ ನಿಲ್ದಾಣದಲ್ಲಿ ಊರಿಗೆ ಹೋಗಲು ಬಸ್ಸಿನಲ್ಲಿ ಕುಳಿತ್ತಿದ್ದ 14 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಮೈಸೂರು ಜಿಲ್ಲೆ ಸಾಲಿಗ್ರಾಮ ತಾಲೂಕಿನ ಲಕ್ಷ್ಮೀಪುರ ಗ್ರಾಮದ ನಿವಾಸಿ ನವೀನ್(34) ಸಾರ್ವಜನಿಕರಿಂದ ಧರ್ಮದೇಟು ತಿಂದು ಪೊಲೀಸರ ಅತಿಥಿಯಾಗಿರುವ ಕಾಮುಕ.

ವಿವರ: ಆರೋಪಿ ನವೀನ್ ನಿತ್ಯ ಪಾನಮತ್ತನಾಗಿ ಬಸ್ ನಿಲ್ದಾಣದಲ್ಲಿ ಶಾಲಾ–ಕಾಲೇಜು ಮಕ್ಕಳನ್ನು ಚುಡಾಯಿಸುವುದು. ಒಂಟಿ ಮಹಿಳೆಯರನ್ನು ರೇಗಿಸುತ್ತಾ ಬೆಳಗ್ಗೆಯಿಂದ ಸಂಜೆವರೆಗೂ ಬಸ್ ನಿಲ್ದಾಣದಲ್ಲೇ ಕಾಲ ಕಳೆಯುತ್ತಿದ್ದ. ಭಾನುವಾರ ಸಂಜೆ 4.30ರಲ್ಲಿ ಶೀಳನೆರೆ ಮಾರ್ಗವಾಗಿ ಹೋಗಲು ನಿಂತಿದ್ದ ಬಸ್ಸಿಗೆ ಹತ್ತಿದ ನವೀನ್ ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ. ಈ ವೇಳೆ ಬಾಲಕಿ ರಕ್ಷಣೆಗಾಗಿ ಕಿರುಚಿಕೊಂಡಿದ್ದಾಳೆ. ಈ ವೇಳೆ ಅಲ್ಲಿಂದ ಪರಾರಿಯಾಗಲು ಯತ್ನಿಸಿದ ಕಾಮುಕ ನವೀನ್‌ನನ್ನು ಬಸ್ ನಿಲ್ದಾಣದಲ್ಲಿದ್ದ ಸಾರ್ವಜನಿಕರು ಬೆನ್ನಟ್ಟಿ ಹಿಡಿದು ಧರ್ಮದೇಟು ನೀಡಿ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಆರೋಪಿ ವಶಕ್ಕೆ ಪಡೆದಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮನ್‌ಮುಲ್ ಅಧಿಕಾರ ಹಿಡಿಯಲು ಕಾಂಗ್ರೆಸ್ ಷಡ್ಯಂತ್ರ

ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಆರೋಪ

ಮಂಡ್ಯ, ಜು.23– ವಾಮಮಾರ್ಗದಲ್ಲಿ ಮಂಡ್ಯ ಹಾಲು ಒಕ್ಕೂಟದ ಆಡಳಿತ ಹಿಡಿಯಲು ಕಾಂಗ್ರೆಸ್ ಷಡ್ಯಂತ್ರ ರೂಪಿಸುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಆರೋಪಿಸಿದರು.

ಜಿಲ್ಲಾ ಬಿಜೆಪಿ ವಿಕಾಸ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನ್‌ಮುಲ್‌ನ ಬಿಜೆಪಿ, ಜೆಡಿಎಸ್ ಸದಸ್ಯರನ್ನು ಅಮಾನತುಗೊಳಿಸಿ ವಾಮಮಾರ್ಗದಲ್ಲಿ ಅಧಿಕಾರ ಹಿಡಿಯಲು ಕಾಂಗ್ರೆಸ್ ಹುನ್ನಾರ ನಡೆಸುತ್ತಿದೆ. ಇಂತಹ ಬೆಳವಣಿಗೆ ಸಹಿಸುವುದಿಲ್ಲ. ಒಂದು ವೇಳೆ ಇಂತಹ ಧೋರಣೆ ಅನುಸರಿಸಿದಲ್ಲಿ ಕಾನೂನು ಮತ್ತು ಬಹಿರಂಗವಾಗಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಜು.6ರಂದು ಮನ್‌ಮುಲ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಕಾಂಗ್ರೆಸ್‌ನವರು ನಮ್ಮ ಸದಸ್ಯರನ್ನು ಅಮಾನತುಗೊಳಿಸಿ ಆಡಳಿತ ಹಿಡಿಯಲು ಹುನ್ನಾರ ನಡೆಸಿದ್ದು ವಿಫಲವಾಯಿತು. ಇದೀಗ ಮತ್ತೆ (ನಾಳೆ) ಸೋಮವಾರ ಚುನಾವಣೆ ನಿಗದಿಯಾಗಿದ್ದು, ಮತ್ತೆ ಬಿಜೆಪಿ, ಜೆಡಿಎಸ್ ಸದಸ್ಯರನ್ನು ಅಮಾನತುಗೊಳಿಸಿ ಅಧಿಕಾರ ಹಿಡಿಯಲು ಮುಂದಾಗಿದೆ ಎಂದು ಆರೋಪಿಸಿದರು.



ಇಂದು ಮನ್‌ಮುಲ್ ಅಧ್ಯಕ್ಷ ಚುನಾವಣೆ

ಮಂಡ್ಯ: ಮನ್‌ಮುಲ್ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆಯಲಿದೆ. ಈ ಹಿಂದೆ ನಾಮಪತ್ರ ಸಲ್ಲಿಸಿ, ಕೋರಂ ಅಭಾವದಿಂದ ಚುನಾವಣೆ ಮುಂದೂಡಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ಚುನಾವಣೆ ನಡೆಯಲಿದ್ದು, ಕಣದಲ್ಲಿ ಕಾಂಗ್ರೆಸ್‌ನಿಂದ ಬೋರೇಗೌಡ ಜೆಡಿಎಸ್‌ನಿಂದ ಹೆಚ್.ಟಿ.ಮಂಜು, ರಘುನಂದನ್ ಹಾಗೂ ನೆಲ್ಲಿಗೆರೆ ಬಾಲು ಕಣದಲ್ಲಿದ್ದು, ಜೆಡಿಎಸ್‌ನ ಮೂವರ ಪೈಕಿ ಒಬ್ಬರು ಅಂತಿಮ ಕಣದಲ್ಲಿ ಉಳಿಯಲಿದ್ದಾರೆ.

ನಮ್ಮ ಸರ್ಕಾರದ ಅವಧಿಯಲ್ಲಿ ಜಿಲ್ಲಾಡಳಿತದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಆದರೆ ಈಗ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರು ಜಿಲ್ಲಾಡಳಿತದ ಪ್ರತಿ ಹಂತದಲ್ಲೂ ಹಸ್ತಕ್ಷೇಪ ಮಾಡುತ್ತಿದ್ದಾರೆ. ಆ ಮೂಲಕ ಒಕ್ಕೂಟದ ಆಡಳಿತದ ಚುಕ್ಕಾಣಿ ಹಿಡಿಯಲು ಕುತಂತ್ರ ನಡೆಸುತ್ತಿದ್ದಾರೆ ಎಂದು ದೂರಿದರು.

ಜಿಲ್ಲೆಯ ಜನತೆ ಅವರನ್ನು ಚಿಕ್ಕ ವಯಸ್ಸಿನಲ್ಲೇ ಶಾಸಕರು, ಸಂಸದರನ್ನಾಗಿ ಮಾಡಿದ್ದಾರೆ. ಸದ್ಯ ಉಸ್ತುವಾರಿ ಸಚಿವರಾಗಿದ್ದು, ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಲಿ. ಅದಕ್ಕೆ ನಮ್ಮ ಸಹಕಾರವಿದೆ. ಅದು ಬಿಟ್ಟು ಇಂತಹ ಕ್ಷುಲ್ಲಕ ರಾಜಕಾರಣ ಮಾಡಿದ್ದೇ ಆದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಹಾಲು ಉತ್ಪಾದಕರಿಗೆ ಮನ್‌ಮುಲ್ ಆಡಳಿತ ಮಂಡಳಿ ಹಾಲಿನ ದರದಲ್ಲಿ 1.75 ರೂ. ಕಡಿತಗೊಳಿಸಿರುವುದನ್ನು ವಿರೋಧಿಸಿದ ಅವರು, ತಕ್ಷಣ ಕಡಿತ ಮಾಡಿರುವ ಹಾಲಿನ ದರ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

65 ಮಂದಿಯೂ ವಿಪಕ್ಷ ನಾಯಕರೇ: ಬಿಜೆಪಿಯಿಂದ ಆಯ್ಕೆಯಾಗಿರುವ 65 ಶಾಸಕರೂ ವಿಪಕ್ಷ ನಾಯಕರೇ. ಎಲ್ಲರೂ ಸದನದಲ್ಲಿ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ಮಾಡಿದ್ದಾರೆ. ಸರ್ಕಾರ ಅದನ್ನು ಸಹಿಸದೆ ಅಮಾನತು ಮಾಡುವಂತಹ ಕ್ರಮಕ್ಕೆ ಮುಂದಾಗಿದೆ ಎಂದು ಕಿಡಿಕಾರಿದರು.

ಜಿಲ್ಲಾ ಪ್ರಭಾರಿ ಜಗದೀಶ್ ಹಿರೇಮನಿ ಮಾತನಾಡಿದರು. ಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದ ರಾಮಯ್ಯ, ಮನ್‌ಮುಲ್ ನಿರ್ದೇಶಕಿ ರೂಪ, ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ಇದ್ದರು.

ಬಿಜೆಪಿ– ಜೆಡಿಎಸ್ ಹೊಂದಾಣಿಕೆ, ಬಿಜೆಪಿ ನಿರ್ದೇಶಕರ ಅನರ್ಹತೆ ಬಗ್ಗೆ ವದಂತಿ

ಮಂಡ್ಯ: ಮನ್‌ಮುಲ್‌ನಲ್ಲಿ ಅಧಿಕಾರ ಹಿಡಿಯಬೇಕೆಂಬ ನಿಟ್ಟಿನಲ್ಲಿ 6 ನಿರ್ದೇಶಕರನ್ನು ಹೊಂದಿರುವ ಜೆಡಿಎಸ್ ಹಾಗೂ ಇಬ್ಬರು ನಿರ್ದೇಶಕರನ್ನು ಹೊಂದಿರುವ ಬಿಜೆಪಿ ಹೊಂದಾಣಿಕೆ ಮಾಡಿಕೊಂಡಿದ್ದು, ಕಾಂಗ್ರೆಸ್ ಅನ್ನು ಅಧಿಕಾರದಿಂದ ದೂರ ಇಡಲು ಸಿದ್ಧತೆ ಮಾಡಿಕೊಂಡಿವೆ. ಇತ್ತ ಕಾಂಗ್ರೆಸ್ ಹೇಗಾದರೂ ಮಾಡಿ ಅಧಿಕಾರ ಹಿಡಿಯಬೇಕೆಂಬ ಹಂಬಲ ಹೊಂದಿದ್ದು, ನಾನಾ ಲೆಕ್ಕಾಚಾರ ಮಾಡುತ್ತಿದೆ. ಇತ್ತ ಜೆಡಿಎಸ್ ನಿರ್ದೇಶಕರು ಶಿವಮೊಗ್ಗದ ಖಾಸಗಿ ರೆಸಾರ್ಟ್‌ನಲ್ಲಿದ್ದು, ಒಟ್ಟಿಗೆ ಮತದಾನ ಪ್ರಕ್ರಿಯೆಗೆ ಹಾಜರಾಗಲಿದ್ದಾರೆ ಎನ್ನಲಾಗುತ್ತಿದೆ. ಮತ್ತೊಂದೆಡೆ ಬಿಜೆಪಿಯ ಇಬ್ಬರು ನಿರ್ದೇಶಕರ ಪೈಕಿ ಒಬ್ಬರನ್ನು ಅನರ್ಹತೆ ಮಾಡುವ ಬಗ್ಗೆಯೂ ವದಂತಿ ಹರಿದಾಡುತ್ತಿದ್ದು, ಇದು ಎಷ್ಟು ಸತ್ಯ ಎಂಬುದು ಖಾತ್ರಿಯಾಗಿಲ್ಲ.

ವಿದ್ಯಾರ್ಥಿಗಳು ಶಿಸ್ತು ಮೈಗೂಡಿಸಿಕೊಂಡು ಸಾಧನೆ ಮಾಡಿ

ಕೇಂದ್ರದ ಮಾಜಿ ಸಚಿವ ಕೆ.ರೆಹಮಾನ್ ಖಾನ್



ಕೆ.ಆರ್.ಪೇಟೆ, ಜು.23– ವಿದ್ಯಾರ್ಥಿಗಳು ಶಿಸ್ತು, ಸಂಯಮ ಹಾಗೂ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಸಾಧನೆ ಮಾಡಬೇಕು ಎಂದು ಕೇಂದ್ರದ ಮಾಜಿ ಸಚಿವ ಕೆ.ರೆಹಮಾನ್ ಖಾನ್ ತಿಳಿಸಿದರು.

ಪಟ್ಟಣದ ಸ್ಕೂಲ್ ಆಫ್ ಇಂಡಿಯಾ ಶಾಲೆಯಲ್ಲಿ ಆಯೋಜಿಸಿದ್ದ ಪ್ರಸಕ್ತ ಸಾಲಿನ ವಿದ್ಯಾರ್ಥಿಗಳ ನಾಯಕತ್ವ ಪದಗ್ರಹಣ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದಿನ ಸ್ಪರ್ಧಾ ಜಗತ್ತಿನಲ್ಲಿ ಗ್ರಾಮೀಣ ವಿದ್ಯಾರ್ಥಿಗಳು ನಗರ ವಿದ್ಯಾರ್ಥಿಗಳಿಗೆ ತೀವ್ರ ಸ್ಪರ್ಧೆ ನೀಡ ಬೇಕಿರುವುದರಿಂದ ತಮ್ಮಲ್ಲಿರುವ ಕೀಳರಿಮೆ ಬಿಟ್ಟು ಆತ್ಮವಿಶ್ವಾಸದಿಂದ ಮುನ್ನುಗ್ಗಿ ಸಾಧನೆ ಮಾಡಬೇಕು. ಶಿಕ್ಷಣ ಸಾಧಕರ ಸ್ವತ್ತೇ ಹೊರತು ಸೋಮಾರಿಗಳ ಸ್ವತ್ತಲ್ಲ. ಆದ್ದರಿಂದ ವಿದ್ಯಾರ್ಥಿಗಳು ಸೃಜನಶೀಲತೆ ಹಾಗೂ ಕ್ರಿಯಾಶೀಲ ವ್ಯಕ್ತಿತ್ವ ಮೈಗೂಡಿಸಿಕೊಂಡು ಏಕಾಗ್ರತೆಯಿಂದ ವ್ಯಾಸಂಗ ಮಾಡಿ ಸಾಧನೆ ಮಾಡಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಮೈಸೂರು ವಿಭಾಗದ ಎನ್‌ಸಿಸಿ ಕಮಾಂಡೆಂಟ್ ಕರ್ನಲ್ ಆರ್.ಆರ್. ಮೆನನ್ ಶಾಲೆಯ ಅತ್ಯುತ್ತಮ ವಿದ್ಯಾರ್ಥಿಗಳು, ಅಗ್ನಿ, ಜಲ, ವಾಯು, ಭೂಮಿ, ಸಾಂಸ್ಕೃತಿಕ ಹಾಗೂ ಕ್ರೀಡಾ ವಿಭಾಗದ ನಾಯಕರು ಹಾಗೂ ಉಪನಾಯಕರಿಗೆ ಅಧಿಕಾರ ಹಸ್ತಾಂತರ ಮಾಡಿದರು.

ಕಾರ್ಯಕ್ರಮದಲ್ಲಿ ಸ್ಕೂಲ್ ಆಫ್ ಇಂಡಿಯಾ ಶಾಲೆಯ ಸಮರ ಚಾರಿಟಬಲ್ ಟ್ರಸ್ಟ್ ಟ್ರಸ್ಟಿಗಳಾದ ಆಯೇಷ ರೆಹಮಾನ್ ಖಾನ್, ಶಾಜಿಯಾ ಮಕ್ಸೂದ್, ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿ ಡೆಲ್ಲಿ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲೆ ಅನುಪಮಾ ರಾಮಚಂದ್ರ, ಕನ್ನಿಕಾ ಅರವಿಂದ್, ಅಂಜಲಿ ತ್ರಿವೇದಿ, ಮೇರಿ ಫಾತಿಮಾ ಜಾರ್ಜ್, ಶಾಲೆಯ ಮುಖ್ಯ ಶಿಕ್ಷಕಿ ಶೈನಿ ಡಯಾಸ್, ಪುರಸಭೆ ಮಾಜಿ ಅಧ್ಯಕ್ಷ ಕೆ.ಗೌಸ್ ಖಾನ್ ಸೇರಿದಂತೆ ಇನ್ನಿತರರಿದ್ದರು. ಇದೇ ವೇಳೆ ವಿದ್ಯಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಪೋಷಕರು ಹಾಗೂ ನೋಡುಗರ ಗಮನ ಸೆಳೆಯಿತು.

ಪ್ರತಿಯೊಬ್ಬರೂ ಮಾತೃಭಾಷೆ ಕಲಿಯುವುದು ಅವಶ್ಯಕ: ಸುತ್ತೂರು ಶ್ರೀ

ಮದ್ದೂರು, ಜು.23– ಪ್ರತಿಯೊಬ್ಬರೂ ಮಾತೃಭಾಷೆ ಕಲಿಯುವುದು ಅವಶ್ಯಕ. ಮಾತೃಭಾಷೆಯಲ್ಲಿ ಪ್ರಾವೀಣ್ಯತೆ ಪಡೆದುಕೊಳ್ಳದಿದ್ದರೇ ಬೇರೆ ಯಾವುದೇ ಭಾಷೆಯಲ್ಲಿ ಸುಲಲಿತವಾಗಿ ವ್ಯವಹರಿಸಲು ಅಸಾಧ್ಯ ಎಂದು ಸುತ್ತೂರು ಮಠದ ಪೀಠಾಧ್ಯಕ್ಷ ಡಾ.ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಹೆಚ್.ಕೆ.ವೀರಣ್ಣಗೌಡ ಕಾಲೇಜಿನ ಎಸ್.ಡಿ.ಜಯರಾಂ ವೇದಿಕೆಯಲ್ಲಿ ಆಯೋಜಿಸಿದ್ದ ಕನ್ನಡ ಸಂಘ ಉದ್ಘಾಟಿಸಿ, ನೂತನ ಸಚಿವರು, ಶಾಸಕರ ಅಭಿನಂದನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕನ್ನಡ ಶಾಲೆಯಲ್ಲಿ ವ್ಯಾಸಂಗ ಮಾಡಿದ ಹಲವರು ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಉದಾಹರಣೆಗಳು ನಮ್ಮ ಕಣ್ಮುಂದಿವೆ. ಒಬ್ಬ ವ್ಯಕ್ತಿ ತನ್ನ ತಾಯಿಯನ್ನು ಹೇಗೆ ಪ್ರೀತಿಸುತ್ತಾನೋ ಹಾಗೇ ಭಾಷೆಯನ್ನು ಪ್ರೀತಿಸಬೇಕು. ವಿದ್ಯಾರ್ಥಿಗಳು ಆಸಕ್ತಿ, ಶ್ರದ್ಧೆ ಮತ್ತು ಗುರಿ ಮೈಗೂಡಿಸಿಕೊಂಡು ಉತ್ತಮ ಸಾಧನೆ ಮಾಡಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ನಾಗಮಂಗಲದ ಬಿಜಿಎಸ್ ಮತ್ತು ಮೈಸೂರಿನ ಜೆಎಸ್‌ಎಸ್ ಕ್ಷೇತ್ರಗಳು ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ತಮ್ಮದೇ ಆದ ಕೊಡುಗೆ ನೀಡುತ್ತಿವೆ ಎಂದರು.

ಹೆಚ್.ಕೆ.ವೀರಣ್ಣಗೌಡ ಕಾಲೇಜು ಹಲವು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ತಮ್ಮದೇ ಆದ ಕೊಡುಗೆ ನೀಡುತ್ತಾ ಬಂದಿರುವುದು ಶ್ಲಾಘನೀಯ ಎಂದರು. ಇದೇ ವೇಳೆ ರಾಣೆಬೆನ್ನೂರು ಶಾಸಕ ಪ್ರಕಾಶ್.ಕೆ.ಕೋಳಿವಾಡ, ವಿಧಾನ ಪರಿಷತ್ ಮಾಜಿ ಸದಸ್ಯ, ಅತ್ಯುತ್ತಮ ಮೇಲ್ಮನೆ ಸದಸ್ಯರೆಂಬ ಕೀರ್ತಿಗೆ ಭಾಜನರಾಗಿ ಕರ್ನಾಟಕ ಸರ್ಕಾರದಿಂದ ಅಭಿನಂದಿಸಲ್ಪಟ್ಟ ಕೆ.ಟಿ.ಶ್ರೀಕಂಠೇಗೌಡರನ್ನು ಸುತ್ತೂರು ಶ್ರೀಗಳು ಅಭಿನಂದಿಸಿದರು.

ಈ ವೇಳೆ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಎಂ.ಹೆಚ್. ಚನ್ನೇಗೌಡ ವಿದ್ಯಾಸಂಸ್ಥೆ ಗೌರವಾಧ್ಯಕ್ಷ ಕೆ.ಟಿ.ಚಂದು, ಅಧ್ಯಕ್ಷ ಎಂ.ಸ್ವರೂಪ್ ಚಂದ್, ಕಾರ್ಯದರ್ಶಿ ಸಿ.ಅಪೂರ್ವಚಂದ್ರ, ಪ್ರಾಂಶುಪಾಲರಾದ ಜಿ.ಸಿ ಶಂಕರೇಗೌಡ, ಯು.ಎಸ್.ಶಿವಕುಮಾರ್, ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕದಿಂದ ರಾಜ್ಯಸಭೆಗೆ ಸೋನಿಯಾ ಗಾಂಧಿ ಆಯ್ಕೆ?

ಏಪ್ರಿಲ್‌ನಲ್ಲಿ ಖಾಲಿಯಾಗುವ ಮೂರು ಸ್ಥಾನಗಳ ಪೈಕಿ ಒಂದರಲ್ಲಿ ಸೋನಿಯಾ ಆಯ್ಕೆಗೆ ಖರ್ಗೆ, ಸಿದ್ದರಾಮಯ್ಯ ಒಲವು

ಬೆಂಗಳೂರು, ಜು.23– ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಕರ್ನಾಟಕದಲ್ಲಿ ಮುಂದಿನ ಎಂಟು ತಿಂಗಳಲ್ಲಿ ಚುನಾವಣೆ ನಡೆಯಬೇಕಿದೆ. ಈ ಬಾರಿ ಮೇಲ್ಮನೆಗೆ ರಾಜ್ಯದಿಂದ ಎಐಸಿಸಿ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಆಯ್ಕೆ ಮಾಡಲು ಕಾಂಗ್ರೆಸ್ ಬಯಸಿದೆ ಎನ್ನಲಾಗುತ್ತಿದೆ.



ಅನಾರೋಗ್ಯದ ಹಿನ್ನೆಲೆಯಲ್ಲಿ ಮುಂಬರುವ 2024ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರುವ ಸಾಧ್ಯತೆಯಿರುವುದರಿಂದ ಸೋನಿಯಾ ಅವರು ಕರ್ನಾಟಕದಿಂದ ರಾಜ್ಯಸಭಾ ಸದಸ್ಯೆಯಾಗುವಂತೆ ಸಿಎಂ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ ಎಂಬ ಗುಸುಗುಸು ರಾಜಕೀಯ ವಲಯದಿಂದ ಕೇಳಿಬರುತ್ತಿದೆ.

ಕರ್ನಾಟಕದ ಮೂವರು ಕಾಂಗ್ರೆಸ್ ರಾಜ್ಯಸಭಾ ಸದಸ್ಯರಾದ ಸೈಯದ್ ನಾಸೀರ್ ಹುಸೇನ್, ಡಾ. ಎಲ್ ಹನುಮಂತಯ್ಯ ಮತ್ತು ಜಿಸಿ ಚಂದ್ರಶೇಖರ್ ಅವರ ಅವಧಿ ಮುಂದಿನ ವರ್ಷ ಏಪ್ರಿಲ್ 2 ರಂದು ಕೊನೆಗೊಳ್ಳಲಿದೆ. ಹೀಗಾಗಿ, ಈ ಮೂರೂ ಸ್ಥಾನಗಳಿಗೆ ಪುನಃ ತನ್ನ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಕಾಂಗ್ರೆಸ್ ಮುಂದಾಗಿದೆ. ಅಲ್ಲದೆ, ಇದೀಗ 135 ಶಾಸಕರನ್ನು ಹೊಂದಿರುವ ಕಾಂಗ್ರೆಸ್ ತನ್ನ ಎಲ್ಲಾ ಮೂರು ಸ್ಥಾನಗಳನ್ನು ಉಳಿಸಿಕೊಳ್ಳುವ ಅವಕಾಶವಿದೆ.

ದಿವಂಗತ ರಾಜೀವ್ ಗಾಂಧಿ ಅವರು ವಿರೋಧ ಪಕ್ಷದ ನಾಯಕರಾಗಿದ್ದ 1989 ರಿಂದಲೂ ತಾವು ತಂಗಿರುವ 10, ಜನಪಥ್ ನಿವಾಸವನ್ನು ಉಳಿಸಿಕೊಳ್ಳಲು ಸೋನಿಯಾ ಗಾಂಧಿ ಮುಂದಿರುವುದು ಒಂದೇ ಆಯ್ಕೆ. ಅದುವೇ ಅವರು ಸಂಸದೆಯಾಗುವುದು ಇಲ್ಲವೇ ರಾಜ್ಯಸಭೆ ಸದಸ್ಯೆಯಾಗುವುದು ನಿರ್ಣಾಯಕವಾಗಿದೆ.

ಹೀಗಾಗಿ, ಸೋನಿಯಾ ಗಾಂಧಿ ಅವರೊಂದಿಗೆ ಉತ್ತರ ಪ್ರದೇಶ ಮೂಲದ ಎಐಸಿಸಿ ವಕ್ತಾರೆ ಸುಪ್ರಿಯಾ ಶ್ರೀನಾಟೆ ಮತ್ತು ಕರ್ನಾಟಕದ ಸೈಯದ್ ನಾಸೀರ್ ಹುಸೇನ್ ಅವರನ್ನು ರಾಜ್ಯಸಭೆಗೆ ಮರುನಾಮಕರಣ ಮಾಡಲು ಕಾಂಗ್ರೆಸ್ ಮುಂದಾಗಿದೆ ಎನ್ನಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಸೋನಿಯಾ ಅವರನ್ನು ಕರ್ನಾಟಕದಿಂದ ರಾಜ್ಯಸಭಾ ಸದಸ್ಯೆಯಾಗುವಂತೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರತಿಪಕ್ಷಗಳ ಸಮಾವೇಶದಲ್ಲಿ ಪಾಲ್ಗೊಳ್ಳಲು ಇತ್ತೀಚೆಗೆ ಸೋನಿಯಾ ಗಾಂಧಿ ಅವರು ಬೆಂಗಳೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರೊಂದಿಗೆ ಮಾತನಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ನೆಹರು–ಗಾಂಧಿ ಕುಟುಂಬದ ಯಾವುದೇ ಸದಸ್ಯರು ಸಂಸತ್ತಿನಲ್ಲಿ ಇರದಂತೆ ನೋಡಿಕೊಳ್ಳಲು ಬಿಜೆಪಿ ಯೋಜಿಸುತ್ತಿರುವುದರಿಂದ, ಕಾಂಗ್ರೆಸ್ ಅವರಿಗೆ ಸುರಕ್ಷಿತ ಮಾರ್ಗಗಳನ್ನು ಒದಗಿಸಲು ಯೋಜನೆ ರೂಪಿಸುತ್ತಿದೆ ಎಂದು ಅವರು ಹೇಳಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಸೋನಿಯಾ ಪುತ್ರಿ ಪ್ರಿಯಾಂಕಾ ಗಾಂಧಿ ವಾದ್ರಾ ಹಿಮಾಚಲ ಪ್ರದೇಶದಿಂದ ರಾಜ್ಯಸಭೆಗೆ ನಾಮನಿರ್ದೇಶನಗೊಳ್ಳುವ ಸಾಧ್ಯತೆ ಇದೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ. ಮಾಜಿ ವಯನಾಡ್ ಲೋಕಸಭಾ ಸದಸ್ಯ ರಾಹುಲ್ ಗಾಂಧಿ ಮಾನನಷ್ಟ ಮೊಕದ್ದಮೆಯಲ್ಲಿ ಶಿಕ್ಷೆಗೊಳಗಾದ ನಂತರ ಲೋಕಸಭೆಯಿಂದ ಅನರ್ಹಗೊಂಡಿರುವುದರಿಂದ ಇದು ಕುಟುಂಬಕ್ಕೆ ನಿರ್ಣಾಯಕವಾಗಿದೆ ಎಂದು ಅವರು ಹೇಳಿದರು.

ಬಿಹಾರದಲ್ಲಿ 40 ಅಡಿ ಆಳದ ಕೊಳವೆ ಬಾವಿಗೆ ಬಿದ್ದ ಮಗುವಿನ ರಕ್ಷಣೆ

ಪಾಟ್ನಾ, ಜು.23– ಬಿಹಾರದ ನಳಂದ ಜಿಲ್ಲೆಯ ಕುಲ್ ಗ್ರಾಮದಲ್ಲಿ 40 ಅಡಿ ಆಳದ ಕೊಳವೆ ಬಾವಿಗೆ ಬಿದ್ದಿದ್ದ 3 ವರ್ಷದ ಮಗುವನ್ನು ರಕ್ಷಿಸಲಾಗಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ಮಗುವನ್ನು ರಕ್ಷಿಸಲಾಗಿದೆ. ರಕ್ಷಣಾ ಕಾರ್ಯಾಚರಣೆಯು ಕೆಲವು ಗಂಟೆಗಳ ವರೆಗೆ ಮುಂದುವರಿಯಿತು. ಈ ಕುರಿತು ಸುದ್ದಿಸಂಸ್ಥೆ 'ಎಎನ್‌ಐ' ಟ್ವೀಟ್ ಮಾಡಿದೆ.

ಕೊಳವೆ ಬಾವಿಗೆ ಬಿದ್ದ ಮಗುವನ್ನು ಶಿವಂ ಕುಮಾರ್ ಎಂದು ಗುರುತಿಸಲಾಗಿದೆ. ರೈತರೊಬ್ಬರಿಗೆ ಸೇರಿದ ಕೊಳವೆ ಬಾವಿ ಇದಾಗಿದೆ. ಇದನ್ನು ಮುಚ್ಚದ ಕಾರಣ ಮಗು ಕೊಳವೆ ಬಾವಿಗೆ ಬಿದ್ದಿರುವುದು ತಿಳಿದು ಬಂದಿದೆ. ಜೊತೆಗೆ ಆಟವಾಡುತ್ತಿದ್ದ ಮಕ್ಕಳು ಮಗುವಿನ ಪೋಷಕರಿಗೆ ಮಾಹಿತಿ ನೀಡಿದ್ದಾರೆ.



ಮೈಸೂರು ತಾಲೂಕು ನಾಯಕ ಸಂಘದ ಅಧ್ಯಕ್ಷ ಉದ್ಬೂರು ಮಹಾದೇವಸ್ವಾಮಿ ಹಾಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕ ಸಂಘದ ಉಪಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರನ್ನು ನಾಯಕ ಸಮುದಾಯದ ಹಿರಿಯ ಮುಖಂಡ ಟೆನ್ನಿಸ್ ಗೋಪಿ, ನಾಗವಾಲ ತಿಮ್ಮನಾಯಕ ನೌಕರ ಸಂಘದ ಅಧ್ಯಕ್ಷ ಜಗದೀಶ್, ರಮ್ಮನಹಳ್ಳಿ ಸೋಮಣ್ಣ, ಕಡಕೊಳ ಕುಮಾರಸ್ವಾಮಿ, ಹಿನಕಲ್ ಚಂದ್ರು, ನಾಗವಾಲ ವಿನೋದ್, ನಜರ್‌ಬಾದ್ ನಾರಾಯಣ, ಸೋಮೇಶ್ವರಪುರ ನಾರಾಯಣ್, ಉದ್ಬೂರು ಅಂಕಪ್ಪ ಮತ್ತಿತರರು ಅಭಿನಂದಿಸಿದರು.

ವಿಶ್ವ ಸ್ನೂಕರ್ ಚಾಂಪಿಯನ್‌ಶಿಪ್‌ನಲ್ಲಿ ಕೋಲಾರದ ಯುವತಿಗೆ ಚಿನ್ನ

ಕೋಲಾರ, ಜು.23– ಸೌದಿ ಅರೇಬಿಯಾದಲ್ಲಿ ನಡೆದ ಸ್ನೂಕರ್ ವಿಶ್ವಚಾಂಪಿಯನ್‌ಶಿಪ್ ಟೂರ್ನಿಯಲ್ಲಿ ಕೋಲಾರದ ಕೆಜಿಎಫ್ ಯುವತಿ ಕೀರ್ತನಾ ಚಿನ್ನದ ಪದಕ ಗೆದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಈ ಹಿಂದೆ ವಿಶ್ವಚಾಂಪಿಯನ್ ಟೂರ್ನಿಯಲ್ಲಿ ಕಂಚು, ಬೆಳ್ಳಿ ಗೆದ್ದು ಸಾಧನೆ ಮಾಡಿದ್ದ ಕೀರ್ತನಾ ಈ ಬಾರಿ ಚಿನ್ನಕ್ಕೆ ಮುತ್ತಿಟ್ಟಿದ್ದಾರೆ.

ಕೋಲಾರದ ಜಿಲ್ಲೆಯ ಯುವಸಮೂಹಕ್ಕೆ ಸಾಧನೆಯ ಮೆಟ್ಟಿಲು ಕಠಿಣವಾದರೂ ಛಲವಿದೆ ಬಿಡದೇ ಸಾಧಿಸುವ ಮನಸ್ಸಿದೆ ಅನ್ನೋದಕ್ಕೆ ಕೀರ್ತನಾ ಉದಾಹರಣೆಯಾಗಿದ್ದಾರೆ. ಅಂಡರ್ 16ನಲ್ಲಿ ಬೆಳ್ಳಿ, ಅಂಡರ್ 18ನಲ್ಲಿ ಕಂಚು ಗೆದ್ದಿದ್ದ ಕೀರ್ತನಾ ಇದೀಗ ಅಂಡರ್ 21ನಲ್ಲಿ ಚಿನ್ನಕ್ಕೆ ಮುತ್ತಿಟ್ಟು ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ದಾಸರಹೊಸಹಳ್ಳಿ ನಿವಾಸಿ ಪಾಂಡಿಯನ್ ಹಾಗೂ ಜಯಲಕ್ಷ್ಮಿ ದಂಪತಿಗಳ ಪುತ್ರಿ ಕೀರ್ತನಾ ವಿಶ್ವ ಸ್ನೂಕರ್ ಚಾಂಪಿಯನ್ ಶಿಪ್ ನಲ್ಲಿ ಚಿನ್ನ ಗೆಲ್ಲುವ ಮೂಲಕ ದೇಶಕ್ಕೆ



ಕೀರ್ತಿ ತಂದಿದ್ದಾಳೆ. ಕೆಜಿಎಫ್‌ನ ಮಹಾವೀರ್ ಜೈನ್ ಕಾಲೇಜಿನ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿನಿಯಾಗಿರುವ ಕೀರ್ತಿನಾ ಸದ್ದಿಲ್ಲದೇ ಸ್ನೂಕರ್ ಕ್ರೀಡೆಯಲ್ಲಿ ತನ್ನದೇ ಛಾಪು ಮೂಡಿಸುತ್ತಾ ಸಾಗಿದ್ದಾಳೆ.

ಈಕೆಯ ತಂದೆ ಪಾಂಡಿಯನ್ ಕೆಜಿಎಫ್‌ನಲ್ಲಿರುವ ಬಿಇಎಂಎಲ್ ಕ್ಲಬ್‌ನಲ್ಲಿ ನಲ್ಲಿ ಉಪ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದು, ತಾಯಿ ಜಯಲಕ್ಷ್ಮಿ ಗೃಹಿಣಿಯಾಗಿದ್ದಾರೆ. ತನ್ನ ತಂದೆಯಿಂದಲೇ ಪ್ರೇರಣೆ ಪಡೆದ ಕೀರ್ತನಾ ಸ್ನೂಕರ್‌ನ ಕ್ಯೂ ಕೈಗೆತ್ತಿಕೊಂಡಿದ್ದಳು. ಬಿಡುವಿನ ವೇಳೆಯಲ್ಲಿ ಕೆಜಿಎಫ್ ನಗರದ ಬಿಇಎಂಎಲ್ ಕ್ಲಬ್‌ನಲ್ಲಿರುವ ಬಿಲಿಯರ್ಡ್ಸ್‌ನಲ್ಲಿ ಅಭ್ಯಾಸ ಮಾಡುತ್ತಿದ್ದರು. 13ನೇ ವಯಸ್ಸಿಗೆ ಬಾಲ್ ಹೊಡೆಯಲಾರಂಭಿಸಿದ ಹುಡುಗಿ ಈಗ ಚಿನ್ನಗೆದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾಳೆ. ರಾಷ್ಟ್ರೀಯ ಮಟ್ಟದಲ್ಲಿ 20ಕ್ಕೂ ಹೆಚ್ಚು ಪದಕಗಳನ್ನ ಬಾಚಿಕೊಂಡಿದ್ದಾರೆ.

2017ರಲ್ಲಿ ಚೀನಾದಲ್ಲಿ ನಡೆದ ಅಂಡರ್ 19 ಟೂರ್ನಿಯಲ್ಲಿ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡಿದ್ದರು. 2018ರಲ್ಲಿ ರಷ್ಯಾದಲ್ಲಿ ಬೆಳ್ಳಿ ಪದಕ ಹಾಗೂ ಚಿನ್ನದ ಪದಕ, 2022 ರಲ್ಲಿ ರೋಮಾನಿಯಾದಲ್ಲಿ ಕಂಚು ಗೆದ್ದು, ಇದೀಗ ಅಂಡರ್ 21 ನಲ್ಲಿ ಸೌದಿ ಅರೇಬಿಯಾದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಮುಂದೆ ಪ್ರೊಫೆಷನಲ್ಸ್ ಕ್ಲಬ್‌ಗಳಲ್ಲಿ ಭಾಗವಹಿಸಬೇಕು, ಇನ್ನಷ್ಟು ಪದಕಗಳನ್ನು ಗೆಲ್ಲಬೇಕು ಎಂಬುದು ಈಕೆಯ ಗುರಿಯಾಗಿದೆ.

ಮಣಿಪುರ ಕ್ರೌರ್ಯ ನಡೆದ ದಿನವೇ ಮತ್ತಿಬ್ಬರು ಯುವತಿಯರ ಮೇಲೆ ಸಾಮೂಹಿಕ ಅತ್ಯಾಚಾರ, ಭೀಕರ ಹತ್ಯೆ



ಇಂಫಾಲ, ಜು.23– ಇಡೀ ದೇಶವನ್ನು ಬೆಚ್ಚಿ ಬೀಳಿಸಿದ ಮಣಿಪುರ ಮಹಿಳೆಯರ ಬೆತ್ತಲೆ ಮೆರವಣಿಗೆ, ಸಾಮೂಹಿಕ ಅತ್ಯಾಚಾರ ನಡೆದ ಅದೇ ದಿನ ಮಣಿಪುರದಲ್ಲಿ ಹಿಂಸಾಚಾರದ ನೆಪದಲ್ಲೇ ಮತ್ತಿಬ್ಬರು ಯುವತಿಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದು, ಇಬ್ಬರನ್ನೂ ಭೀಕರವಾಗಿ ಹತ್ಯೆ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿದೆ.

ಈ ಬಗ್ಗೆ ಎನ್‌ಡಿಟಿವಿ ವರದಿ ಮಾಡಿದ್ದು, ತಮ್ಮ ಮಗಳ ಪತ್ತೆಯಾಗದಿರುವ ಬಗ್ಗೆ ದೂರು ನೀಡಿರುವ ತಾಯಿ, ಅವರನ್ನು ಸಾಮೂಹಿಕ ಅತ್ಯಾಚಾರ ಮಾಡಿ ಕೊಲೆ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ. ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯ ಇಬ್ಬರು ಬುಡಕಟ್ಟು ಯುವತಿಯರ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡಲಾಗಿದೆ. ಯುವತಿಯರು 21 ಮತ್ತು 24 ವರ್ಷ ವಯಸ್ಸಿನವರಾಗಿದ್ದು, ಕಾರ್ ವಾಶ್ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದರು. ಮೇ 4 ರಂದು ಹತ್ಯೆಗೀಡಾಗಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಪೋಷಕರ ದೂರಿನ ಪ್ರಕಾರ, ಅಂದು ಕಾರ್ ವಾಶ್ ಗ್ಯಾರೇಜ್‌ನಲ್ಲಿ ಯುವತಿಯರು ಕೆಲಸ ಮಾಡುತ್ತಿದ್ದ ವೇಳೆ ಪುರುಷರ ದೊಡ್ಡ ಗುಂಪೊಂದು ಅವರ ಮೇಲೆ ಹಲ್ಲೆ ನಡೆಸಿದೆ. ನಂತರ ಗ್ಯಾರೇಜ್ ಕೊಠಡಿಯೊಳಗೆ ಎಳೆದೊಯ್ದು ಬಾಯಿಗೆ ಬಟ್ಟೆ ತುರುಕಿ, ಸುಮಾರು ಒಂದೂವರೆ ಗಂಟೆಗಳ ಕಾಲ ಅತ್ಯಾಚಾರ ಎಸಗಿದ್ದಾರೆ. ನಂತರ ಇಬ್ಬರನ್ನೂ ಹತ್ಯೆಗೈದು ಸಮೀಪದ ಕಾರ್ಖಾನೆಯೊಂದರ ಪಕ್ಕದಲ್ಲಿ ಶವಗಳನ್ನು ಎಸೆದುಹೋಗಿದ್ದಾರೆ ಎನ್ನಲಾಗಿದೆ.

ಕಾರ್ಖಾನೆ ಆವರಣದಲ್ಲಿ ಇಬ್ಬರು ಯುವತಿಯರ ಶವಗಳನ್ನು ನೋಡಿದ ಸ್ಥಳೀಯ ವ್ಯಕ್ತಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದು, ಈ ವೇಳೆ ಪರಿಶೀಲನೆ ನಡೆಸಿದ್ದ ಪೊಲೀಸರು ಈ ಪೋಷಕರ ದೂರನ್ನು ಅವಲೋಕಿಸಿ ಅವರಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಘಟನಾ ಸ್ಥಳಕ್ಕೆ ಬಂದು ಶವಗಳನ್ನು ಪರಿಶೀಲಿಸಿದ ಪೋಷಕರು ಅದು ತಮ್ಮ ಮಕ್ಕಳದ್ದೇ ಎಂದು ಸ್ಪಷ್ಟಪಡಿಸಿದ್ದಾರೆ.

ಆರಂಭದಲ್ಲಿ ಯುವತಿಯರ ಗುರುತು ಪತ್ತೆ ಮಾಡುವುದು ಕಷ್ಟವಾಗಿತ್ತು. ಕೊನೆಗೆ ಸಂತ್ರಸ್ತರ ತಾಯಿ ಮೇ 16ರಂದು ಸಾಯಿಕುಲ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ನಂತರ ಪ್ರಕರಣ ದಾಖಲಿಸಲಾಗಿತ್ತು. ಆಕೆ ತನ್ನ ಮಗಳೊಂದಿಗೆ ಮತ್ತೊಬ್ಬಳು ಯುವತಿಯನ್ನ ಅತ್ಯಾಚಾರಗೈದು ಕ್ರೂರವಾಗಿ ಕೊಲೆ ಮಾಡಿರುವುದಾಗಿ ದೂರಿನಲ್ಲಿ ಉಲ್ಲೇಖಿಸಿದ್ದರು. ನಂತರ ಎಫ್‌ಐಆರ್ ಅನ್ನು ಇಂಫಾಲ್ ಪೂರ್ವ ಜಿಲ್ಲೆಯ ಪೊರೊಂಪತ್ ಪೊಲೀಸ್ ಠಾಣೆಗೆ ವರ್ಗಾಯಿಸಲಾಯಿತು. ಸದ್ಯ ಸಂತ್ರಸ್ತರ ಮೃತದೇಹಗಳು ಪತ್ತೆಯಾಗಿಲ್ಲ. ಆದರೆ ಸುಮಾರು 100 ರಿಂದ 200 ಪುರುಷರ ಗುಂಪು ಯುವತಿಯರ ಮೇಲೆ ದಾಳಿ ನಡೆಸಿತ್ತು ಎಂದು ಪೊಲೀಸರು ಶಂಕಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.23– ಹಾಸನ ಜಿಲ್ಲಾ ಬಳಗದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಹಾಸನ ಜಿಲ್ಲೆಯವರಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಪರೀಕ್ಷೆಗೆ ಹಾಜರಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ(2022–23)ಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಯ ಪೋಷಕರು ಹಾಸನ ಜಿಲ್ಲಾ ಬಳಗದ ಖಾಯಂ ಸದಸ್ಯರಾಗಿರಬೇಕು. 'ಬಿ.ಜಿ. ರಂಗೇಗೌಡ, ನಂ.11488, ವಿಜಯನಗರ 4ನೇ ಹಂತ, ಮೈಸೂರು–570032' ವಿಳಾಸಕ್ಕೆ ಆ.31ರೊಳಗೆ ಅರ್ಜಿ ಸಲ್ಲಿಸಬೇಕು. ಅಂಕಪತ್ರದ ದೃಢೀಕೃತ ಪ್ರತಿ ಹಾಗೂ ಖಾಯಂ ಸದಸ್ಯತ್ವ ಹೊಂದಿರುವ ರಶೀದಿ ನಕಲು ಪ್ರತಿಯನ್ನು ಲಗತ್ತಿಸಬೇಕು. ಮಾಹಿತಿಗೆ ಮೊ.ಸಂ.9886647852 ಸಂಪರ್ಕಿಸಬಹುದು.

ರಾಷ್ಟ್ರೀಯ ಧ್ವಜ ದಿನ: ವಿಶೇಷ ಕವರ್ ಬಿಡುಗಡೆ ಮಾಡಿದ ಕರ್ನಾಟಕ ಅಂಚೆ ಇಲಾಖೆ

ಬೆಂಗಳೂರು, ಜು.23– ರಾಷ್ಟ್ರಧ್ವಜದ ಅಂಗೀಕಾರವನ್ನು ಗುರುತಿಸುವ ರಾಷ್ಟ್ರೀಯ ಧ್ವಜ ದಿನಾಚರಣೆ 2023ರ ಸ್ಮರಣಾರ್ಥ ಕರ್ನಾಟಕ ಅಂಚೆ ವೃತ್ತವು ಇಂದು ಜಿಪಿಓದಲ್ಲಿ ವಿಶೇಷ ಕವರ್ ಅನ್ನು ಬಿಡುಗಡೆ ಮಾಡಿದೆ. ಇಲಾಖೆಯು ತನ್ನ ರಾಖಿ ಪೋಸ್ಟ್ ಅನ್ನು ಉತ್ತೇಜಿಸಲು ವಿಶೇಷ ರಾಖಿ ಲಕೋಟೆಯನ್ನು ಬಿಡುಗಡೆ ಮಾಡಿತು.

ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್ ರಾಜೇಂದ್ರ ಕುಮಾರ್ ಮತ್ತು ಬೆಂಗಳೂರು ವಲಯದ ಪೋಸ್ಟ್ ಮಾಸ್ಟರ್ ಜನರಲ್ ಎಲ್ ಕೆ ಡ್ಯಾಶ್ ಅವರು ಬಿಡುಗಡೆ ಮಾಡಿದರು.

ವಿಶೇಷ ಕವರ್ ಬೆಂಗಳೂರು ಜಿಪಿಓ, ಮಂಗಳೂರು ಹೆಡ್ ಪೋಸ್ಟ್ ಆಫೀಸ್, ಮೈಸೂರು ಎಚ್‌ಓ ಮತ್ತು ಕರ್ನಾಟಕ




ಪೋಸ್ಟಲ್ ಸರ್ಕಲ್‌ನಲ್ಲಿರುವ ಬೆಳಗಾವಿ ಎಚ್‌ಓ ಅಂಚೆಚೀಟಿಗಳ ಸಂಗ್ರಹಾಲಯದಲ್ಲಿ ಮತ್ತು ಆನ್‌ಲೈನ್‌ನಲ್ಲಿ ಇ–ಪೋಸ್ಟ್ ಆಫೀಸ್ www.indiapost.gov.in ನಲ್ಲಿ ಮಾರಾಟಕ್ಕೆ ಲಭ್ಯವಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಆಗಸ್ಟ್ 30ರಂದು ಆಚರಿಸಲಾಗುವ ರಕ್ಷಾ ಬಂಧನ ಹಬ್ಬವನ್ನು ಗುರುತಿಸಲು, ಸಹೋದರಿಯರು ಆನ್‌ಲೈನ್‌ನಲ್ಲಿ ರಾಖಿ ಬುಕ್ ಮಾಡಲು ಮತ್ತು ಅವರ ಸಹೋದರರಿಗೆ ಶುಭಾಶಯಗಳನ್ನು ಕಳುಹಿಸಲು ಸಹಾಯ ಮಾಡಲು ರಾಖಿ ಪೋಸ್ಟ್ ಅನ್ನು ನೀಡಲಾಗುತ್ತಿದೆ ಭಾರತ ಪೋಸ್ಟ್ ಆಯ್ದ ರಾಖಿಯನ್ನು ವಿಶೇಷ ರಾಖಿ ಲಕೋಟೆಯಲ್ಲಿ ರಾಖಿ ಗ್ರೀಟಿಂಗ್ ಕಾರ್ಡ್‌ನೊಂದಿಗೆ ಸ್ಪೀಡ್ ಪೋಸ್ಟ್ ಮೂಲಕ ರೂ. 120 ವೆಚ್ಚದಲ್ಲಿ ಕಳುಹಿಸುತ್ತದೆ. ಈ ಸೇವೆಯು ಈ ವರ್ಷ ಜುಲೈ 17ರಿಂದ ಆಗಸ್ಟ್ 26ರವರೆಗೆ ಲಭ್ಯವಿದೆ. ರವಾನೆ ಆಗಸ್ಟ್ 10ರಿಂದ ಪ್ರಾರಂಭವಾಗುತ್ತದೆ. ಕರ್ನಾಟಕ ಅಂಚೆ ಇಲಾಖೆಯ ವೆಬ್‌ಸೈಟ್: https://www.karnatakapost.gov.inಗೆ ಪ್ರವೇಶಿಸಿ, ಅಲ್ಲಿ ರಾಖಿ ಪೋಸ್ಟ್ ಅನ್ನು ಪ್ರವೇಶಿಸುವ ಮೂಲಕ ರಾಖಿ ಪೋಸ್ಟ್ ಸೇವೆಯನ್ನು ಪಡೆಯಬಹುದು. ವಿಶೇಷ ರಾಖಿ ಲಕೋಟೆಗಳು ಕರ್ನಾಟಕದ ಎಲ್ಲಾ ಪ್ರಧಾನ ಅಂಚೆ ಕಛೇರಿಗಳಲ್ಲಿ 15 ರೂಗಳಿಗೆ ಲಭ್ಯವಿವೆ.

ನನ್ನ, ಅಣ್ಣನ ನಡುವೆ ತಾರತಮ್ಯ ಮಾಡುತ್ತಿದ್ದರಿಂದ ತಂದೆ-ತಾಯಿ ಕೊಂದೆ

ಬೆಂಗಳೂರಲ್ಲಿ ತಂದೆ-ತಾಯಿ ಕೊಲೆ ಮಾಡಿ ಕೊಡಗಲ್ಲಿ ಸಿಕ್ಕಿಬಿದ್ದ ಆರೋಪಿ ಪುತ್ರನಿಂದ ಹೇಳಿಕೆ



ಮಗನಿಂದ ಕೊಲೆಯಾದ ಶಾಂತಾ, ಭಾಸ್ಕರ್ ದಂಪತಿ.

ಮಡಿಕೇರಿ, ಜು.23– ನನ್ನ ಮತ್ತು ಅಣ್ಣನ ನಡುವೆ ತಾರತಮ್ಯ ಮಾಡುತ್ತಿದ್ದರಿಂದ ನಾನು ನನ್ನ ತಂದೆ-ತಾಯಿಯನ್ನು ಕೊಂದೆ ಎಂದು ತಂದೆ-ತಾಯಿಯನ್ನು ಬೆಂಗಳೂರಿನಲ್ಲಿ ಬರ್ಬರವಾಗಿ ಹತ್ಯೆಗೈದು, ಕೊಡಗಿನಲ್ಲಿ ಸಿಕ್ಕಿಬಿದ್ದಿರುವ ಆರೋಪಿ ಪುತ್ರ ಶರತ್ (26) ತಿಳಿಸಿದ್ದಾರೆ.

ತಂದೆ-ತಾಯಿಯನ್ನು ಬರ್ಬರವಾಗಿ ಕೊಲೆ ಮಾಡಿ ಈಗ ಬೆಂಗಳೂರಿನ ಕೊಡಿಗೆಹಳ್ಳಿ ಪೊಲೀಸರ ಅತಿಥಿಯಾಗಿರುವ ಆರೋಪಿ ಪೊಲೀಸರ ವಿಚಾರಣೆ ವೇಳೆ ತಿಳಿಸಿರುವುದಾಗಿ ಮೂಲಗಳು ಹೇಳಿವೆ. ಬ್ಯಾಟರಾಯನಪುರ ನಿವಾಸಿ ಭಾಸ್ಕರ್ ಹಾಗೂ ಶಾಂತಾ ದಂಪತಿ ತಲೆಗೆ ರಾಡ್‌ನಿಂದ ಹೊಡೆದು ಜುಲೈ 17ರಂದು ಕೊಲೆ ಮಾಡಿ ಪರಾರಿಯಾಗಿದ್ದ ಶರತ್, ಮಂಗಳೂರು ಮೂಲಕ ಮಡಿಕೇರಿಗೆ ಹೋಗಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಮದೆನಾಡು ಸಮೀಪದ ಅರಣ್ಯದಲ್ಲಿ ತಲೆಮರೆಸಿಕೊಂಡಿದ್ದ. ಈತನನ್ನು ಪತ್ತೆ ಮಾಡಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ.

ಮಂಗಳೂರಿನ ಮೂಲದ ಭಾಸ್ಕರ್, ಶಾಂತಾ ಬೆಂಗಳೂರಿನ ಬ್ಯಾಟರಾಯನಪುರದಲ್ಲಿ 12 ವರ್ಷಗಳಿಂದ ವಾಸವಿದ್ದರು. ಭಾಸ್ಕರ್ ಹೋಟೆಲ್‌ವೊಂದರಲ್ಲಿ ಕ್ಯಾಷಿಯರ್ ಆಗಿದ್ದು, ಶಾಂತಾ ಕೇಂದ್ರ ಸರ್ಕಾರದ ನಿವೃತ್ತ ಉದ್ಯೋಗಿಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದು, ಹಿರಿಯ ಮಗ ಸಜಿತ್, ಪದವೀಧರ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಎರಡನೇ ಮಗ ಶರತ್, ಪಿಯುಸಿ ಓದಿದ್ದು, ಕೆಲಸವಿಲ್ಲದೇ ಮನೆಯಲ್ಲಿರುತ್ತಿದ್ದ ಎಂದು ಮೂಲಗಳು ತಿಳಿಸಿವೆ. ತಂದೆ-ತಾಯಿ ಜೊತೆ ಜಗಳ ತೆಗೆದಿದ್ದ ಆರೋಪಿ ತಲೆಗೆ ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದಾನೆ. ನಂತರ ಮನೆಗೆ ಬೀಗ ಹಾಕಿಕೊಂಡು ಪರಾರಿಯಾಗಿದ್ದ.

ಬಂಧಿತ ಶರತ್, ತಂದೆ-ತಾಯಿ, ನನ್ನ ಹಾಗೂ ಅಣ್ಣನ ನಡುವೆ ತಾರತಮ್ಯ ಮಾಡುತ್ತಿದ್ದರು. ಇದರಿಂದ ಬೇಸರಗೊಂಡು ಕೊಲೆ ಮಾಡಿದೆ ಎಂಬುದಾಗಿ ಹೇಳಿಕೆ ನೀಡಿದ್ದಾನೆ ಎನ್ನಲಾಗಿದೆ.



ಆರೋಪಿ ಶರತ್

ಕೊಲೆ ಬಳಿಕ ಮಂಗಳೂರಿಗೆ ಹೋಗಿದ್ದ ಆರೋಪಿ ಅಲ್ಲಿಂದ ಮಡಿಕೇರಿ ತಾಲೂಕಿನ ಮದೆನಾಡಿಗೆ ತೆರಳಿದ್ದು, 2 ದಿನ ಅರಣ್ಯದಲ್ಲಿ ಸುತ್ತಾಡಿದ್ದ ಎನ್ನಲಾಗಿದೆ ಈ ಸುದ್ಧ್ಘ ದಲ್ಲಿ ತಿನ್ನಲು ಏನೂ ಸಿಕ್ಕಿರಲಿಲ್ಲ. ವಿಪರೀತ ಹಸಿದಿದ್ದರಿಂದ ಆರೋಪಿ ಊಟಕ್ಕಾಗಿ ಹುಡುಕಾಡಿದ್ದ. ಅರಣ್ಯದಂಚಿನ ತೋಟದ ಮನೆಯೊಂದಕ್ಕೆ ಹೋಗಿ ಬಾಗಿಲು ಬಡಿದಿದ್ದ. ಈತನ ವರ್ತನೆಯಿಂದ ಅನುಮಾನಗೊಂಡಿದ್ದ ಮನೆಯವರು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರು, ಶರತ್‌ನನ್ನು ವಶಕ್ಕೆ ಪಡೆದಿದ್ದರು.ವಿಚಾರಣೆ ವೇಳೆ ಈತ ಕೊಲೆ ಆರೋಪಿ ಎನ್ನುವುದು ಬಯಲಿಗೆ ಬಂದಿತ್ತು.

ನಂತರ ಪೊಲೀಸರು ಬೆಂಗಳೂರಿನ ಬ್ಯಾಟರಾಯನಪುರ ಪೊಲೀಸರಿಗೆ ಕೊಲೆ ಆರೋಪಿ ಸಿಕ್ಕಿಬಿದ್ದಿರುವ ವಿಷಯ ತಿಳಿಸಿದರು. ಕೂಡಲೇ ಪೊಲೀಸರು ಬಂದು ಆರೋಪಿಯನ್ನು ಬೆಂಗಳೂರಿಗೆ ಕರೆದೊಯ್ದು, ವಿಚಾರಣೆ ನಡೆಸಿದಾಗ ಈ ವಿಚಾರ ಬಯಲಿಗೆ ಬಂದಿದೆ ಎನ್ನಲಾಗಿದೆ.



ಬ್ರಹ್ಮಗಿರಿ ಬೆಟ್ಟದ ತಪ್ಪಲಿನಲ್ಲಿ ಭಾರೀ ಮಳೆಗೆ ತುಂಬಿ ಹರಿಯುತ್ತಿರುವ ಹೊಳೆ

ಕೊಚ್ಚಿಹೋದ ತಾತ್ಕಾಲಿಕ ಸೇತುವೆ, ಸಂಪರ್ಕ ಕಡಿತ

ಗೋಣಿಕೊಪ್ಪ, ಜು.23– ಪೊನ್ನಂಪೇಟೆ ತಾಲೂಕು ಗಡಿ ಭಾಗವಾಗಿರುವ ಬ್ರಹ್ಮಗಿರಿ ಬೆಟ್ಟ ತಪ್ಪಲಿನಲ್ಲಿ ಕಳೆದ ಐದು ದಿನಗಳಿಂದ ನಿರಂತರವಾಗಿ ಮಳೆ ಕಾಣಿಸಿ ಕೊಂಡ ಪರಿಣಾಮ ಹೊಳೆಯಲ್ಲಿ ಮೊದಲ ಬಾರಿಗೆ ನೀರು ಹರಿಯಲಾರಂಭಿಸಿದೆ.

ಕನ್ನಂಬಾಡಿ ಕಟ್ಟೆಗೆ ಸೇರುವ ಹೊಳೆಯಿಂದ ನದಿಪಾತ್ರದ ನಿವಾಸಿಗಳಿಗೂ ಖುಷಿ ತಂದಿದೆ. ಬಿತ್ತನೆ ಕಾರ್ಯ ಮುಗಿಸಿದ ರೈತನಿಗೆ ನಾಟಿಗೆ ತೊಡಗಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ನದಿಪಾತ್ರದ ನಿಟ್ಟೂರು, ಮಲ್ಲೂರು ಭಾಗದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ. ಶ್ರೀಮಂಗಲ ವ್ಯಾಪ್ತಿಯಲ್ಲಿ ಸರಾಸರಿ 3 ಇಂಚು, ಬಾಡಗ ವ್ಯಾಪ್ತಿಯಲ್ಲಿ 2 ಇಂಚು ಮಳೆ ಬೀಳುತ್ತಿದ್ದು, ನದಿ ನೀರಿನ ಹರಿವು ಹೆಚ್ಚಲು ಕಾರಣವಾಗುತ್ತಿದೆ.

ಬ್ರಹ್ಮಗಿರಿ ತಪ್ಪಲಿನಿಂದ: ಪೊನ್ನಂಪೇಟೆ ತಾಲೂಕು ಗಡಿ ಭಾಗವಾಗಿರುವ ಬ್ರಹ್ಮಗಿರಿ ಬೆಟ್ಟ ತಪ್ಪಲಿನ ಕುರ್ಚಿ, ಬೀರುಗ ವ್ಯಾಪ್ತಿಯಲ್ಲಿ ಬಿದ್ದಿರುವ ಮಳೆಯಿಂದಾಗಿ ಲಕ್ಷ್ಮಣತೀರ್ಥ ನದಿಗೆ ಜೀವಕಳೆ ಬಂದಿದೆ. ಶನಿವಾರ ಮುಂಜಾನೆಯಿಂದ ವರ್ಷದಲ್ಲಿ ಮೊದಲ ಬಾರಿಗೆ ನೀರು ಹರಿಯುವ ಹಂತಕ್ಕೆ ಬಂದಿದೆ. ಹೊಳೆ ಬದಿಯ ಕೃಷಿಕರಿಗೆ ಖುಷಿ ತಂದಿದೆ ನದಿಯು ಶ್ರೀಮಂಗಲ, ಹುಹಿಷ, ಬಲ್ಯಮುಂಡೂರು, ಕಾನೂರು, ನಿಟ್ಟೂರು, ಮಲ್ಲೂರು ಮಾರ್ಗವಾಗಿ ಹನಗೋಡು ಮೂಲಕ ಕನ್ನಂಬಾಡಿ ಕಟ್ಟೆಗೆ ಸೇರುವ ನದಿಯಾಗಿದ್ದು, ತಪ್ಪಲಿನ ಜನರು ಖುಷಿಗೊಂಡಿದ್ದಾರೆ. ಕುರ್ಚಿ ಗ್ರಾಮದಲ್ಲಿ ಮಳೆಯ ಪ್ರಮಾಣ ಏರಿಕೆಯಾಗುವ ಸಂದರ್ಭ ಕಾನೂರು, ನಿಟ್ಟೂರು, ಮಲ್ಲೂರು ಸೇತುವೆಗಳು ಜಲಾವೃತಗೊಂಡು ಸಂಚಾರಕ್ಕೆ ತೊಡಕಾಗುವ ಆತಂಕ ಕೂಡ ಇದೆ. ನಿಟ್ಟೂರು, ಮಲ್ಲೂರು ಸೇತುವೆಯು ಮೇಲ್ದರ್ಜೆಗೇರಿಸಿರುವುದರಿಂದ ಆತಂಕ ತಪ್ಪಿದೆ.

ಸಂಪರ್ಕ ಕಡಿತ: ನಿಟ್ಟೂರು ಗ್ರಾಪಂ ವ್ಯಾಪ್ತಿಯ ಚೆಣ್ಣರಹಾಡಿಗೆ ಸಂಪರ್ಕಿಸುವ ತೋಡಿಗೆ ನಿರ್ಮಿಸಿದ್ದ ತಾತ್ಕಾಲಿಕ ಸೇತುವೆ ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ. ಹಾಡಿ ನಿವಾಸಿಗಳು ಸಂಪರ್ಕ ಕಡಿದುಕೊಂಡಿದ್ದಾರೆ.



ಇಂದು ಜಿಲ್ಲೆಯಲ್ಲಿ ಶಾಲಾ-ಕಾಲೇಜುಗಳಿಗೆ ರಜೆ

ಮಡಿಕೇರಿ, ಜು.23– ಕೊಡಗು ಜಿಲ್ಲೆಯಾದ್ಯಂತ ಭಾರೀ ಮಳೆ ಸುರಿಯುತ್ತಿರುವ ಕಾರಣ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲೆಯ ಎಲ್ಲಾ ಅಂಗನವಾಡಿ, ಶಾಲಾ ಕಾಲೇಜುಗಳಿಗೆ ಸೋಮವಾರ(ಜು.24) ರಜೆ ಘೋಷಿಸಿ ಜಿಲ್ಲಾಧಿಕಾರಿ ವೆಂಕಟ್‌ರಾಜ ಆದೇಶ ಹೊರಡಿಸಿದ್ದಾರೆ.

ಕಾಡಾನೆ ದಾಳಿಯಿಂದ ಪಾದಚಾರಿಗೆ ಗಾಯ

ವಿರಾಜಪೇಟೆ, ಜು.23– ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ಪಾದಚಾರಿಯೊಬ್ಬರು ಗಾಯಗೊಂಡಿರುವ ಘಟನೆ ಕಣ್ಣಂಗಾಲ ಪಂಚಾಯಿತಿ ಕಚೇರಿ ಎದುರು ಸಂಭವಿಸಿದೆ.

ವಿನೋದ್ (36) ಎಂಬುವರೇ ಗಾಯಗೊಂಡವರಾಗಿದ್ದು, ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ವಿನೋದ್ ಅವರು ಕಳೆದ ರಾತ್ರಿ ಕಣ್ಣಂಗಾಲ ಪಂಚಾಯಿತಿ ಕಚೇರಿ ಎದುರು ನಡೆದುಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಘೀಳಿಡುತ್ತಾ ಬಂದ ಆನೆ ಏಕಾಏಕಿ ದಾಳಿ ನಡೆಸಿದೆ. ಇದರಿಂದ ಗಾಬರಿಗೊಂಡ ಅವರು ಬಿದ್ದು ಕೈ-ಕಾಲು, ಮುಖಕ್ಕೆ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿದ ಶಾಸಕ ಎಸ್.ಎಸ್. ಪೊನ್ನಣ್ಣ ಅವರು ತಕ್ಷಣ ತಮ್ಮ ಆಪ್ತರಾದ ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಅವರಿಗೆ ಗಾಯಾಳುವಿಗೆ ಸೂಕ್ತ ಚಿಕಿತ್ಸೆ ಕೊಡಿಸುವಂತೆ ಸೂಚಿಸಿದರು. ಅದರಂತೆ ಸಂಕೇತ್ ಪೂವಯ್ಯನವರು ಆಸ್ಪತ್ರೆಗೆ ತೆರಳಿ ಗಾಯಾಳು ಯೋಗಕ್ಷೇಮ ವಿಚಾರಿಸಿ ಧೈರ್ಯ ತುಂಬಿ, ಸೂಕ್ತ ಚಿಕಿತ್ಸೆ ಕೊಡಿಸಿದರು.

ಬಜೆಟ್ ಅಧಿವೇಶನಕ್ಕಾಗಿ ಬೆಂಗಳೂರಿನಲ್ಲಿರುವ ಶಾಸಕರು ಘಟನೆ ನಡೆದ ಕೇವಲ ಒಂದು ಗಂಟೆಯಲ್ಲಿ ಸ್ಪಂದಿಸಿದ್ದಾರೆ. ಜನಾನುರಾಗಿ ಪೊನ್ನಣ್ಣ ಎಲ್ಲೇ ಇದ್ದರೂ ಕ್ಷೇತ್ರದ ಜನರ ಯೋಗಕ್ಷೇಮ ನೋಡಿಕೊಳ್ಳುತ್ತಿರುವುದು ನೋಡಿದರೆ ಇವರು ನಿಜವಾದ ಜನಪ್ರತಿನಿಧಿ ಎಂದರೆ ಅತಿಶಯೋಕ್ತಿ ಆಗಲಾರದು ಎಂದು ಕ್ಷೇತ್ರದ ಮತದಾರರು ಮಾತಾಡಿಕೊಳ್ಳುತ್ತಿದ್ದಾರೆ.



ಚಿಕ್ಲಿಹೊಳೆ ಜಲಾಶಯ ಭರ್ತಿ, ಪ್ರವಾಸಿಗರ ಆಕರ್ಷಣೆ

ಕುಶಾಲನಗರ, ಜು.23– ಉತ್ತರ ಕೊಡಗಿನ ರಂಗಸಮುದ್ರ ಬಳಿ ಇರುವ ಕಾವೇರಿ ಕಣಿವೆಯ ಪ್ರಮುಖ ಜಲಾಶಯಗಳ ಪೈಕಿ ಅತೀ ಚಿಕ್ಕದಾದ ಚಿಕ್ಲಿಹೊಳೆ ಜಲಾಶಯ ಭಾನುವಾರ ಭರ್ತಿಯಾಗಿದ್ದು, ತಡೆಗೋಡೆ ಮೇಲಿಂದ ಹಾಲ್ನೊರೆಯಂತೆ ಧುಮ್ಮಿಕ್ಕುವ ನೀರು ಪ್ರವಾಸಿಗರ ಮನಸೂರೆಗೊಳ್ಳುತ್ತಿದೆ.

ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಧಾರಾಕಾರ ಮಳೆಗೆ ಮೈದುಂಬಿ ನಿಂತಿದೆ. ಅಣೆಕಟ್ಟೆ ತುಂಬಿರುವುದರಿಂದ ಹೆಚ್ಚುವರಿ ನೀರು ಜಲಾಶಯದ ಅರ್ಧ ಚಂದ್ರಾಕೃತಿಯ ತಡೆಗೋಡೆಯ ಮೇಲಿಂದ ಹಾಲು ನೊರೆಯಂತೆ ಹರಿಯುತ್ತಿದೆ.

ಯಾವುದೇ ಕ್ರಸ್ಟ್‌ಗೇಟ್‌ಗಳನ್ನು ಹೊಂದಿರದೆ ಕೇವಲ ಬಾವಿಯಾಕಾರದ ಮಾದರಿಯಲ್ಲಿ ಏಕೈಕ ದೊಡ್ಡ ತೂಬು ನಿರ್ಮಿಸಲಾಗಿದೆ. ಜಲಾಶಯಕ್ಕೆ ನೀರಿನ ಒಳಹರಿವು ಹೆಚ್ಚಾದಂತೆ ನೀರು ತನ್ನಿಂದಾಗಿ ಅಣೆಕಟ್ಟೆಯ ಹೊರಗೆ ಹರಿಯುತ್ತದೆ. ಗರಿಷ್ಠ 72.6 ಮೀಟರ್ ಎತ್ತರ ಹೊಂದಿರುವ ಅಣೆಕಟ್ಟಿನಲ್ಲಿ 0.18 ಟಿಎಂಸಿ ಅಡಿ ನೀರು ಸಂಗ್ರಹಗೊಂಡಿದೆ. ಧಾರಾಕಾರವಾಗಿ ಬಿದ್ದ ಮಳೆಯಿಂದ ಜಲಾಶಯ ಇದೀಗ ಭರ್ತಿಯಾಗಿದ್ದು, ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ.

ಮೀನುಕೊಲ್ಲಿ ಮೀಸಲು ಅರಣ್ಯದ ಮಧ್ಯೆ ಸದಾ ಹಸಿರಿನಿಂದ ಕಂಗೊಳಿಸುವ ಸುಂದರ ಪರಿಸರದಲ್ಲಿ ಚಿಕ್ಲಿಹೊಳೆ ಜಲಾಶಯ ಪ್ರವಾಸಿಗರನ್ನು ತನ್ನತ್ತ ಕೈಬೀಸಿ ಕರೆಯುತ್ತಿದೆ. ಜಲಾಶಯದ ಹಿನ್ನೀರು ಪ್ರದೇಶವು ಒಂದೆಡೆ ದಟ್ಟ ಕಾಡು ಹಾಗೂ ಮತ್ತೊಂದೆಡೆ ಕಾಫಿ ತೋಟಗಳ ಸಾಲಿನಿಂದ ಆವೃತಗೊಂಡಿದೆ. ಪ್ರವಾಸಿಗರ ವೀಕ್ಷಣೆಗೆ ಹತ್ತಾರು ತಾಣಗಳಿದ್ದು, ಅವುಗಳ ಪೈಕಿ ಚಿಕ್ಲಿಹೊಳೆ ಜಲಾಶಯವೂ ಒಂದಾಗಿದೆ.

ಈ ಜಲಾಶಯ ಇತರ ಜಲಾಶಯಗಳೊಂದಿಗೆ ಹೋಲಿಕೆ ಮಾಡುವಷ್ಟು ದೊಡ್ಡದಾಗಿಲ್ಲ ಆದರೆ, ಈ ಜಲಾಶಯವನ್ನು ಅಭಿವೃದ್ಧಿಪಡಿಸಿದಲ್ಲಿ ಸುಂದರ ಪ್ರವಾಸಿ ತಾಣವಾಗುವುದರಲ್ಲಿ ಸಂಶಯವಿಲ್ಲ. ಜಿಲ್ಲೆಯಲ್ಲಿ ನಿರಂತರವಾಗಿ ಸುರಿದ ಮಳೆಗೆ ಚಿಕ್ಲಿಹೊಳೆ ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಅಚ್ಚುಕಟ್ಟು ವ್ಯಾಪ್ತಿಯ ರೈತರು ಸಂತಸಗೊಂಡಿದ್ದು, ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕಾಂಗ್ರೆಸ್‌ನ 5 ಗ್ಯಾರಂಟಿಗಳು ಜನಕಲ್ಯಾಣ ಯೋಜನೆಗಳು

ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ



ಚಾಮರಾಜನಗರ, ಜು.23– ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ 5 ಗ್ಯಾರಂಟಿಗಳು ಸಂವಿಧಾನ ಆಶಯವನ್ನೊಳಗೊಂಡಿದ್ದು, ಜನ ಕಲ್ಯಾಣ ಯೋಜನೆಗಳಾಗಿವೆ ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ತಿಳಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಛತ್ರಪತಿ ಶಾಹು ಮಹಾರಾಜರ ಜನ್ಮದಿನದ ಅಂಗವಾಗಿ ಭಾರತೀಯ ವಿದ್ಯಾರ್ಥಿ ಸಂಘ(ಬಿವಿಎಸ್) ವತಿಯಿಂದ ಚಾಮರಾಜನಗರ ತಾಲೂಕು ವ್ಯಾಪ್ತಿಯ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ ಅಭಿವೃದ್ಧಿಗೆ ಪೂರಕವಾಗಿರುವ ಐದು ಗ್ಯಾರಂಟಿಗಳು ಸಮರ್ಪಕವಾಗಿ ಅನುಷ್ಠಾನವಾಗಲು ನಿಮ್ಮೆಲ್ಲರ ಸಹಕಾರ ಅಗತ್ಯ. ಈ ಯೋಜನೆಗಳ ಫಲ ಪಡೆದು ಅಭಿವೃದ್ಧಿಯತ್ತ ಸಾಗಬೇಕು. ಅದು ಬಿಟ್ಟು ಸರ್ಕಾರ ಗ್ಯಾರಂಟಿ ಜಾರಿ ಮಾಡಿದೆ ಎಂದು ಯಾರೂ ಸೋಮಾರಿಗಳಾಗಬಾರದು ಎಂದು ಕಿವಿಮಾತು ಹೇಳಿದರು.

ಜಗಜ್ಯೋತಿ ಬಸವೇಶ್ವರರ ನಂತರ ಮೊಟ್ಟಮೊದಲ ಬಾರಿಗೆ ಛತ್ರಪತಿ ಶಾಹು ಮಹಾರಾಜರು ಮೀಸಲಾತಿ ಜಾರಿಗೆ ತಂದರು. ಮೈಸೂರು ಮಹಾರಾಜರ ಒಡೆಯರ ಆಳ್ವಿಕೆಯಲ್ಲಿಯೂ ಮೀಸಲಾತಿ ಜಾರಿಯಲ್ಲಿತ್ತು. ನಂತರ ಅಂಬೇಡ್ಕರ್ ಅವರು ಸಂವಿಧಾನದಡಿ ದೇಶಕ್ಕೆ ಮೀಸಲಾತಿ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ. ಇವರನ್ನು ಸದಾ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದರು.

ಬೆಂಗಳೂರಿನ ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಡಾ.ಶಿವಕುಮಾರ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಇಂಗ್ಲಿಷ್ ಆವರಿಸಿರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ಇಂಗ್ಲಿಷ್, ಕಂಪ್ಯೂಟರ್ ಶಿಕ್ಷಣ ಹೊಂದಬೇಕು. ಸಾಂಪ್ರದಾಯಕ ತರಗತಿಗಳ ಜೊತೆ ಹೊಸ ತರಗತಿಗಳ ಓದಬೇಕು ಎಂದರು. ಐಎಎಸ್, ಕೆಎಎಸ್ ಮಾಡುವ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಬೇಕು. ಹೀಗಾಗಿ ನಿತ್ಯ 6 ಗಂಟೆ ಓದಬೇಕು. ಹಿಂದೆ ಶಾಲೆಗೆ ಹೋಗದಿದ್ದರೆ, ಚೆನ್ನಾಗಿ ಓದದಿದ್ದರೆ ಎಮ್ಮೆ ಮೇಯಿಸಕ್ಕೆ ಹೋಗು ಎನ್ನುತ್ತಿದ್ದರು. ಆದರೆ ಜಾಗತೀಕರಣದಲ್ಲಿ ದನ, ಎಮ್ಮೆ ಮೇಯಿಸುವುದು ದೊಡ್ಡ ಉದ್ಯಮವಾಗಿ ಪರಿವರ್ತನೆಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಭಾರತೀಯ ವಿದ್ಯಾರ್ಥಿ ಸಂಘದ ಜಿಲ್ಲಾ ಸಂಯೋಜಕ ಪರ್ವತ್ ರಾಜ್ ಮಾತನಾಡಿ, ನಮ್ಮ ಸಂಘ ವಿದ್ಯಾರ್ಥಿಗಳ ಪರ ಕೆಲಸ ಮಾಡುತ್ತಿದ್ದು, ಕಳೆದ 12 ವರ್ಷಗಳಿಂದಲೂ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡು ಬರಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು), ಡಾ.ಎ.ಆರ್.ಬಾಬು, ಪ್ರಾಂಶುಪಾಲ ಪ್ರಭಾಕರ್, ಪಿಎಸಿಎಸ್ ಅಧ್ಯಕ್ಷ ಮಹೇಶ್ ಕುದರ್, ಎಪಿಸಿಸಿ ಅಧ್ಯಕ್ಷ ಮನೋಜ್ ಪಟೇಲ್, ಯುವ ವಿಜ್ಞಾನಿ ಡಾ.ನವೀನ್ ಮೌರ್ಯ, ಡಾ.ಎನ್.ಎಸ್. ಮೋಹನ್, ನಗರಸಭಾ ಮಾಜಿ ಸದಸ್ಯ ಸಿ.ಕೆ.ಮಂಜುನಾಥ್, ಸಂಘದ ಜಿಲ್ಲಾ ಪ್ರಧಾನ ರಂಗಸ್ವಾಮಿ, ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ಚಂದ್ರಮೋಹನ್, ರಾಹುಲ್, ರಾಜೇಶ್ ಇತರರಿದ್ದರು.

ಚಾ.ನಗರದಲ್ಲಿ ಮಲ್ಲಿಕಾರ್ಜುನ ಖರ್ಗೆ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ, ಜು.23– ಜಿಲ್ಲಾ ಕಾಂಗ್ರೆಸ್ ವತಿಯಿಂದ ಜಿಲ್ಲಾಸ್ಪತ್ರೆ ಒಳರೋಗಿಗಳಿಗೆ ಹಣ್ಣು ಹಂಪಲು ಹಾಗೂ ಬ್ರೆಡ್ ವಿತರಿಸುವ ಮೂಲಕ ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆಯವರ 83ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಅಲ್ಲದೇ ಜಿಲ್ಲಾ ಕಾಂಗ್ರೆಸ್ ಕಚೇರಿ ಎದುರು ಪಟಾಕಿ ಸಿಡಿಸಿ, ಕೇಕ್ ಕತ್ತರಿಸಿ ಖರ್ಗೆ ಅವರ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್, ಆರ್.ಮಹದೇವ್, ಜಿಲ್ಲಾ ಎಸ್ಸಿ ಘಟಕದ ಅಧ್ಯಕ್ಷ ಸೋಮೇಶ್ವರ್, ಬ್ಲಾಕ್ ಅಧ್ಯಕ್ಷ ಮಹಮದ್ ಅಸ್ಗರ್, ನಾಗಯ್ಯ, ಪ್ರದೀಪ್, ಮಹೇಶ್ ಕುದರ್, ಮಹದೇವಸ್ವಾಮಿ, ಚಂದ್ರು, ಶಿವಸ್ವಾಮಿ, ಅರುಣ್‌ಕುಮಾರ್, ರವಿಕುಮಾರ್, ಮೂರ್ತಿ, ರಂಗಸ್ವಾಮಿ, ಸ್ವಾಮಿ, ಸೋಮೇಶ್, ರಂಗಸ್ವಾಮಿ, ಸೈಯದ್ ರಫಿ. ಎ.ಹೆಚ್.ಖಾನ್, ಡಿಎಚ್‌ಒ ಡಾ.ವಿಶ್ವೇಶ್ವರಯ್ಯ, ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್ ಇತರರಿದ್ದರು.

ಉಪ್ಪಾರ ಸಮಾಜ ಸಂಘಟಿತರಾಗಿ ಒಗ್ಗಟ್ಟು ಪ್ರದರ್ಶಿಸಿ

ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ



ಕೊಳ್ಳೇಗಾಲ, ಜು.23– ಮುಂಬರುವ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಜಿಪಂ, ತಾಪಂ ಚುನಾವಣೆ ನಡೆಯಲಿದ್ದು, ಉಪ್ಪಾರ ಸಮಾಜ ಸಂಘಟಿತರಾಗಿ ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ ನೀಡಿದರು.

ಪಟ್ಟಣದ ಗುರುಭವನದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಗಳಲ್ಲಿ ಉಪ್ಪಾರ ಸಮಾಜ ರಾಜಕೀಯ ಸ್ಥಾನಮಾನ ಪಡೆಯಲು ಮುಂದಾಗಬೇಕು. ಇತ್ತೀಚಿನ ದಿನಗಳಲ್ಲಿ ಸಮುದಾಯದ ಸಂಘಟನೆ ಕುಂಠಿತವಾಗುತ್ತಿದೆ. ಇದರಲ್ಲಿ ನನ್ನ ಲೋಪವಿದೆಯೋ ಅಥವಾ ಸಮಾಜ ಸಂಘಟನೆಯಲ್ಲಿ ವಿಫಲರಾಗುತ್ತಿದ್ದೇವೋ ಎಂಬ ಚಿಂತೆ ಕಾಡುತ್ತಿದೆ. ಹೀಗಾಗಿ ಉಪ್ಪಾರ ಸಮಾಜ ಒಗ್ಗಟ್ಟು ಪ್ರದರ್ಶಿಸಬೇಕು ಎಂದರು. ಇತರ ಸಮುದಾಯದೊಂದಿಗೆ ಹೋಲಿಕೆ ಮಾಡಿಕೊಂಡರೆ ಉಪ್ಪಾರ ಸಮಾಜ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದೆ. ಹೀಗಾಗಿ ಮುಂದುವರೆದ ಜನಾಂಗಗಳ ಸಾಲಿನಲ್ಲಿ ಸೇರಲು ಶಿಕ್ಷಣವೊಂದೇ ಪರಿಹಾರ. ಹೀಗಾಗಿ ಸಮುದಾಯದವರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ನಾನು ಶಾಸಕನಾಗಬೇಕು ಎಂಬ ಕನಸು ಕಂಡಿರಲಿಲ್ಲ. ಬದಲಿಗೆ ಸರ್ಕಾರಿ ನೌಕರನಾಗಬೇಕೆಂಬ ಹಂಬಲ ಹೊಂದಿದ್ದೆ. ಆದರೆ ಶಾಸಕ ಸ್ಥಾನ ತಾನಾಗಿಯೇ ಒಲಿದು ಬಂತು. ಮಂಡಲ ಪಂಚಾಯಿತಿಯಿಂದ ಶಾಸಕನಾಗಲು ನಾನು ಅಕ್ಷರ ಕಲಿತಿದ್ದೆ ಕಾರಣ ಎಂದರು.

ಈ ಸಂದರ್ಭ ವೃತ್ತ ನಿರೀಕ್ಷಕ ಮಹದೇವಸ್ವಾಮಿ, ಕೆನರಾ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ನಂಜುಂಡಸ್ವಾಮಿ, ಉಪ್ಪಾರ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪ್ರಿಯಾ ಶಂಕರ್, ಕಾರ್ಯದರ್ಶಿ ಮಾದೇಶ್, ಗೌರವಾಧ್ಯಕ್ಷ, ಗೋವಿದರಾಜು, ರಾಜು, ಯಳಂದೂರು ಉಪ್ಪಾರ ನೌಕರರ ಸಂಘದ ಅಧ್ಯಕ್ಷ ರೇಚಣ್ಣ, ತಾಲೂಕು ಸಂಘಟನೆಗಳ ಅಧ್ಯಕ್ಷ ಸಿದ್ದಶೆಟ್ಟಿ, ಪುಟ್ಟರಸಶೆಟ್ಟಿ, ಡಯಟ್ ಉಪನ್ಯಾಸಕ ಅರಸಶೆಟ್ಟಿ, ಟಿಎಪಿಸಿಎಂಎಸ್ ಸದಸ್ಯ ಜಗದೀಶ್, ಎಎಸ್ಐ ಶಂಕರರಾಜು, ಮಹದೇವಸ್ವಾಮಿ, ಬಂಗಾರು, ರಾಜು, ಪತ್ತಿನ ಸಂಘದ ಅಧ್ಯಕ್ಷ ರವಿ, ರಮೇಶ್, ಚಿಕ್ಕತಾಂಡಶೆಟ್ಟಿ ಇನ್ನಿತರರಿದ್ದರು.

> ಈ ಹಿಂದೆ ತಳ ಸಮುದಾಯಗಳಿಗೆ ಶಿಕ್ಷಣ ಕನಸಾಗಿತ್ತು. ಅಂಬೇಡ್ಕರ್ ಹೋರಾಟದ ಫಲವಾಗಿ ಇಂದು ಹಿಂದುಳಿದ ವರ್ಗದವರು ಶಿಕ್ಷಣ ಪಡೆಯುವಂತಾಗಿದೆ. ಹೀಗಾಗಿ ನಾವೆಲ್ಲರೂ ಅಂಬೇಡ್ಕರ್‌ರನ್ನು ಸ್ಮರಿಸಬೇಕಿದೆ. ಶಿಕ್ಷಕರ ಪರಿಶ್ರಮದಿಂದಾಗಿ ಚಾ.ನಗರ ಜಿಲ್ಲೆ ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯದಲ್ಲೇ 7ನೇ ಸ್ಥಾನ ಪಡೆದಿದೆ. ಇದು ನಮ್ಮೆಲ್ಲರಿಗೂ ಹೆಮ್ಮೆ ಎನಿಸಿದೆ. ಬಡವರ ಮಕ್ಕಳಿಗೂ ಸಹ ಗುಣಮಟ್ಟದ ಶಿಕ್ಷಣ ನೀಡಿದರೆ ಅವರು ಸಾಧನೆಗೈಯಲು ಸಾಧ್ಯವಾಗಲಿದೆ. ಹೀಗಾಗಿ ವಿದ್ಯಾರ್ಥಿಗಳು ಡಿಸಿ, ಎಸ್ಪಿಯಂತಹ ಹುದ್ದೆ ಅಲಂಕರಿಸಲು ಪರಿಶ್ರಮದಿಂದ ವ್ಯಾಸಂಗ ಮಾಡಬೇಕು.
>
> - ಎ.ಆರ್.ಕೃಷ್ಣಮೂರ್ತಿ, ಶಾಸಕ.

ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್.ಭಾರತಿ

ಚಾಮರಾಜನಗರ, ಜು.23– ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಪತ್ರಕರ್ತರನ್ನೊಳಗೊಂಡ ಸೌಹಾರ್ದಯುತ ಕ್ರೀಡೆಗಳು ನಡೆಯುವುದರಿಂದ ಪರಸ್ಪರ ವಿಚಾರ ವಿನಿಯಮವಾಗಿ ಜಿಲ್ಲೆಯಲ್ಲಿ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಬೆಳ್ಳಿ ಮಹೋತ್ಸವದ ಅಂಗವಾಗಿ ನಡೆದ ವಿವಿಧ ಇಲಾಖೆಗಳು, ಜನಪ್ರತಿನಿಧಿಗಳ ತಂಡಗಳನ್ನೊಳಗೊಂಡ ಸೌಹಾರ್ದ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕ್ರೀಡಾ ಕ್ಷೇತ್ರದ ಉತ್ತೇಜನಕ್ಕೆ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಪ್ರತಿಯೊಬ್ಬರೂ ಯಾವುದಾದರೊಂದು ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ಪರಸ್ಪರ ಭಾವನೆಗಳನ್ನು ಹಂಚಿಕೊಳ್ಳುವ, ದೈಹಿಕ ಮತ್ತು ಮಾನಸಿಕ ಸ್ಥೈರ್ಯ ಕಾಪಾಡುವ, ಸಂಬಂಧಗಳನ್ನು ವೃದ್ಧಿಸುವ ಕೀಡಾ ಕ್ಷೇತ್ರಕ್ಕೆ ಜಿಲ್ಲೆಯಲ್ಲಿ ಹೆಚ್ಚಿನ ಆದ್ಯತೆ ನೀಡಬೇಕಾಗಿದ್ದು, ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು.

ಕಳೆದ ಐದಾರು ವರ್ಷಗಳಿಂದ ಜಿಲ್ಲಾ ಕೇಂದ್ರದಲ್ಲಿ ರಾಜ್ಯ ಕ್ರಿಕೆಟ್ ಸಂಸ್ಥೆ ಬೃಹತ್ ಕ್ರೀಡಾಂಗಣ ನಿರ್ಮಿಸಲು 20 ಎಕರೆ ಜಾಗ ಕೇಳುತ್ತಿದ್ದರೂ, ನೀಡದಿರುವುದು ವಿಷಾದನೀಯ. ಸಂಸ್ಥೆಯಿಂದ ಗುಣಮಟ್ಟದ ಕ್ರೀಡಾಂಗಣ ನಿರ್ಮಾಣಗೊಂಡು ಐಪಿಎಲ್‌ನಂತಹ ಪಂದ್ಯಾವಳಿಗಳು ನಡೆದರೆ ಹೆಚ್ಚಿನ ಲಾಭವಾಗಲಿದೆ. ಈ ಬಗ್ಗೆ ಜಿಲ್ಲಾಡಳಿತದೊಂದಿಗೆ ಪತ್ರಕರ್ತರು ಚರ್ಚಿಸಬೇಕು ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಶ್ರೀಧರ್ ಮಾತನಾಡಿ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪತ್ರಿಕಾರಂಗ ಒಳಗೊಂಡ ಈ ಸೌಹಾರ್ದಯುತ ಪಂದ್ಯಾವಳಿ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಎಎಸ್ಪಿ ಉದೇಶ್ ಮಾತನಾಡಿ, ಸದಾ ಜಂಜಾಟದಲ್ಲಿ ತೊಡಗಿರುವವರ ಮನೋಲ್ಲಾಸಕ್ಕಾಗಿ ಇಂತಹ ಸೌಹಾರ್ದತೆಯ ಕ್ರೀಡಾಕೂಟ ಸಹಕಾರಿ ಎಂದರು.

ಕಾರ್ಯಕ್ರಮದಲ್ಲಿ ಅಬಕಾರಿ ಇಲಾಖೆ ಮೋಹನ್, ಪೌರಾಯುಕ್ತ ರಾಮದಾಸ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದೂಶೇಖರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಮಹೇಶ್ ಗೌಡಹಳ್ಳಿ, ರಾಜ್ಯ ಪರಿಷತ್ ಸದಸ್ಯರಾದ ಗೂಳಿಪುರ ನಂದೀಶ್, ತೀರ್ಪುಗಾರರಾದ ವಿ. ಶ್ರೀನಿವಾಸ ಪ್ರಸಾದ್, ನಾಗೇಂದ್ರ ಉಪಸ್ಥಿತರಿದ್ದರು.





ಪೊಲೀಸರ ತಂಡ ಚಾಂಪಿಯನ್

ಚಾಮರಾಜನಗರ: ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ ಸೌಹಾರ್ದಯುತ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪೊಲೀಸರ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿತು.

ಪಂದ್ಯಾವಳಿಯಲ್ಲಿ ಜನಪ್ರತಿನಿಧಿಗಳ ತಂಡ, ಪೊಲೀಸ್ ತಂಡ, ಅಬಕಾರಿ ತಂಡ, ನಗರಸಭೆ ತಂಡ, ಜಿಲ್ಲಾಧಿಕಾರಿ ತಂಡ, ಪತ್ರಕರ್ತರ ತಂಡ, ವಕೀಲರ ತಂಡ ಒಳಗೊಂಡಂತೆ 7 ತಂಡಗಳು ಭಾಗವಹಿಸಿದ್ದವು. ಅಂತಿಮವಾಗಿ ನಡೆದ ಫೈನಲ್ ಹಣಾಹಣಿಯಲ್ಲಿ ಪೊಲೀಸರ ತಂಡ ಚಾಂಪಿಯನ್ ಆದರೇ, ಪತ್ರಕರ್ತರ ತಂಡ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಗಮನ ಸೆಳೆದ ಜನಪ್ರತಿನಿಧಿ ತಂಡ: ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ನಾಯಕತ್ವದ ಜನಪ್ರತಿನಿಧಿಗಳ ತಂಡದಲ್ಲಿ ಶಾಸಕರಾದ ಹೆಚ್.ಎಂ. ಗಣೇಶ ಪ್ರಸಾದ್, ಮಾಜಿ ಶಾಸಕ ಸಿ.ಎಸ್. ನಿರಂಜನಕುಮಾರ್, ಮುಖಂಡರಾದ ಎಂ.ರಾಮಚಂದ್ರ, ಪಿ.ಮರಿಸ್ವಾಮಿ, ಆಲೂರು ಪ್ರದೀಪ್, ಜಿ.ನಿಜಗುಣರಾಜು, ಕೆರಹಳ್ಳಿ ನವೀನ್ ಇತರರು ಪಾಲ್ಗೊಂಡಿದ್ದ ತಂಡ ಗಮನ ಸೆಳೆಯಿತು.

ಮೈಸೂರು ಮಿತ್ರ ಸೋಮವಾರ 24 ಜುಲೈ 2023

ಶ್ರೀಲಂಕಾದ ಬ್ಯಾಟರ್ ಲಹಿರು ತಿರಿಮನ್ನೆ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ



ಕೊಲಂಬೋ, ಜು.23– ಶ್ರೀಲಂಕಾದ ಕ್ರಿಕೆಟಿಗ ಲಹಿರು ತಿರಿಮನ್ನೆ ಭಾನುವಾರ ಎಲ್ಲಾ ರೀತಿಯ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. 33 ವರ್ಷದ ಅಗ್ರ ಕ್ರಮಾಂಕದ ಬ್ಯಾಟರ್ ಆಗಿದ್ದ ತಿರಿಮನ್ನೆ, ಅವರು 2010 ರಲ್ಲಿ ಅಂತಾರಾಷ್ಟ್ರೀಯ ಪಂದ್ಯಕ್ಕೆ ಪಾದಾರ್ಪಣೆ ಮಾಡಿದ್ದ ತಿರುಮನ್ನೆ 44 ಟೆಸ್ಟ್, 127 ಏಕದಿನ ಪಂದ್ಯಗಳು ಮತ್ತು 26 ಟಿ–20 ಪಂದ್ಯಗಳನ್ನಾಡಿದ್ದಾರೆ.

ತಮ್ಮ ಫೇಸ್ ಬುಕ್ ಖಾತೆಯಲ್ಲಿ ನಿವೃತ್ತಿ ನಿರ್ಧಾರವನ್ನು ಪ್ರಕಟಿಸಿರುವ ತಿರಿಮನ್ನೆ, ದಿಢೀರ್ ತೀರ್ಮಾನಕ್ಕೆ ಕಾರಣವನ್ನು ಬಹಿರಂಗಪಡಿಸಿಲ್ಲ, ಆದರೆ ತಮ್ಮ ಮಾಜಿ ಸಹ ಆಟಗಾರರು ಮತ್ತು ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ) ಸದಸ್ಯರಿಗೆ ತಮ್ಮ ಧನ್ಯವಾದ ತಿಳಿಸಿದ್ದಾರೆ. ಆಟಗಾರನಾಗಿ ನಾನು ನನ್ನ ಅತ್ಯುತ್ತಮ ಕೊಡುಗೆ ನೀಡಿದ್ದೇನೆ, ಅತ್ಯುತ್ತಮ ಪ್ರಯತ್ನ ಮಾಡಿದ್ದೇನೆ, ನಾನು ಆಟವನ್ನು ಗೌರವಿಸುತ್ತೇನೆ ಮತ್ತು ತಾಯಿನಾಡಿಗೆ ಪ್ರಾಮಾಣಿಕವಾಗಿ ಮತ್ತು ನೈತಿಕವಾಗಿ ಕರ್ತವ್ಯ ನಿರ್ವಹಿಸಿದ್ದೇನೆ ಎಂದು ತಿರಿಮನ್ನೆ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ನಿವೃತ್ತಿ ಘೋಷಣೆ ಕಷ್ಟಕರವಾದ ನಿರ್ಧಾರವಾಗಿತ್ತು. ಆದರೆ ಈ ನಿರ್ಧಾರವನ್ನು ಸ್ವಇಚ್ಛೆಯಿಂದ ಅಥವಾ ಇಷ್ಟವಿಲ್ಲದೆ ತೆಗೆದುಕೊಳ್ಳಲು ನನ್ನ ಮೇಲೆ ಪ್ರಭಾವ ಬೀರಿದ ಅನೇಕ ಅನಿರೀಕ್ಷಿತ ಕಾರಣಗಳನ್ನು ಉಲ್ಲೇಖಿಸಲಾರೆ. ಶ್ರೀಲಂಕಾ ಕ್ರಿಕೆಟ್ ಸದಸ್ಯರು, ತರಬೇತುದಾರರು, ತಂಡದ ಸಹ ಆಟಗಾರರು, ಫಿಸಿಯೋಗಳು, ತರಬೇತುದಾರರು ಮತ್ತು ವಿಶ್ಲೇಷಕರ ಬೆಂಬಲ ಮತ್ತು ಪ್ರೋತ್ಸಾಹಕ್ಕಾಗಿ ಧನ್ಯವಾದ ಎಂದು ಅವರು ಬರೆದುಕೊಂಡಿದ್ದಾರೆ.

ತಿರಿಮನ್ನೆ 2014ರಲ್ಲಿ ಶ್ರೀಲಂಕಾದ ಐಸಿಸಿ T20 ವಿಶ್ವಕಪ್ ವಿಜೇತ ತಂಡದ ಭಾಗವಾಗಿದ್ದರು ಮತ್ತು ಇನ್ನೂ ಎರಡು ವಿಶ್ವಕಪ್‌ಗಳಲ್ಲಿ ಕಾಣಿಸಿಕೊಂಡರು. ಅವರು ಐದು ಏಕದಿನ ಪಂದ್ಯಗಳಲ್ಲಿ ಶ್ರೀಲಂಕಾದ ನಾಯಕತ್ವ ವಹಿಸಿದ್ದರು ಮತ್ತು ಎರಡು ಏಕದಿನ ವಿಶ್ವಕಪ್‌ಗಳಲ್ಲಿಯೂ ಆಡಿದರು. ಕಳೆದ ವರ್ಷ ಬೆಂಗಳೂರಿನಲ್ಲಿ ನಡೆದ ಟೆಸ್ಟ್‌ನಲ್ಲಿ ಅವರು ಶ್ರೀಲಂಕಾ ಪರ 2 ಇನ್ನಿಂಗ್ಸ್‌ಗಳಲ್ಲಿ ಕೇವಲ ಎಂಟು ರನ್ ಗಳಿಸಿದ್ದರು.

ಒಂದನೇ ಪುಟದಿಂದ

ಮುಂದುವರೆದ ವರುಣಾರ್ಭಟ

ಇನ್ನು ಆರಂಭವಾಗದ ಕಾರಣ ಕೃಷಿ ಹಾನಿ ತಪ್ಪಿದೆ.

ರಸ್ತೆ ಸಂಚಾರ ಬಂದ್: ನಾಪೋಕ್ಲು, ಕಕ್ಕಬ್ಬೆ, ಕುಂಜಿಲ ಸೇರಿದಂತೆ ಕಾವೇರಿ ನದಿ ಪಾತ್ರದ ಗ್ರಾಮಗಳಲ್ಲಿ ಭಾರೀ ಮಳೆಯಾಗುತ್ತಿರುವ ಕಾರಣ ಕಾವೇರಿ ನದಿ ಅಪಾಯ ಮಟ್ಟ ಮೀರಿ ಹರಿಯುತ್ತಿದೆ. ಭಾಗಮಂಡಲ–ನಾಪೋಕ್ಲು ರಸ್ತೆ ನದಿ ಪ್ರವಾಹದಲ್ಲಿ ಮುಳುಗಿದ್ದು, ಜನ ಮತ್ತು ವಾಹನ ಸಂಚಾರ ಬಂದ್ ಆಗಿದೆ.

ತಲಕಾವೇರಿ ವ್ಯಾಪ್ತಿಯಲ್ಲಿ ಭಾನುವಾರ ಮಧ್ಯಾಹ್ನದ ಬಳಿಕ ಭಾರೀ ಮಳೆ ಸುರಿದ ಪರಿಣಾಮ ಮಡಿಕೇರಿ–ಭಾಗಮಂಡಲ ರಸ್ತೆಯ ಮೇಲೆ 1 ಅಡಿ ನೀರು ಹರಿಯುತ್ತಿದ್ದು, ಜನ ಮತ್ತು ವಾಹನ ಸಂಚಾರ ಮುಂದುವರೆದಿದೆ. ನಾಪೋಕ್ಲು–ಚೆರಿಯಪರಂಬು ರಸ್ತೆಯ ಮೇಲೆ 2 ಅಡಿ ನದಿ ಪ್ರವಾಹ ನೀರು ಹರಿಯುತ್ತಿದೆ. ಭಾಗಮಂಡಲ ಹೋಬಳಿಯ ಬೇಂಗೂರು ಗ್ರಾಮದ ದೋಣಿಕಡುವು ಗ್ರಾಮದ ಸಂಪರ್ಕ ಸೇತುವೆ ಕಾವೇರಿ ನದಿ ಪ್ರವಾಹದಿಂದ ಮುಳುಗಡೆಯಾಗಿದೆ. ಕೊಟ್ಟಮುಡಿ, ಕೊಂಡಂಗೇರಿ ಕಡೆಗಳಲ್ಲೂ ಕಾವೇರಿ ನದಿ ನೀರು ತಗ್ಗು ಪ್ರದೇಶಗಳಿಗೆ ನುಗ್ಗಿರುವ ಬಗ್ಗೆ ವರದಿಯಾಗಿದೆ. ನಾಪೋಕ್ಲು–ಮೂರ್ನಾಡು ಮುಖ್ಯ ರಸ್ತೆಯ ಬೊಳಿಬಾಣೆ ಬಳಿ ರಸ್ತೆಯ ಮೇಲೆ 2 ಅಡಿಗಳಷ್ಟು ಪ್ರವಾಹದ ನೀರು ಹರಿಯುತ್ತಿದ್ದು, ಸಂಚಾರ ಕಡಿತಗೊಂಡಿದೆ. ಚೆರಿಯಪರಂಬು, ಕಲ್ಲುಮೊಟ್ಟೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಾವೇರಿ ನದಿ ಪ್ರವಾಹದಿಂದ ಸಂಚಾರ ಸ್ಥಗಿತಗೊಂಡಿದ್ದು, ಈ ಭಾಗದಲ್ಲಿ ಪ್ರವಾಹದ ಭೀತಿ ಎದುರಾಗಿದೆ. ಕಕ್ಕಬ್ಬೆ ಗ್ರಾಮದಿಂದ ಕುಂಜಿಲ ಪೈನರಿ ದರ್ಗಾಕ್ಕೆ ಹೋಗುವ ರಸ್ತೆ ಜಲಾವೃತಗೊಂಡಿದೆ. ನಾಪೋಕ್ಲುವಿನಿಂದ ವಿರಾಜಪೇಟೆಗೆ ತೆರಳುವ ಕೈಕಾಡು ಹೊಳೆ ಹಾಗೂ ಎಡಪಾಲ ಮಾರ್ಗವಾಗಿ ಕಡಂಗ ತೆರಳುವ ಅರಪಟ್ಟು ಎಂಬಲ್ಲಿ ರಸ್ತೆಯಲ್ಲಿ ಪ್ರವಾಹ ಬಂದು ಸಂಪರ್ಕ ಕಡಿತಗೊಳ್ಳುವ ಎಲ್ಲಾ ಸಾಧ್ಯತೆಗಳು ಕಂಡು ಬರುತ್ತಿದೆ. ಕಾವೇರಿ ನದಿಯು ಅಪಾಯದ ಮಟ್ಟ ತಲುಪಿದ್ದು, ಮಳೆಯ ಆರ್ಭಟ ಇನ್ನೆರಡು ದಿನಗಳ ಕಾಲ ಹೀಗೆ ಮುಂದುವರೆದಲ್ಲಿ ನಾಪೋಕ್ಲು ಪಟ್ಟಣ ಎಲ್ಲಾ ಕಡೆಗಳಿಂದ ಸಂಪರ್ಕ ಕಡಿತಗೊಳ್ಳುವ ಸಾಧ್ಯತೆಗಳು ಕಂಡು ಬರುತ್ತಿದೆ.

ಮನೆಗಳಿಗೆ ಪ್ರವಾಹ ಆತಂಕ: ಇತ್ತ ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದಲ್ಲಿ ಕಾವೇರಿ ನದಿ ಪ್ರವಾಹ ತಲೆದೋರಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಮಳೆ ಮತ್ತಷ್ಟು ಬಿರುಸು ತೋರಿದಲ್ಲಿ ನೀರಿನ ಮಟ್ಟ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿ ಮನೆಗಳು ಪ್ರವಾಹಕ್ಕೆ ಸಿಲುಕಲಿದ್ದು, ನದಿ ತಟದ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದೆ. ವಿರಾಜಪೇಟೆ ತಾಲೂಕು ತಹಶೀಲ್ದಾರ್ ರಾಮಚಂದ್ರ ಅವರು ಕರಡಿಗೋಡು ಗ್ರಾಮಕ್ಕೆ ಭಾನುವಾರ ಭೇಟಿ ನೀಡಿ ನದಿ ಪ್ರವಾಹ ವೀಕ್ಷಿಸಿದರು. ವ್ಯಾಪಕ ಮಳೆಯಿಂದ ನೀರಿನ ಮಟ್ಟ ಹೆಚ್ಚಾಗುವ ಸಾಧ್ಯತೆ ಇದ್ದು, ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಇಲ್ಲಿನ ಕುಟುಂಬದವರಲ್ಲಿ ಮನವಿ ಮಾಡಿದರು. ಈಗಾಗಲೇ ತಾಲೂಕು ಆಡಳಿತ ಕಾಳಜಿ ಕೇಂದ್ರ ತೆರೆಯಲು ಸಿದ್ಧತೆ ಮಾಡಿಕೊಂಡಿದ್ದು, ಮಳೆ ಇದೇ ರೀತಿ ಮುಂದುವರೆದಲ್ಲಿ ಸಂತ್ರಸ್ತರನ್ನು ಪರಿಹಾರ ಕೇಂದ್ರಕ್ಕೆ ಸ್ಥಳಾಂತರಿಸಲಾಗುವುದು ಎಂದು ತಹಶೀಲ್ದಾರರು ತಿಳಿಸಿದರು.

ಧನುಷ್ಕೋಟಿ ಜಲಪಾತ

ಇದರೊಂದಿಗೆ ಹಾರಂಗಿ ಜಲಾಶಯದಿಂದ ಹೊರ ಬಿಡುತ್ತಿರುವ ನೀರು ಕಾವೇರಿ ನದಿಗೆ ಸೇರಿ ಕೆಆರ್‌ಎಸ್ ಜಲಾಶಯಕ್ಕೆ ಸೇರುತ್ತಿದೆ. ಇದರಿಂದ ನದಿಯಲ್ಲಿ ನೀರಿನ ಮಟ್ಟದಲ್ಲಿ ಭಾರಿ ಪ್ರಮಾಣದ ಹೆಚ್ಚಳ ಕಂಡು ಬಂದಿದೆ.

ಕಣ್ಮನ ಸೂರೆಗೊಂಡ ಧನುಷ್ಕೋಟಿ: ಕೊಡಗಿನಿಂದ ಕೆಆರ್‌ಎಸ್ ಜಲಾಶಯಕ್ಕೆ ಕಾವೇರಿ ಮೂಲಕ ಹರಿಯುತ್ತಿರುವ ಅಪಾರ ಪ್ರಮಾಣದ ನೀರು ಮಾರ್ಗಮಧ್ಯೆ ಕೆ.ಆರ್.ನಗರ ತಾಲೂಕಿನ ಚುಂಚನಕಟ್ಟೆಯ ಪುರಾಣದಲ್ಲೂ ಪ್ರಸಿದ್ಧಿಯಾಗಿ ಶ್ರೀರಾಮನ ಪಾದಸ್ಪರ್ಶಕ್ಕೆ ಸಾಕ್ಷಿಯಾಗಿತ್ತು ಎನ್ನಲಾದ 'ಧನುಷ್ಕೋಟಿ' ಜಲಪಾತದ ಮೆರಗು ಹೆಚ್ಚಿಸಿದೆ. 'ಧನುಷ್ಕೋಟಿ' ಜಲಪಾತ ಮಾತ್ರ ತನ್ನದೇ ವಿಭಿನ್ನತೆಯಿಂದ ಸ್ಥಳೀಯರು ಮಾತ್ರವಲ್ಲದೆ ಪ್ರವಾಸಿಗರನ್ನು ಸೂರೆಗೊಳ್ಳಲಾರಂಭಿಸಿದೆ.

ವರ್ಷಧಾರೆಯಿಂದ ಜೀವನದಿ ಕಾವೇರಿ ಕಳೆಕಟ್ಟಿದೆ. ಇದರಿಂದ ಜೂನ್ ಅಂತ್ಯದವರೆಗೂ ನೀರಿನ ಹರಿವಿಲ್ಲದೆ ಮಂಕಾಗಿದ್ದ ಚುಂಚನಕಟ್ಟೆ ಜಲಪಾತಕ್ಕೂ ಜೀವ ತುಂಬಿದ್ದಾಳೆ. 65 ಅಡಿ ಎತ್ತರದಿಂದ ಧುಮ್ಮಿಕ್ಕುವ ಧನುಷ್ಕೋಟಿ ಜಲಪಾತದಲ್ಲಿ ಹಾಲಿನ ನೊರೆಯಂತೆ ರಭಸವಾಗಿ ಹರಿಯುವ ನೀರು ಕಾಣುತ್ತಿದ್ದು, ನೋಡುಗರ ಕಣ್ಮನ ಸೆಳೆಯುತ್ತಿದೆ. ವೀಕ್ಷಣಾ ಗೋಪುರದಿಂದ ಪ್ರವಾಸಿಗರು ಜಲಪಾತ ವೀಕ್ಷಿಸಿ ಸಂಭ್ರಮಿಸುತ್ತಿದ್ದಾರೆ. 3–4 ದಿನಗಳಿಂದಷ್ಟೇ ಸೌಂದರ್ಯ ವೃದ್ಧಿಸಿಕೊಂಡಿರುವ ಈ ಜಲಪಾತ, ಭಾನುವಾರ ಭೋರ್ಗರೆಯಲಾರಂಭಿಸಿತ್ತು. ಇನ್ನಷ್ಟು ದಿನ ಹೆಚ್ಚಿನ ನೀರು ಹರಿಯುವುದರಿಂದ ಪ್ರವಾಸಿಗರಿಗೆ ಪಿಕ್‌ನಿಕ್ ತಾಣವಾಗಿಯೂ ಮುದನೀಡಲಿದೆ.

ಚುರುಕಾದ ವ್ಯಾಪಾರ: ಧನುಷ್ಕೋಟಿ ಜಲಪಾತದ ಸೌಂದರ್ಯ ಸವಿಯಲು ಬರುವ ಪ್ರವಾಸಿಗರಿಂದ ಹಣ್ಣು, ಪಾನಿಪುರಿ, ಮಸಾಲೆ ಪುರಿ, ಬಜ್ಜಿ–ಬೋಂಡ ಸೇರಿದಂತೆ ತಿನಿಸುಗಳ ವ್ಯಾಪಾರಿಗಳು, ಆಟಿಕೆ ವ್ಯಾಪಾರಿಗಳು ಜೀವನ ಸುಧಾರಿಸುತ್ತಿದೆ.

ಶ್ರೀರಾಮ, ಲಕ್ಷ್ಮಣ, ಸೀತೆಯ ಹೆಜ್ಜೆ.....

ಸೀಗೆಕಾಯಿ ಇಟ್ಟಿದ್ದರೆನ್ನಲಾದ ಬಂಡೆ ಮೇಲಿಂದ ಕೆಂಪು ಬಣ್ಣದಲ್ಲಿ ಹರಿಯುವಂತೆ ಈಗಲೂ ಕಾಣುತ್ತದೆ. ರಾಮ, ಲಕ್ಷ್ಮಣರು ಬಂದಿದ್ದ ಸ್ಮರಣಾರ್ಥ ಮೈಸೂರು ರಾಜವಂಶಸ್ಥ ಕೃಷ್ಣರಾಜ ಒಡೆಯರ್ ಅವರು ಧನುಷ್ಕೋಟಿ ಜಲಪಾತದ ಬಳಿ 'ಶ್ರೀರಾಮದೇವರ ದೇವಾಲಯ' ನಿರ್ಮಿಸಿದ್ದಾರೆ. ಇಂದಿಗೂ ಆ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನೆರವೇರುತ್ತಿದೆ. ನಿನ್ನೆಯಷ್ಟೇ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಪೂಜಾ ಕಾರ್ಯ ನೆರವೇರಿರುವ ಸಂದರ್ಭದಲ್ಲಿ ರಾಮನ ಛಾಪು ಇರುವ ಧನುಷ್ಕೋಟಿ ಜಲಪಾತ ದುಮ್ಮಿಕ್ಕಿ ವಿಶೇಷತೆ ಪಾತ್ರವಾಗಿದೆ.

ಕತ್ತುಕೊಯ್ದು ಭೀಕರ ಹತ್ಯೆ

ರಸ್ತೆ ಪಕ್ಕದಲ್ಲಿ ನಾಗರಾಜು ಅವರ ಶವ ಪತ್ತೆಯಾಗಿದೆ. ಕತ್ತಿಗೆ ಹಗ್ಗ ಬಿಗಿದು, ಕೊಯ್ದು ಅವರನ್ನು ಹತ್ಯೆ ಮಾಡಲಾಗಿದೆ. ರಸ್ತೆ ಬದಿ ಶವ ಬಿದ್ದಿರುವುದನ್ನು ಗಮನಿಸಿದ ಸಾರ್ವಜನಿಕರು ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ವರುಣ ಪೊಲೀಸ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಚೇತನ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಪರಿಶೀಲಿಸಿದ್ದಾರೆ. ಮೃತರ ವಾರಸುದಾರರು ಬಂದು ಖಚಿತಪಡಿಸಿದ ಬಳಿಕ ಮುಂದಿನ ಕ್ರಮ ಕೈಗೊಂಡರು. ಎಸ್ಪಿ ಸೀಮಾ ಲಾಟ್ಕರ್, ಎಎಸ್‌ಪಿ ಬಿ.ಎಂ.ನಂದಿನಿ, ಸರ್ಕಲ್ ಇನ್‌ಸ್ಪೆಕ್ಟರ್ ಪುರುಷೋತ್ತಮ್ ಸ್ಥಳ ಪರಿಶೀಲನೆ ನಡೆಸಿದರು. ಈ ಸಂಬಂಧ ನಾಗರಾಜು ಅವರ ಪುತ್ರ ನೀಡಿದ ದೂರಿನನ್ವಯ ವರುಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಾಗರಾಜು ಅವರ ಮೇಲೆ ಯಾರಿಗಾದರೂ ವೈಷಮ್ಯವಿತ್ತೇ ಅಥವಾ ಇನ್ನಾವುದೇ ಸಮಸ್ಯೆಯಾಗಿತ್ತೆ ಎನ್ನುವುದು ಮನೆಯವರಿಗೂ ತಿಳಿದಿಲ್ಲ. ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ ಎಂದಷ್ಟೇ ದೂರಿನಲ್ಲಿ ತಿಳಿಸಿದ್ದಾರೆ. ಹಾಗಾಗಿ ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಸಬ್‌ಇನ್‌ಸ್ಪೆಕ್ಟರ್ ಚೇತನ್ ತಿಳಿಸಿದ್ದಾರೆ.

ಡಾ.ಹೆಚ್.ತಿಪ್ಪೇರುದ್ರಸ್ವಾಮಿಯವರ 95ನೇ ಸಂಸ್ಮರಣೆ ದತ್ತಿ ಉಪನ್ಯಾಸ, ಸಂಸ್ಮರಣಾ ಕೃತಿಗಳ ಬಿಡುಗಡೆ

ಪ್ರಸ್ತುತ ಸವಾಲುಗಳಿಗೆ ಶರಣ ಸಾಹಿತ್ಯದಲ್ಲಿ ಪರಿಹಾರ

ತಿಪ್ಪೇರುದ್ರಸ್ವಾಮಿ ಶರಣ ಸಾಹಿತ್ಯ ಅಧ್ಯಯನದ ದಿಕ್ಸೂಚಿ ; ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ

ಮೈಸೂರು, ಜು.23(ಪಿಎಂ)– ಪ್ರಸ್ತುತದ ಸವಾಲುಗಳಿಗೆ ಶರಣ ಸಾಹಿತ್ಯದಲ್ಲಿ ಪರಿಹಾರ ಕಂಡುಕೊಳ್ಳುವ ತುರ್ತು ಅಗತ್ಯವಿದ್ದು, ಈ ನಿಟ್ಟಿನಲ್ಲಿ ಶರಣ ಸಾಹಿತ್ಯ ಕೃಷಿಯಲ್ಲಿ ವಿಶಿಷ್ಟ ಕೊಡುಗೆ ನೀಡಿರುವ ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಅವರು ಶರಣ ಸಾಹಿತ್ಯ ಅಧ್ಯಯನದ ದಿಕ್ಸೂಚಿಯಾಗಿದ್ದಾರೆ ಎಂದು ಕನ್ನಡ ವಿಶ್ವವಿದ್ಯಾನಿಲಯ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಸಂಸ್ಮರಣ ಸಮಿತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರ ಮತ್ತು ಜಿಲ್ಲಾ ಘಟಕಗಳು, ಕದಳಿ ಮಹಿಳಾ ವೇದಿಕೆ ಸಂವಹನ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಡಾ.ಹೆಚ್.ತಿಪ್ಪೇರುದ್ರಸ್ವಾಮಿಯವರ 95ನೇ ಸಂಸ್ಮರಣೆ ದತ್ತಿ ಉಪನ್ಯಾಸ, ಸಂಸ್ಮರಣಾ ಕೃತಿಗಳ ಲೋಕಾರ್ಪಣೆ ಸಮಾರಂಭದಲ್ಲಿ 'ಸಾಹಿತ್ಯಾವಲೋಕನ' ಕೃತಿ ಬಿಡುಗಡೆಗೊಳಿಸಿ ಸದರಿ ಕೃತಿ ಕುರಿತು ಅವರು ಮಾತನಾಡಿದರು.

ಶರಣರ ಸಾಹಿತ್ಯ ಸಂಬಂಧ ತಿಪ್ಪೇರುದ್ರಸ್ವಾಮಿಯವರ ಕೊಡುಗೆ ಅಪಾರ. ಅವರು ಸಂಶೋಧನೆ ಮೂಲಕ ಶರಣರ ಚರಿತ್ರೆಯನ್ನು ಸರಳಗೊಳಿಸಿ ಮಂಡಿಸಿದ್ದಾರೆ. ಶರಣ ಸಾಹಿತ್ಯ ಪರಂಪರೆ ಆಳವಾದ ಅಧ್ಯಯನದ ಮೂಲಕ ತಮ್ಮ ಅನೇಕ ಕೃತಿಗಳಲ್ಲಿ ಅದರ ಮಹತ್ವ ಎತ್ತಿ ತೋರಿಸಿದ್ದಾರೆ ಎಂದರು.

ಶರಣರ ಸಾಮಾಜಿಕ ಚಳವಳಿ ಹಾಗೂ ಅವರ ಕೊಡುಗೆಯ ಬಗ್ಗೆ ಧನ್ಯತಾ ಭಾವ ಹೊಂದಿದ್ದರೂ ವಿಮರ್ಶಾತ್ಮಕ ದೃಷ್ಟಿಕೋನದಲ್ಲಿ ನೋಡಿರುವುದು ತಿಪ್ಪೇರುದ್ರಸ್ವಾಮಿಯವರ ವಿದ್ವತ್ತಿಗೆ ಸಾಕ್ಷಿ. ಅವರು ಶರಣರ ಮಹತ್ವವನ್ನು ಪಾರಂಪರಿಕವಾಗಿ ಕೊಂಡಾಡುವುದಕ್ಕೆ ಸೀಮಿತವಾಗಿಲ್ಲ. ಜೊತೆಗೆ ವಿಮರ್ಶಾತ್ಮಕ ನೆಲೆಯಲ್ಲಿ ಶರಣರ ಸಾಮಾಜಿಕ ಚಳವಳಿ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಆ ಮೂಲಕ ಶರಣರ ಜೀವನ ಚರಿತ್ರೆಯನ್ನು ಮರು ರೂಪಿಸಿದ್ದಾರೆ. ಆ ಮೂಲಕ ಇಡೀ ಶರಣರನ್ನು ಆಧುನಿಕ ಕಾಲಕ್ಕೆ ತಂದ ನಿಲ್ಲಿಸಿದ್ದಾರೆ ಎಂದು ತಿಳಿಸಿದರು.

ಇಡೀ 'ಸಾಹಿತ್ಯಾವಲೋಕನ' ಗ್ರಂಥದಲ್ಲಿ ಅತ್ಯಂತ ವಿಮರ್ಶಾತ್ಮಕವಾಗಿ ತಿಪ್ಪೇರುದ್ರಸ್ವಾಮಿ ಅವರ ಕೊಡುಗೆಯನ್ನು ನೂರಾರು ಲೇಖಕರು ಮೌಲ್ಯಮಾಪನ ಮಾಡಿ ನಮ್ಮ ಮುಂದಿಟ್ಟಿದ್ದಾರೆ. ಈ ಗ್ರಂಥವು ತಿಪ್ಪೇರುದ್ರಸ್ವಾಮಿಯವರ ವ್ಯಕ್ತಿತ್ವ ಮತ್ತು ವಿದ್ವತ್ ಅನ್ನು ಪರಿಚಯಿಸುವ ಜೊತೆಗೆ ಶರಣ ಸಾಹಿತ್ಯದ ಮರು ಅಧ್ಯಯನದ ತುರ್ತು ಅಗತ್ಯತೆಯನ್ನು ಮನದಟ್ಟು ಮಾಡುತ್ತದೆ ಎಂದು ತಿಳಿಸಿದರು.

ಈ ಕೃತಿ ಅನೇಕ ಭಾಗಗಳಲ್ಲಿ ನಮ್ಮ ಮುಂದೆ ತೆರೆದುಕೊಳ್ಳುತ್ತದೆ. ಭಾಗ 2 ಬಹಳ ಮುಖ್ಯವಾಗಿದ್ದು, ಇಲ್ಲಿ ತಿಪ್ಪೇರುದ್ರಸ್ವಾಮಿಯವರ ಇಡೀ ಕೃತಿಗಳ ಒಂದು ಅವಲೋಕನವಿದೆ. ಕಾದಂಬರಿ, ಕವನ, ಕಥೆ, ನಾಟಕ, ಸಂಶೋಧನೆ, ಸಂಸ್ಕೃತಿ ಮೊದಲಾದವುಗಳ ಕುರಿತು 144 ವಿದ್ವಾಂಸರ ಲೇಖನಗಳು ಇಲ್ಲಿವೆ. ಈ ಭಾಗದಲ್ಲಿ 'ಕರ್ನಾಟಕ ಸಂಸ್ಕೃತಿ ಮತ್ತು ಪರಂಪರೆ'ಗೆ ಸಂಬಂಧಿಸಿದಂತೆ ತಿಪ್ಪೇರುದ್ರಸ್ವಾಮಿಯವರು ರಚಿಸಿದ 11 ಲೇಖನಗಳನ್ನು ಸಂಪಾದಿಸಲಾಗಿದೆ. ಅದರಲ್ಲಿ 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಭಾಗವು ಕನ್ನಡ ಐಚ್ಛಿಕ ವಿದ್ಯಾರ್ಥಿಗಳು ಮತ್ತು ಕನ್ನಡ ಭಾಷೆ, ಕರ್ನಾಟಕದ ಇತಿಹಾಸ, ವಾಸ್ತುಶಿಲ್ಪ, ಜಾನಪದ, ಶಾಸನ ಮೊದಲಾದ ಶಾಸ್ತ್ರೀಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ದೊಡ್ಡ ಕೈಗನ್ನಡಿಯಾಗಲಿದೆ ಎಂದರು.

ತಿಪ್ಪೇರುದ್ರಸ್ವಾಮಿಯವರು ಭೌತಿಕವಾಗಿ ನಮ್ಮ ಮುಂದೆ ಇಲ್ಲ. ಹಾಗಾಗಿ ಅವರ ಕೃತಿಗಳ ಮೂಲಕ ಅವರನ್ನು ನೆನೆಪು ಮಾಡಿಕೊಳ್ಳಬೇಕಿದೆ. ಅವರ ಕೃತಿಗಳಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಮರು ರಚಿಸಿ ಕೊಡುವ ಪ್ರಯತ್ನ ಮಾಡಿರುವುದನ್ನು ಕಾಣಬಹುದು ಎಂದು ಹೇಳಿದರು.

'ಬಯಲು ಬೆಳಗು' ಕೃತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆಗೊಳಿಸಿ, ಸಾನ್ನಿಧ್ಯ ವಹಿಸಿದ್ದರು. ಸದರಿ ಕೃತಿ ಕುರಿತು ಹಿರಿಯ ಸಾಹಿತಿ ಡಾ.ವೀರಣ್ಣ ರಾಜೂರ ಮಾತನಾಡಿದರು. 'ನೆನಪಿನ ಬುತ್ತಿ' ಕೃತಿ ಬಿಡುಗಡೆಗೊಳಿಸಿದ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಸದರಿ ಕೃತಿಯ ಪರಿಚಯವನ್ನೂ ಮಾಡಿದರು. ಇದೇ ವೇಳೆ ಬಿಡುಗಡೆಗೊಂಡ ಕೃತಿಗಳ ಎಲ್ಲಾ ಸಂಪಾದಕರನ್ನು ಸನ್ಮಾನಿಸಲಾಯಿತು. ದಾವಣಗೆರೆ ಹೊನ್ನಾಳಿಯ ಹಿರೇಕಲ್ಮಠದ ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಂಸ್ಮರಣಾ ಸಮಿತಿ ಸಂಚಾಲಕಿ ಹಾಗೂ ತಿಪ್ಪೇರುದ್ರಸ್ವಾಮಿಯವರು ಪುತ್ರಿ ಡಾ.ಹೆಚ್.ಟಿ.ಶೈಲಜ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಸಂವಹನ ಪ್ರಕಾಶನದ ಮಾಲೀಕ ಡಿ.ಎನ್.ಲೋಕಪ್ಪ ಮತ್ತಿತರರು ಹಾಜರಿದ್ದರು.



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಭಾನುವಾರ ಡಾ.ಹೆಚ್.ತಿಪ್ಪೇರುದ್ರಸ್ವಾಮಿಯವರ ಸಂಸ್ಮರಣಾ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

> 'ನೆನಪಿನ ಬುತ್ತಿ' ಕೃತಿ ಡಾ.ಹೆಚ್.ತಿಪ್ಪೇರುದ್ರಸ್ವಾಮಿಯವರ ಆತ್ಮಕಥೆ. ಇದು ಸಣ್ಣ ಪುಸ್ತಕವಾದರೂ ಗಣ್ಯವಾದ ಪುಸ್ತಕ. ತಿಪ್ಪೇರುದ್ರಸ್ವಾಮಿಯವರು ಒಬ್ಬ ವ್ಯಕ್ತಿಯಲ್ಲ, ಶಕ್ತಿ. ಸಾಹಿತ್ಯ ಗಾತ್ರದ ದೃಷ್ಟಿಯಲ್ಲಿ ಅವರು ದೈತ್ಯ, ಸತ್ವದ ದೃಷ್ಟಿಯಿಂದ ದೇವಧೂತ. ಇವರ ಜೀವನ ಕಥೆ ಒಂದು ಮಹಾಯಾನ. 'ನೆನಪಿನ ಬುತ್ತಿ'ಯು ವಿದ್ಯಾರ್ಥಿ, ಯುವ ಜನತೆಗೆ ಸ್ಫೂರ್ತಿಯ ಆಕಾರವಾಗಲಿ ಎಂದು ಹಾರೈಸುತ್ತೇನೆ.
> -ಸಿಪಿಕೆ, ಹಿರಿಯ ಸಾಹಿತಿ

> ಡಾ.ತಿಪ್ಪೇರುದ್ರಸ್ವಾಮಿಯವರು ಶರಣ ಸಾಹಿತ್ಯಕ್ಕೆ ಮಾತ್ರವೇ ತಮ್ಮ ಬರವಣಿಗೆ ಸೀಮಿತಗೊಳಿಸಿರಲಿಲ್ಲ. ಅದರ ಜೊತೆಗೆ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ತೊಡಗಿಸಿಕೊಂಡಿದ್ದರು. ಅವರ ಸಾಹಿತ್ಯ ಕುರಿತು ಏಳೆಂಟು ಪಿಹೆಚ್‌ಡಿ ಮಹಾಪ್ರಬಂಧಗಳು ಮಂಡನೆಯಾಗಿವೆ. ಬೇರೆ ಬೇರೆ ಪ್ರಕಾರಗಳಲ್ಲಿ 200 ಗ್ರಂಥಗಳನ್ನು ತಿಪ್ಪೇರುದ್ರಸ್ವಾಮಿಯವರು ರಚನೆ ಮಾಡಿದ್ದಾರೆ. ಈ ಪೈಕಿ ಅರ್ಧಕ್ಕಿಂತಲೂ ಹೆಚ್ಚಿನವು ಶರಣ ಸಾಹಿತ್ಯಕ್ಕೆ ಸಂಬಂಧಿಸಿವೆ. 'ಬಯಲು ಬೆಳಗು' 400 ಲೇಖನಗಳ ಬೃಹತ್ ಗ್ರಂಥ. ಇದು ತಿಪ್ಪೇರುದ್ರಸ್ವಾಮಿಯವರ ಸಮಗ್ರ ವ್ಯಕ್ತಿತ್ವ ಪರಿಚಯಿಸುತ್ತದೆ. ಇವರು ಬಹುಶಿಸ್ತೀಯ ವಿದ್ವಾಂಸರಾಗಿದ್ದರು.
> -ಡಾ.ವೀರಣ್ಣ ರಾಜೂರ, ಹಿರಿಯ ಸಾಹಿತಿ

ಬೆಲೆ ಏರಿಕೆ ವಿರುದ್ಧ ಕರ್ನಾಟಕ ಸೇನಾಪಡೆ ಪ್ರತಿಭಟನೆ




ಮೈಸೂರು, ಜು.23(ಜಿಎ)–ಹಾಲಿನ ದರ ಸೇರಿದಂತೆ, ಅತಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದ ಜಿಲ್ಲಾ ಪಂಚಾಯಿತ್ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಬಿಜೆಪಿ ಸರ್ಕಾರವು ಜನ ವಿರೋಧಿ ಸರ್ಕಾರ, ದಿನೇ ದಿನೇ ಬೆಲೆ ಏರಿಕೆ ಮಾಡುತ್ತಿದೆ ಎಂದು ಜನರಿಗೆ ಹೇಳಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲಾ ಬೆಲೆಗಳನ್ನು ಇಳಿಸುತ್ತೇವೆ ಹಾಗೂ ಉಚಿತ 5 ಗ್ಯಾರಂಟಿ ನೀಡುತ್ತೇವೆಂದು ಆಮಿಷ ಒಡ್ಡಿ ಗೆದ್ದು ಅಧಿಕಾರಕ್ಕೆ ಬಂದ ಮೇಲೆ ಉಚಿತ ಭಾಗ್ಯಗಳಿಗೋಸ್ಕರ, ಮೊದಲು ವಿದ್ಯುತ್ ದರ ಹೆಚ್ಚಳ ಮಾಡಿ, ಕೆಎಸ್‌ಆರ್‌ಟಿಸಿ ದರವನ್ನು ಹೆಚ್ಚಿಸಿ, ಜನತೆಗೆ ಶಾಕ್ ನೀಡಿದ್ದು ಅತ್ಯಂತ ನೋವಿನ ಸಂಗತಿಯಾಗಿದೆ ಎಂದರು.

ಕಾಂಗ್ರೆಸ್‌ನ ಉಚಿತ ಭಾಗ್ಯಗಳ ಯೋಜನೆ ಜಾರಿಗೆ ಹಣ ಸಾಲುತ್ತಿಲ್ಲ. ಆದಾಯ ಕ್ರೋಡಿಕರಿಸಲು ಇದೀಗ ಧಾನ್ಯಗಳು, ಆಹಾರ ಪದಾರ್ಥಗಳು, ಇದೀಗ ಮದ್ಯದ ಮೇಲೆ ಶೇಕಡ 20ರಷ್ಟು ತೆರಿಗೆ ಹೆಚ್ಚಳ ಮಾಡಿರುವುದು ಅತ್ಯಂತ ಖಂಡನೀಯ. ಸರ್ಕಾರ ಜನರಿಗೆ ಒಂದು ಕೈಯಲ್ಲಿ ಕೊಟ್ಟು ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುತ್ತಿದೆ. ಕಾಂಗ್ರೆಸ್‌ನ ಉಚಿತ ಯೋಜನೆಗಳಿಂದ ರಾಜ್ಯದ ಬೊಕ್ಕಸ ಬರಿದಾಗುತ್ತಿದೆ. ರಾಜ್ಯದಲ್ಲಿ ತರಕಾರಿ ಬೆಲೆ ದುಪ್ಪಟ್ಟಾಗಿದೆ.

ಇವುಗಳನ್ನೆಲ್ಲ ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕಾದ ಸರಕಾರ ಈಗ ಜನರಿಗೆ ಅತೀ ಅಗತ್ಯ ವಸ್ತುಗಳಲ್ಲಿ ಒಂದಾದ ಹಾಲಿನ ಬೆಲೆಯನ್ನು ಸಹ ಏರಿಸುತ್ತಿರುವುದು ಜನರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಸರ್ಕಾರ ಈ ಕೂಡಲೇ ಬೆಲೆ ಏರಿಕೆಗಳನ್ನು ನಿಯಂತ್ರಣ ಮಾಡಿ ಅಗತ್ಯ ವಸ್ತುಗಳ ಬೆಲೆಗಳನ್ನು ವಿಶೇಷವಾಗಿ ಧಾನ್ಯಗಳು, ಆಹಾರ ಪದಾರ್ಥಗಳು ಹಾಗೂ ತರಕಾರಿ–ಹಾಲಿನ ಬೆಲೆಗಳನ್ನು ಇಳಿಸಿ ಬಡಜನರ ಬದುಕನ್ನು ಹಸನು ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಪ್ರಭುಶಂಕರ್, ಡಾ.ಶಾಂತ ರಾಜೇಅರಸ್, ಕೃಷ್ಣಪ್ಪ, ಸುರೇಶ್ ಗೋಲ್ಡ್, ವಿಜಯೇಂದ್ರ,, ಅಂಬಾಅರಸ್, ನೇಹಾ, ರಮ್ಯಾ, ಗೊರೂರು ಮಲ್ಲೇಶ್,, ಕುಮಾರ್ ಗೌಡ, ಹನುಮಂತಯ್ಯ, ನಿತ್ಯಾನಂದ, ಬಸವರಾಜು ರಾಧಾಕೃಷ್ಣ ಎಳನೀರು ರಾಮಣ್ಣ ದರ್ಶನ್ ಗೌಡ, ಪ್ರದೀಪ್ ದಿಲೀಪ್, ಮಹದೇವಣ್ಣ, ನಂದಕುಮಾರ್, ಗಣೇಶ್ ಪ್ರಸಾದ್, ಕುಮಾರ್, ಆನಂದ್, ಕೃಷ್ಣ ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ 13 ವರ್ಷದೊಳಗಿನ ರಾಜ್ಯ ಸಬ್ ಜೂನಿಯರ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್ ಬಾಲಕಿಯರ ವಿಭಾಗ ಫೈನಲ್‌ನಲ್ಲಿ ಆಲ್ ಸ್ಟಾರ್ಸ್ ಅಕಾಡೆಮಿ ತನ್ನ ಮೊದಲ ವಿಜೇತ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಚಿತ್ರದಲ್ಲಿ (ಎಡದಿಂದ ನಿಂತವರು) ಗ್ರೀಷ್ಮಾ, ಆಸ್ತಾ ಶೆಟ್ಟಿ, ಸಹಾಯಕ ಕೋಚ್ ಶ್ರಾವಣಿ, ಮುಖ್ಯ ಕೋಚ್ ಶಿವಣ್ಣ ಬಿ, ಆಂಚಲ್, ಲಹರಿ, ಶ್ರಾವ್ಯ, ಮ್ಯಾನೇಜರ್ ಪರಸ್, (ಕುಳಿತವರು ಎಡದಿಂದ) ಸಾನ್ವಿ, ಪ್ರತಿಜ್ಞಾ, ತ್ರಿಷಾ, ಪ್ರಿಯಾ, ದಿತ್ಯಶ್ರೀ ಕಾಣಬಹುದು

ಪಡುವಾರಹಳ್ಳಿ ಶ್ರೀಜೋಡಿ ಮಾರಮ್ಮ ದೇವಾಲಯ ಅಭಿವೃದ್ಧಿ ಟ್ರಸ್ಟ್ ಅಸ್ತಿತ್ವಕ್ಕೆ



ಮೈಸೂರು, ಜು.23(ಜಿಎ)–ಮೈಸೂರಿನ ಪಡುವಾರಹಳ್ಳಿ ಶ್ರೀಜೋಡಿ ಮಾರಮ್ಮ (ಮಾರಿಗುಡಿ) ದೇವಾಲಯದ ಅಭಿವೃದ್ಧಿ ಟ್ರಸ್ಟ್ ಸ್ಥಾಪಿಸಲಾಗಿದೆ ಎಂದು ದೇವಾಲಯದ ಟ್ರಸ್ಟಿ ಶಶಿಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1990ರಲಿ ಪಡುವಾರಹಳ್ಳಿ, ಜೋಡಿ ಮಾರಮ್ಮ ದೇವನ ಸ್ಥಾಪನೆಯಾಗಿ 113 ವರ್ಷ ಹಳೆಯದಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತಾದಿಗಳು ಬಂದು ಧಾರ್ಮಿಕ ಆಚರಣೆಗಳನ್ನು ಮಾಡಿಕೊಂಡು ಬರುತ್ತಿದ್ದು, ದೇವಾಲಯದ ಅಭಿವೃದ್ಧಿಗಾಗಿ ಜು.12 ರಂದು 19 ಮಂದಿ ಟ್ರಸ್ಟಿಗಳ ಸಮ್ಮುಖದಲ್ಲಿ ಚರ್ಚಿಸಿ, ಜು.19 ರಂದು ದೇವಾಲಯದ ಅಭಿವೃದ್ಧಿ ಟ್ರಸ್ಟ್ ಸ್ಥಾಪಿಸಲಾಗಿದೆ ಎಂದರು.

ನೂತನ ಟ್ರಸ್ಟ್‌ನ ಪ್ರಕಾರ ನೂತನ ಅಧ್ಯಕ್ಷರಾಗಿರುವ ಚಿಕ್ಕ ಅರಸ ನಾಯಕ ಅವರ ವಂಶಸ್ಥರಿಗೆ 1952ರಲ್ಲಿ ಪಡುವಾರಹಳ್ಳಿಯ ಯಜಮಾನರು ಹಾಗೂ ಗ್ರಾಮಸ್ಥರು ಪತ್ರದಲ್ಲಿ ಬರೆದುಕೊಟ್ಟಿರುವಂತೆ ಜೋಡಿ ಮಾರಮ್ಮ ದೇವಾಲಯ ಚರ ಮತ್ತು ಸ್ಥಿರಾಸ್ತಿಗಳೆಲ್ಲವೂ ಅವರಿಗೆ ಸೇರಿರುತ್ತವೆ ಎಂದು ತಿಳಿಸಲಾಗಿದ್ದು, ಆದ್ದರಿಂದ ಈಗಲೂ ಜೋಡಿ ಮಾರಮ್ಮ ದೇವಾಲಯಕ್ಕೆ ಸೇರಿದ ಸ್ವತ್ತುಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅಧ್ಯಕ್ಷರಿಗೆ ಮತ್ತು ಟ್ರಸ್ಟಿಗಳಿಗೆ ಒಳಪಟ್ಟಿರುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮದ ಯಜಮಾನರಾದ ಸೋಮಣ್ಣ, ಅಧ್ಯಕ್ಷ ಚಿಕ್ಕ ಅರಸ ನಾಯಕ, ಉಪಾಧ್ಯಕ್ಷ ರಾಚಪ್ಪ ನಾಯಕ, ಖಜಾಂಚಿ ಪ್ರದೀಪ್ ನಾಯಕ, ಟ್ರಸ್ಟಿ ದಿವಾಕರ್ ಮತ್ತು ಮಾಣಿಕ್ಯ ಕುಮಾರ ನಾಯಕ ಉಪಸ್ಥಿತರಿದ್ದರು.

ಉಚಿತ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು. 23– ಮೈಸೂರಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಕುಂಬಾರರ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಉಚಿತ ವಸತಿ ಸೌಕರ್ಯಕ್ಕಾಗಿ 2023–24ನೇ ಸಾಲಿಗೆ ಕುಂಬಾರ ಜನಾಂಗದ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಅರ್ಜಿ ನಮೂನೆ ಪಡೆದು, ಕಾಲೇಜಿನಲ್ಲಿ ವ್ಯಾಸಂಗದ ದೃಢೀಕರಣ ಪತ್ರ ಹಾಗೂ ಜಾತಿ ಪ್ರಮಾಣ ಪತ್ರ ಇನ್ನಿತರ ಎಲ್ಲಾ ದಾಖಲಾತಿಗಳ ಜೊತೆಗೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ದಾಖಲಾತಿಯಾದ ಗುರುತಿನ ಚೀಟಿ ಹಾಗೂ 2 ಭಾವಚಿತ್ರಗಳೊಂದಿಗೆ ಜು. 30 ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮೊ. 9611599514, 9686180254 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕೃಷಿಕರಿಗೆ ಪಿಂಚಣಿಗಾಗಿ ಸರ್ಕಾರದ ಮುಂದೆ ಬೇಡಿಕೆ ಇಡಿ

ರೈತರಿಗೆ ಅಳಂದ ಶಾಸಕ ಬಿ.ಆರ್.ಪಾಟೀಲ್ ಸಲಹೆ

ಮೈಸೂರು, ಜು.23(ಜಿಎ)–ಕೃಷಿಯನ್ನು ನಂಬಿ ಜೀವನ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ರೈತರಿಗೆ ಪಿಂಚಣಿ ನೀಡಬೇಕೆಂದು ಸರ್ಕಾರದ ಮುಂದೆ ಬೇಡಿಕೆ ಇಡಿ ಎಂದು ಅಳಂದ ಶಾಸಕ ಬಿ.ಆರ್.ಪಾಟೀಲ್ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ರೈತಸಂಘ ಯುವ ಘಟಕದ ವತಿಯಿಂದ ನಗರದ ಹುಣಸೂರು ರಸ್ತೆಯಲ್ಲಿರುವ ಕೃಷಿ ಮಾರುಕಟ್ಟೆ ಅಧ್ಯಯನ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಹುತಾತ್ಮರಾದ ಎಂ.ರಾಮು ಚನ್ನಪಟ್ಟಣ ಮತ್ತು ಜಿ.ಟಿ.ರಾಮಸ್ವಾಮಿ ಅವರ ನೆನಪು ಮತ್ತು ಪಡಿತರ ವ್ಯವಸ್ಥೆಗೆ ರೈತರಿಂದಲೇ ಆಹಾರ ಉತ್ಪನ್ನಗಳನ್ನು ಕೊಳ್ಳುವ ಸಾಧ್ಯತೆ ಬಗ್ಗೆ ಏರ್ಪಡಿಸಿದ್ದ ವಿಚಾರ ಮಂಡನೆ ಮತ್ತು ಸಂವಾದವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲವಾರು ವರ್ಷಗಳಿಂದ ರೈತರು ಕೃಷಿಯನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಆದರೆ, ಇತ್ತೀಚೆಗೆ ಅವರ ಮಕ್ಕಳು ನಗರ ಪ್ರದೇಶಕ್ಕೆ ವಲಸೆ ಬರುತ್ತಿದ್ದಾರೆ. ಇದರಿಂದ ರೈತರು ಕೃಷಿಯನ್ನು ನಂಬಿ ಜೀವನ ನಡೆಸುವುದು ಕಷ್ಟಕರವಾಗಿದ್ದು, ರೈತರಿಗೆ ಪಿಂಚಣಿ ನೀಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ ನಾನು ಕೈಜೋಡಿಸುತ್ತೇನೆಂದರು.

ಹುತಾತ್ಮರಾದ ಎಂ.ರಾಮು ಚನ್ನಪಟ್ಟಣ ಮತ್ತು ಜಿ.ಟಿ.ರಾಮಸ್ವಾಮಿ ಇಬ್ಬರು ರೈತಸಂಘದಲ್ಲಿ ತೊಡಗಿಸಿಕೊಂಡು ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದರು. ಅವರಂತೆ ಯುವಕರು ರೈತ ಸಂಘಟನೆಯಲ್ಲಿ ಪಾಲ್ಗೊಂಡು ರೈತರ ಪರವಾಗಿ ಹೋರಾಟಗಳನ್ನು ರೂಪಿಸಿ, ಮುಂದಾಳತ್ವ ವಹಿಸಿಕೊಳ್ಳಿ ಎಂದರು.

ರೈತರ ವಿಚಾರವಾಗಿ ಅನೇಕ ವಿಷಯಗಳ ಬಗ್ಗೆ ಚರ್ಚೆ ಆಗಬೇಕು. ಬಿಜೆಪಿಯವರು ಎಪಿಎಂಸಿ ಕಾಯ್ದೆಯನ್ನು ರದ್ದು ಪಡಿಸಲು ಪ್ರಬಲವಾಗಿ ವಿರೋಧ ಒಡ್ಡಿದ್ದರು. ಅವರಂತೆ ಜೆಡಿಎಸ್ ಸಹ ವಿರೋಧಿಸಿ ಸದನದಿಂದ ಹೊರಗೆ ಹೋದರು. ಶೇ.20ರಷ್ಟು ಬೆಳೆ ಮಾತ್ರ ಮಾರುಕಟ್ಟೆಗೆ ಹೋಗುತ್ತಿದೆ. ಆದರೆ. ಶೇ.80 ರಷ್ಟು ಬೆಳೆಗಳು ಹೊರಗೆ ರಫ್ತಾಗುತ್ತಿದೆ. ಈಗ ಎಲ್ಲರೂ ಎಪಿಎಂಸಿ ಕಾಯ್ದೆ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ತಿಳಿಸಿದರು.

ಭೂಸುಧಾರಣಾ ಕಾಯ್ದೆಯ ಬಗ್ಗೆ ಸದನದಲ್ಲಿ ಚರ್ಚೆ ಆಗಲಿಲ್ಲ. ನಂತರ ಮುಖ್ಯಮಂತ್ರಿ ಗಳನ್ನು ಭೇಟಿ ಮಾಡಿ ಮನವಿ ಮಾಡಲಾಯಿತು. ಬಿಜೆಪಿಯವರು ಅದನ್ನು ವಿರೋಧಿಸಿ ಮತ್ತೆ ಜಮೀನ್ದಾರಿ ಪದ್ಧತಿ ಮಾಡಲು ಹೊರಟಿದ್ದರು. ಬಿಜೆಪಿಯವರು ರೈತರು, ಕಾರ್ಮಿಕರ ಪರವಾಗಿಲ್ಲ. ಅವರು ಬಂಡವಾಳಶಾಹಿಗಳ ಪರವಾಗಿದ್ದಾರೆ. ಆದ್ದರಿಂದ ನಾವು ಭೂಸುಧಾರಣಾ ಕಾಯ್ದೆ, ಗೋಹತ್ಯೆ ಮತ್ತು ಸಂರಕ್ಷಣೆ ಕಾಯ್ದೆಗಳ ಬಗ್ಗೆ ನಿರಂತರವಾಗಿ ಹೋರಾಟ ಮಾಡೋಣ ಎಂದು ಕರೆ ನೀಡಿದರು.

ಮುಂಬರುವ ಲೋಕಸಭಾ ಚುನಾವಣೆ ಪ್ರಮುಖವಾಗಿದ್ದು, ಯಾವ ಪಕ್ಷ ಸ್ವಾಮಿನಾಥನ್ ವರದಿಯನ್ನು ಜಾರಿ ಮಾಡುತ್ತೇವೆಂದು ಭರವಸೆ ನೀಡುತ್ತಾರೆ. ಅವರಿಗೆ ಬೆಂಬಲ ನೀಡಿ ಎಂದು ಈ ಹಿನ್ನೆಲೆ ಈಗಾಗಲೇ ನಾನು ಸಂಯುಕ್ತ ಕಿಸಾನ್ ತಂಡದೊಂದಿಗೆ ಚರ್ಚಿಸಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ರಾಜ್ಯ ಗೌರವಾಧ್ಯಕ್ಷ ಚಾಮರಸ ಪಾಟೀಲ್, ಯುವ ಘಟಕದ ಆದಿತ್ಯ ನಾರಾಯಣ್ ಕೊಲ್ಲಾ, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜ್, ಪ್ರಸನ್ನ ಎನ್. ಗೌಡ, ರವಿ ಪೂನ್ನಚ್ಚ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



> ಮೀಸಲಾತಿಯಿಂದ ಉದ್ಯೋಗ ಸಿಗುತ್ತದೆ ಎಂದು ಬಿಜೆಪಿಯವರು ತಪ್ಪು ಕಲ್ಪನೆ ಮೂಡಿಸಿದ್ದಾರೆ. ಆದರೆ, ಅದು ಸುಳ್ಳು, ಅತೀ ಹೆಚ್ಚು ಉದ್ಯೋಗ ನೀಡುವ ಕ್ಷೇತ್ರ ಕೃಷಿಯಾಗಿದೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ವಿದ್ಯಾಭ್ಯಾಸದಿಂದ ವಂಚಿತರಾಗಿದ್ದು ಅವರಿಗೆ ಸಿಟಿ ವಿದ್ಯಾರ್ಥಿಗಳ ಜೊತೆ ಪೈಪೋಟಿ ಮಾಡಲು ಸಾಧ್ಯವಾಗುತ್ತಿಲ್ಲ. ಕಾರಣ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದು, ಕುತಂತ್ರ ವ್ಯವಸ್ಥೆಯಿಂದ ಗಣಿತ ವಿಷಯದಲ್ಲಿ ಕಠಿಣವಾದ ಪತ್ರಿಕೆ ಮಾಡಿದ ಪರಿಣಾಮ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಹಿಂದೆ ಉಳಿಯುತ್ತಿದ್ದರು. ಇದರಿಂದ ಕೃಪಾಂಕ ನೀಡಬೇಕೆಂದು ಒತ್ತಾಯಿಸುತ್ತಿದ್ದೇವೆ.
> - ಬಿ.ಆರ್.ಪಾಟೀಲ್, ಅಳಂದ ಶಾಸಕ

ಜ್ಯೋತಿಷ್ಯ ಶಾಸ್ತ್ರವನ್ನು ಕಾಪಾಡುತ್ತಿರುವ ಕಣಿಯರ್ ಸಮಾಜ

ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಡಾ.ಶೆಲ್ವ ಪಿಳ್ಳೈ ಐಯ್ಯಂಗಾರ್

ತಿ.ನರಸೀಪುರ ಜು.23– ರಾಜ್ಯದಲ್ಲಿ ಸಾವಿರಾರು ವರ್ಷಗಳಷ್ಟು ಇತಿಹಾಸವಿರುವ ಸಮಾಜ ಇದೆಯೆಂದಾದರೆ ಅದು ಕಣಿಯರ್ ಸಮಾಜವಾಗಿದ್ದು, ಅದು ಜ್ಯೋತಿಷ್ಯ ಶಾಸ್ತ್ರವನ್ನು ಕಾಪಾಡುವ ಕೆಲಸ ಮಾಡುತ್ತಿದೆ ಎಂದು ಇತಿಹಾಸ ಸಂಶೋಧಕರು, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಮೇಲುಕೋಟೆ ಜ್ಯೋತಿಷ್ಯ ವಿದ್ವಾಂಸರಾದ ಡಾ.ಶೆಲ್ವ ಪಿಳ್ಳೈ ಐಯ್ಯಂಗಾರ್ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ ರಾಜಾಜಿನಗರದ ಬಿ.ಸಿ.ರಂಗಪ್ಪ ವಿದ್ಯಾನಿಧಿ ಟ್ರಸ್ಟ್ ವತಿಯಿಂದ ತಿರುಮಕೂಡಲಿನ ಆದಿಚುಂಚನಗಿರಿ ರಜತೋತ್ಸವ ಭವನದಲ್ಲಿ ಭಾನುವಾರ ಕಣಿಯರ್/ಕಣಿಯನ್ ಜನಾಂಗದ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಉಚಿತ ನೋಟ್ ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಅವರು ಮಾತನಾಡಿದರು.

ರಾಜ್ಯದಲ್ಲಿ ಕಣಿಯರ್ ಜನಾಂಗ ಅತ್ಯಂತ ಹಿಂದುಳಿದ, ರಾಜಕೀಯವಾಗಿಯೂ ಬೆಂಬಲವಿಲ್ಲದ, ಆರ್ಥಿಕ ಮತ್ತು ಶೈಕ್ಷಣಿಕವಾಗಿಯೂ ಹಿಂದುಳಿದ ಅಲ್ಪಸಂಖ್ಯಾತ ಸಮುದಾಯವಾಗಿದೆ. ಆದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಸಮಾಜವಾಗಿದ್ದು ಜ್ಯೋತಿಷ್ಯ ಶಾಸ್ತ್ರವನ್ನು ಎತ್ತಿ ಹಿಡಿದು ಅದನ್ನು ಕಾಪಾಡುವ ಕೆಲಸ ಮಾಡುತ್ತಿದೆ ಎಂದರು.

ಕಣಿಯರ್ ಜನಾಂಗಕ್ಕೆ ಜ್ಯೋತಿಷ್ಯ ಮತ್ತು ಭವಿಷ್ಯ ಎರಡೂ ಮೂಲ ಪರಂಪರೆಯ ವಿದ್ಯೆಗಳಾಗಿದ್ದು, ಯಾವುದೇ ಕಾರಣಕ್ಕೂ ಸಮುದಾಯದವರು ಪಾರಂಪರಿಕ ವಿದ್ಯೆಯನ್ನು ಬಿಡಬಾರದು, ಭಾರತೀಯ ಸಂವಿಧಾನದ ಪ್ರಕಾರ ನಮ್ಮ ಪರಂಪರೆ ಹಾಗೂ ಇತಿಹಾಸ ರಕ್ಷಣೆ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಹಾಗೆಯೇ ಕಣಿಯರ್ ಸಮಾಜ ತಮ್ಮ ಮೂಲ ವಿದ್ಯೆಗಳಾದ ಜ್ಯೋತಿಷ್ಯ ಮತ್ತು ಭವಿಷ್ಯಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕಿದೆ ಎಂದರು.



ಮುಂದುವರೆದು ಮಾತನಾಡಿದ ಅವರು, ಗಿಡಮೂಲಿಕೆಗಳಲ್ಲಿರುವ ಔಷಧೀಯ ಸತ್ವ, ಕೆಮಿಕಲ್‌ನಲ್ಲಿರುವುದಿಲ್ಲ. ಕೆಮಿಕಲ್‌ಗಳು ನಿಮಗೆ ರೋಗದ ಲಕ್ಷಣಗಳನ್ನು ಮರೆಮಾಚುತ್ತವೆ. ಆದರೆ ಗಿಡಮೂಲಿಕೆಗಳು ಮೂಲ ರೋಗಗಳನ್ನೇ ಹೋಗಲಾಡಿಸುತ್ತವೆ. ಹಾಗಾಗಿ ನೀವು ಮೂಲ ವಿದ್ಯೆಯನ್ನು ಬಿಡಬಾರದು ಎಂದು ಸಲಹೆ ನೀಡಿದರು.

ಕಣಿಯ ಜನಾಂಗದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಮುಂದೆ ಬರಬೇಕೆಂದು ಆಸೆ ಹೊಂದಿದ್ದ ರಂಗಪ್ಪನವರ ಆಶಯವನ್ನು ಪೂರ್ಣ ಗೊಳಿಸುವ ಜವಾಬ್ದಾರಿ ವಿದ್ಯಾರ್ಥಿಗಳು, ಮತ್ತು ಪೋಷಕರ ಮೇಲಿದೆ.ಯಾವುದೇ ಒಂದು ಸಮಾಜ ಯಾವುದೇ ಕ್ಷೇತ್ರದಲ್ಲಿ ಉನ್ನತಿ ಹೊಂದಲು ಶಿಕ್ಷಣ ಅತ್ಯವಶ್ಯಕವಾಗಿದ್ದು,ಅದು ಕದಿಯಲಾಗದ ಸಂಪತ್ತಾಗಿದೆ ಎಂದು ಅಭಿಪ್ರಾಯಪಟ್ಟರು.

ಕಣಿ ಎಂಬುದು ದೊಡ್ಡ ಶಾಸ್ತ್ರ!: ಜ್ಯೋತಿಷ್ಯ ಮತ್ತು ಭವಿಷ್ಯ ಎಂಬ ಎರಡು ಅದ್ಭುತ ಕಾರ್ಯವನ್ನು ಕಣಿಯರ್ ಸಮಾಜ ಮಾಡುತ್ತಾ ಬಂದಿದೆ. ಕೇರಳ ಮತ್ತು ಕರಾವಳಿ ಪ್ರದೇಶಗಳಲ್ಲಿ ಅಷ್ಟಮಂಗಲ ಎಂಬ ಜ್ಯೋತಿಷ್ಯ ವಿಭಾಗವಿದೆ. ಅಲ್ಲಿ ಯಾವುದಾದರೊಂದು ಪ್ರಶ್ನೆ ಕೇಳಿದರೆ 12 ವಿಭಾಗಗಳಲ್ಲಿ ಉತ್ತರ ಹೇಳುತ್ತಾ ಮನುಷ್ಯನ ಎಲ್ಲಾ ರೀತಿಯ ಸಮಸ್ಯೆಗಳಿಗೆ ಉತ್ತರ ಹೇಳುವಂತಹ ಅಷ್ಟ ಮಂಗಲ ಪ್ರಶ್ನೆಯ ಪದ್ಧತಿ ಇದಾಗಿದೆ. ಸಂಸ್ಕೃತದಲ್ಲಿ ಯಾವುದನ್ನು ಅಷ್ಟ ಮಂಗಲ ಎಂದು ಕರೆಯಲಾಗಿದೆಯೋ ಅದನ್ನು ಕನ್ನಡದಲ್ಲಿ ಕಣಿ ಎಂದು ಕರೆಯಲಾಗಿದ್ದು, ಇದೊಂದು ದೊಡ್ಡ ಶಾಸ್ತ್ರ ಎಂಬುದನ್ನು ಜನ ಮರೆಯುತ್ತಾರೆ. ಇಂದು ವಿದ್ಯೆಗೆ ಬೆಲೆ ಇಲ್ಲದಂತಾಗಿದ್ದು, ಹಣಕ್ಕಷ್ಟೇ ಬೆಲೆ ಎಂಬಂತಾಗಿದೆ ಎಂದು ಶೆಲ್ವ ಪಿಳ್ಳೈ ಐಯ್ಯಂಗಾರ್ ತಿಳಿಸಿದರು.

ಖ್ಯಾತ ವಕೀಲ ಎಲ್.ಮಹೇಶ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಣಿಯರ್ ಸಮಾಜದ ಮಾಜಿ ಅಧ್ಯಕ್ಷ ಆರ್.ಪ್ರಸನ್ನ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ನಿಮ್ಹಾನ್ಸ್ ಆಸ್ಪತ್ರೆಯ ಸಂಪಾದಕ ಡಾ.ಎನ್.ಗೋಪಾಲಕೃಷ್ಣ, ಬೆಂಗಳೂರು ವಿಶ್ವ ವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ನಿಮಾ ಜ್ಞಾನದೇವ್, ಮೈಸೂರು ಸಿಎಫ್‌ಟಿಆರ್‌ಐ ವಿಜ್ಞಾನಿ ಡಾ.ಪುಷ್ಪ ಎಸ್.ಮೂರ್ತಿ, ಮೌಂಟ್ ಕಾರ್ಮೆಲ್ ಪಿಯು ಕಾಲೇಜ್ ಕನ್ನಡ ಪ್ರಾಧ್ಯಾಪಕಿ ಡಾ.ಶ್ವೇತಾ, ಪ್ರಾಧ್ಯಾಪಕ ಡಾ.ಗೌತಮ್, ಜ್ಯೋತಿಷಿ ಸೋಸಲೆ ಧರ್ಮ ರತ್ನಾಕರ ಮೂರ್ತಿ, ನಾಟಕ ನಿರ್ದೇಶಕ ಕಿರಗಸೂರು ರಾಜಪ್ಪ ರಂಗಭೂಮಿ ಕಲಾವಿದ ಡಾ.ಎಚ್.ವಿ.ರಾಜಶೇಖರ್, ಖ್ಯಾತ ತಬಲಾ ವಾದಕ ಎಂ.ಕೃಷ್ಣಮೂರ್ತಿ, ಟ್ಯಾಕ್ಸಿ ಡರ್ಮಿ ಕಲಾವಿದೆ ಕೆ.ಮಂಜುಳಾ, ನಿವೃತ್ತ ಸೈನಿಕ ಕೆ.ಪಿ.ವಿಜಯ್ ಅವರನ್ನು ಕಾರ್ಯಕ್ರಮದಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.

ನಿವೃತ್ತ ಪೊಲೀಸ್ ಅಧಿಕಾರಿ ಟಿ.ಸಿ.ನಾಗರಾಜ್, ಕರ್ನಾಟಕ ರಾಜ್ಯ ಕಣಿಯರ ಮಹಾಸಭಾದ ಅಧ್ಯಕ್ಷ ಡಿ.ಪಾಂಡುರಂಗ, ಹುಲ್ಲಹಳ್ಳಿ ಬಸವೇಶ್ವರ ವಿದ್ಯಾಸಂಸ್ಥೆ ಅಧ್ಯಕ್ಷ ಹೆಚ್.ಬಿ.ಮರಿಯಪ್ಪ, ನಿವೃತ್ತ ಬ್ಯಾಂಕ್ ನೌಕರ ರಂಗಸ್ವಾಮಿ, ಕು.ಸುಪ್ರಿಯ ಮತ್ತಿತರರಿದ್ದರು.

ರೋಟರಿ, ಕೆಎಸ್‌ಆರ್‌ಟಿಸಿಯಿಂದ ವನಮಹೋತ್ಸವ



ಪಿರಿಯಾಪಟ್ಟಣ ಪಟ್ಟಣದ ಲಯನ್ಸ್ ಕ್ಲಬ್ ಹಾಗೂ ಕೆಎಸ್‌ಆರ್‌ಟಿಸಿ ಪಿರಿಯಾಪಟ್ಟಣ ಇವರ ಸಹಯೋಗದಲ್ಲಿ ಪಟ್ಟಣದ ಬಸ್ ಡಿಪೋ ಆವರಣದಲ್ಲಿ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ನೆಡುವುದರ ಮೂಲಕ ವಿಶಿಷ್ಟವಾಗಿ ವನ ಮಹೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್‌ನ ಅಧ್ಯಕ್ಷ ಪಿ.ಕೆ. ಮಂಜುನಾಥ್ ಸಿಂಗ್, ಖಜಾಂಚಿ ಲವಕುಮಾರ್, ಕೆಎಸ್‌ಆರ್‌ಟಿಸಿ ನಿಯಂತ್ರಣಾಧಿಕಾರಿ ಶ್ರೀನಿವಾಸ್ ವ್ಯವಸ್ಥಾಪಕ ದರ್ಶನ್, ಲಯನ್ಸ್ ಸಂಸ್ಥೆಯ ಸದಸ್ಯರಾದ ಮಹದೇವಪ್ಪ, ಕುಮಾರ್, ಗಿರೀಶ್, ಸ್ವಾಮಿ, ಆನಂದ್, ವಿಜಯಕುಮಾರ್, ವೀರೇಶ್ ಹಾಗೂ ಪುರಸಭಾ ಸದಸ್ಯರಾದ ಪಿ.ಕೆ. ಕೃಷ್ಣ, ನಿರಂಜನ್, ಪ್ರಕಾಶ್ ಸಿಂಗ್, ಸೇರಿದಂತೆ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಕಾಣಬಹುದು

ಬೈಕ್‌ಗಳ ನಡುವೆ ಡಿಕ್ಕಿ: ಸವಾರ ಸಾವು, ಮತ್ತೋರ್ವನಿಗೆ ಗಾಯ

ಕೆ.ಆರ್.ನಗರ ತಾಲೂಕು ಕೆಸ್ತೂರು ಗೇಟ್ ಬಳಿ ದುರಂತ

ಚುಂಚನಕಟ್ಟೆ, ಜು.23– ಎರಡು ಬೈಕ್‌ಗಳ ನಡುವೆ ಸಂಭವಿಸಿದ ಡಿಕ್ಕಿಯಿಂದ ಓರ್ವ ಸಾವನ್ನಪ್ಪಿ ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಕೆ.ಆರ್.ನಗರ ತಾಲೂಕಿನ ಕೆಸ್ತೂರು ಗೇಟ್ ಬಳಿ ನಡೆದಿದೆ



ಶಿವಶಂಕರ್

ಶ್ರೀರಾಮಪುರ ಗ್ರಾಮದ ಶಿವಶಂಕರ್(50) ಮೃತ ದುರ್ದೈವಿ. ಮೃತರು ತಾಲೂಕಿನ ಗಂಧನಹಳ್ಳಿ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಮತ್ತೊಂದು ಬೈಕಿನಲ್ಲಿದ್ದ ಮುಂಡೂರು ಗ್ರಾಮದ ಸ್ವಾಮಿ ಅವರಿಗೆ ಗಂಭೀರವಾಗಿ ಗಾಯವಾಗಿದ್ದು ಇವರನ್ನು ಇದೇ ರಸ್ತೆಯಲ್ಲಿ ಹೋಗುತ್ತಿದ್ದ ವಕೀಲ ಡಿ.ಕೆ.ಕೊಪ್ಪಲು ಹರೀಶ್ ಅವರು ಆಂಬುಲೆನ್ಸ್ ಕರೆಸಿ ಕೆ.ಆರ್.ನಗರದ ವಿಸ್ಮಯ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲು ಮಾಡಲು ರವಾನಿಸಿದರು.

ಮೃತ ಶಿವಶಂಕರ್ ಶ್ರೀರಾಮಪುರ ಗ್ರಾಮದಿಂದ ಕೆ.ಆರ್.ನಗರ ಕಡೆ ತೆರಳುತ್ತಿದ್ದ ವೇಳೆ ಕೆ.ಆರ್.ನಗರದಿಂದ ಮೂಂಡೂರು ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಬೈಕ್ ಡಿಕ್ಕಿ ಹೊಡೆದಾಗ ಈ ಘಟನೆ ನಡೆದಿದೆ. ಘಟನಾ ಸ್ಥಳಕ್ಕೆ ಕೆ.ಆರ್.ನಗರ ಪೊಲೀಸ್ ಠಾಣೆಯ ಮುಖ್ಯಪೇದೆಗಳಾದ ಜವರೇಶ್, ಸುಬ್ರಮಣ್ಯ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿವೇಶನಕ್ಕೆ ಅತಿಕ್ರಮ ಪ್ರವೇಶ, ಕೊಲೆ ಬೆದರಿಕೆ: 15 ಮಂದಿ ಗುಂಪಿನ ವಿರುದ್ಧ ದೂರು ದಾಖಲು

ಸರಗೂರು, ಜು.23– ತಮ್ಮ ಕುಟುಂಬಕ್ಕೆ ಸೇರಿದ ನಿವೇಶನಕ್ಕೆ ಅತಿಕ್ರಮ ಪ್ರವೇಶ ಮಾಡಿರುವ ಗುಂಪೊಂದು ನಿವೇಶನದ ಬೇಲಿಯನ್ನು ನಾಶಗೊಳಿಸಿ ಕೊಲೆ ಬೆದರಿಕೆ ಹಾಕಿದ್ದು, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಅಡ್ಡಹಳ್ಳಿ ನಂದಕುಮಾರ್ ಪೊಲೀಸರಿಗೆ ದೂರು ನೀಡಿದ್ದಾರೆ.

ತಾಲೂಕಿನ ಅಡ್ಡಹಳ್ಳಿ ಗ್ರಾಮದಲ್ಲಿ ತಮ್ಮ ಅಜ್ಜಿ ದೇವಮ್ಮನವರ ಹೆಸರಿನಲ್ಲಿರುವ 99X126 ಅಡಿ ಖಾಲಿ ನಿವೇಶನದ ಬೇಲಿಯನ್ನು 15ಕ್ಕೂ ಹೆಚ್ಚು ಮಂದಿಯ ಗುಂಪೊಂದು ಜು.20ರಂದು ಅತಿಕ್ರಮ ಪ್ರವೇಶ ಮಾಡಿ ಬೇಲಿಯನ್ನು ತೆರವುಗೊಳಿಸಲು ಮುಂದಾಗಿತ್ತು. ವಿಷಯ ತಿಳಿದು ಘಟನಾ ಸ್ಥಳಕ್ಕೆ ನಾನು, ನನ್ನ ಪತ್ನಿ ಪದ್ಮಲತಾ ಅವರು ಹೋಗಿ ಪ್ರಶ್ನಿಸಲಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ದೂರು ನೀಡಿರುವುದಾಗಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದರು.

ನಿವೇಶನದಲ್ಲಿ ಬೆಲೆ ಬಾಳುವ ವಸ್ತುಗಳಿದ್ದು, ಅವುಗಳಿಗೂ ರಕ್ಷಣೆ ನೀಡಬೇಕು. ಘಟನೆ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ 15 ಮಂದಿ ಮೇಲೆ ದೂರು ದಾಖಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ನ್ಯಾಯ ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಪೊಲೀಸರಿಗೆ ಹೆದರಿ ಕಾನೂನು ಪಾಲಿಸಬೇಡಿ, ಜೀವ ಉಳಿಸಿಕೊಳ್ಳಲು ನಿಯಮ ಪಾಲಿಸಿ

ವಾಹನ ಚಾಲಕರಿಗೆ ಪೊಲೀಸ್ ಅಧಿಕಾರಿ ಸಲಹೆ

ಹೆಚ್.ಡಿ.ಕೋಟೆ: ಚಾಲಕರು ಪೊಲೀಸರಿಗೆ ಹೆದರಿ ಕಾನೂನನ್ನು ಪಾಲಿಸಬೇಡಿ, ನಿಮ್ಮ ಜೀವ ಉಳಿಸಿಕೊಳ್ಳಲಿಕ್ಕಾಗಿ ಕಾನೂನಿನ ಚೌಕಟ್ಟಿನಲ್ಲಿ ನಿರ್ಧರಿಸಿರುವ ನಿಯಮಗಳನ್ನು ಪಾಲಿಸಿ ವಾಹನ ಚಾಲನೆ ಮಾಡಬೇಕು ಎಂದು ಹುಣಸೂರು ಸಂಚಾರಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕ ಪುಟ್ಟಸ್ವಾಮಿ ತಿಳಿಸಿದರು.



ಪಟ್ಟಣದ ವರದರಾಜಸ್ವಾಮಿ ದೇವಾಲಯದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಕೋಟೆ ಪಟ್ಟಣದ ಪೊಲೀಸ್ ಠಾಣೆ ಮತ್ತು ಜಿಲ್ಲಾ ಜನಜಾಗೃತಿ ವೇದಿಕೆಯ ವತಿಯಿಂದ ಆಟೋ ಮತ್ತು ಗೂಡ್ಸ್ ಚಾಲಕರು ಹಾಗೂ ಮಾಲೀಕರಿಗೆ ಆಯೋಜಿಸಲಾಗಿದ್ದ, ಕಾನೂನು ಅರಿವು ಮತ್ತು ದುಶ್ಚಟಗಳ ಜಾಗೃತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು. ವೃತ್ತಿ ಬದುಕು ಮತ್ತು ವೈಯಕ್ತಿಕ ಬದುಕನ್ನು ಹೋಲಿಕೆ ಮಾಡಿಕೊಂಡಾಗ ಮಾತ್ರ ನೀತಿ ನಿಯಮಗಳ ಚೌಕಟ್ಟಿನಲ್ಲಿ ಬದುಕಬಹುದು ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್ ಮಾತನಾಡಿ, ತಾಲೂಕಿನಲ್ಲಿ ಅತಿ ಹೆಚ್ಚು ಸ್ವ ಸಹಾಯ ಸಂಘಗಳನ್ನು ಹೊಂದಿದೆ. 30 ಸಾವಿರಕ್ಕೂ ಹೆಚ್ಚು ಸ್ವಸಹಾಯ ಸಂಘಗಳ ಸದಸ್ಯರನ್ನು ಹೊಂದಿದ್ದೇವೆ. ಅಲ್ಲದೇ ತಾಲೂಕಿನಲ್ಲಿ ವಿವಿಧ ಕೆರೆಗಳ ಅಭಿವೃದ್ಧಿ, ಶುದ್ಧ ಜಲ ನೀಡಲು ಶುದ್ಧ ಕುಡಿಯುವ ನೀರಿನ ಘಟಕವನ್ನು ತೆರೆಯಲಾಗಿದೆ. ತಾಲೂಕಿನಲ್ಲಿ 150 ಕುಟುಂಬಗಳಿಗೆ ಮಾಸಾಶನ ನೀಡಲಾಗುತ್ತಿದೆ. ಅಲ್ಲದೇ ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ತಾಲೂಕು ದಂಡಾಧಿಕಾರಿ ಸಣ್ಣರಾಮಪ್ಪ ಮಾತನಾಡಿ, ಪ್ರಯಾಣಿಕನ ಜೀವ ಆ ವಾಹನ ಚಲಾವಣೆ ಮಾಡುವಂತಹ ಚಾಲಕನ ಕೈಯಲ್ಲಿರುತ್ತದೆ. ಆದ್ದರಿಂದ ವಾಹನ ಚಾಲನೆ ಮಾಡುವವರು ದುಶ್ಚಟಕ್ಕೆ ಒಳಗಾಗದಿರಿ ಎಂದು ಚಾಲಕರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜನಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಚಾ. ನಂಜುಂಡಮೂರ್ತಿ, ಸದಸ್ಯರಾದ ಸಿ.ಎನ್.ನಾಗಣ್ಣ, ಶ್ರೀಕಾಂತ್, ಕನ್ನಡ ಪ್ರಮೋದ, ವಿನಯ ಭಜರಂಗಿ, ಶಿವರಾಜ್, ಆರಕ್ಷಕ ನಿರೀಕ್ಷಕ ಶಬ್ಬೀರ್ ಹುಸೇನ್, ಉಪ ನಿರೀಕ್ಷಕ ರಸುಲ್ ಪಾಗವಾಲೆ, ಸಂಸ್ಥೆಯ ತಾಲೂಕು ಯೋಜನಾಧಿಕಾರಿ ಭಾಸ್ಕರ್, ಮೇಲ್ವಿಚಾರಕಿ ಪವಿತ್ರ ಕೃಷಿ ಅಧಿಕಾರಿ ರಾಜು, ಸೇವಾ ಪ್ರತಿನಿಧಿಗಳು ಹಾಜರಿದ್ದರು.



ನಂಜನಗೂಡು ತಾಲೂಕಿನ ಹದಿನಾರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಹದಿನಾರು ಪ್ರಸಾದ್, ಉಪಾಧ್ಯಕ್ಷರಾಗಿ ಮೂಡಹಳ್ಳಿ ನಂಜುಂಡಯ್ಯ ಅವಿರೋಧವಾಗಿ ಆಯ್ಕೆಯಾದರು.

ಹದಿನಾರು ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ನಂಜನಗೂಡು: ತಾಲೂಕಿನ ಹದಿನಾರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಹದಿನಾರು ಪ್ರಸಾದ್, ಉಪಾಧ್ಯಕ್ಷರಾಗಿ ಮೂಡಹಳ್ಳಿ ನಂಜುಂಡಯ್ಯ ಅವಿರೋಧವಾಗಿ ಆಯ್ಕೆಯಾದರು.

ಸುದ್ದಿಗಾರರೊಂದಿಗೆ ಮಾತನಾಡಿದ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಸಂಘದ ಕೇಂದ್ರ ಬ್ಯಾಂಕ್ ನಿರ್ದೇಶಕ ಬಿ.ಎನ್.ಸದಾನಂದ, ಇಲ್ಲಿಯವರೆಗೆ ತಾಲೂಕಿನ ಸಹಕಾರ ಸಂಘಗಳಿಗೆ ಕಳೆದ 5 ವರ್ಷಗಳಲ್ಲಿ 126 ಕೋಟಿ ರೂ. ಸಾಲ ಸೌಲಭ್ಯವನ್ನು ನೀಡಲಾಗಿದ್ದು, ಸಂಘದ ಸದಸ್ಯರು ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಸಕಾಲದಲ್ಲಿ ಮರುಪಾವತಿ ಮಾಡಬೇಕು ಎಂದರು.

ಸಹಕಾರ ಸಂಘದಿಂದ ಹದಿನಾರು ಗ್ರಾಮ ಸೇರಿದಂತೆ ಹದಿನಾರುಮೋಳೆ, ಮಲ್ಲರಾಜಯ್ಯನಹುಂಡಿ, ಮಾದಯ್ಯನಹುಂಡಿ, ಬೊಕ್ಕಹಳ್ಳಿ ಗ್ರಾಮಗಳ ರೈತರುಗಳಿಗೆ ಅನುಕೂಲವಾಗಿದೆ. ಸದಸ್ಯರಾಗಿರುವ ರೈತರುಗಳಿಗೆ ಸಂಘದಿಂದ 3 ಲಕ್ಷ ರೂ. ವರೆಗೆ ಬಡ್ಡಿರಹಿತ ಸಾಲ ನೀಡಲಾಗುತ್ತಿದ್ದು, ಸದುಪಯೋಗಪಡಿಸಿಕೊಂಡು ಆರ್ಥಿಕ ಪ್ರಗತಿಯನ್ನು ಸಾಧಿಸುವ ಜೊತೆಗೆ ಸಮಯಕ್ಕೆ ಸರಿಯಾಗಿ ಸಾಲವನ್ನು ಮರುಪಾವತಿ ಮಾಡುವ ಮೂಲಕ ತಾವು ಅಭಿವೃದ್ಧಿ ಸಾಧಿಸುವ ಜೊತೆಗೆ ಸಂಘದ ಪ್ರಗತಿಗೂ ಸಹಕಾರ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಪಿ.ಶೇಖರ್, ಮಹೇಂದ್ರ, ರವಿ, ಪ್ರಭುಸ್ವಾಮಿ, ಶ್ರೀಮತಿ ಮಧು, ನಾಗಮ್ಮ, ಗ್ರಾಮದ ಮುಖಂಡರಾದ ಸತೀಶ್, ಶ್ರೀಕಂಠು, ರೇವಣ್ಣ, ನಾಗರಾಜು, ಚುನಾವಣಾಧಿಕಾರಿ ಅಶ್ವಿನ್, ಸಂಘದ ಕಾರ್ಯದರ್ಶಿ ಹೆಚ್.ಬಿ.ಶಂಕರ್ ಉಪಸ್ಥಿತರಿದ್ದರು.

ಕ್ರೀಡೆಯಿಂದ ಆರೋಗ್ಯ, ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ

ಕೆ.ಆರ್. ನಗರದಲ್ಲಿ ಪತ್ರಕರ್ತರ ಕ್ರೀಡಾಕೂಟದಲ್ಲಿ ತಹಸೀಲ್ದಾರ್ ಅಭಿಮತ

ಕೆ.ಆರ್.ನಗರ, ಜು.23– ದಿನವಿಡೀ ಬಿಡುವಿಲ್ಲದೆ ವರದಿಯಲ್ಲಿ ನಿರತರಾಗಿರುವ ಪತ್ರಕರ್ತರು ಮತ್ತು ಕುಟುಂಬದವರು ಮಕ್ಕಳನ್ನು ಕರೆತಂದು ಒಂದು ದಿನ ಕ್ರೀಡಾಕೂಟವನ್ನು ಏರ್ಪಡಿಸಿರುವುದು ಬಹಳ ಸಂತೋಷದ ವಿಷಯವಾಗಿದೆ ಎಂದು ತಹಸೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್ ತಿಳಿಸಿದರು.



ಪಟ್ಟಣದ ಕ್ರಿಕೆಟ್ ಸ್ಟೇಡಿಯಂನಲ್ಲಿ ಏರ್ಪಡಿಸಿದ್ದ ತಾಲೂಕು ಪತ್ರಕರ್ತರ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರ ಕುಟುಂಬ ಮತ್ತು ಮಕ್ಕಳು ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸದೆ ತಮ್ಮ ಕೆಲಸಕ್ಕೆ ತಾವೇ ಎಂಬಂತೆ ಇದ್ದು ಎಲ್ಲಾ ಪತ್ರಕರ್ತರ ಕುಟುಂಬದವರನ್ನು ಕರೆತಂದು ಒಂದು ದಿನ ಕ್ರೀಡಾಕೂಟದ ಹೆಸರಿನಲ್ಲಿ ಸಮಯ ಕಳೆಯುವ ಜೊತೆಗೆ ಸಂತೋಷದಿಂದಿರುವುದು ಬಹಳ ಹೆಮ್ಮೆಯ ವಿಚಾರವಾಗಿದೆ ಎಂದರು.

ಕೇವಲ ಮನರಂಜನೆಗಾಗಿ ಕ್ರೀಡಾಕೂಟದಲ್ಲಿ ಭಾಗವಹಿಸುವುದಕ್ಕಿಂತ ವರ್ಷದ ಮೂರ್ನಾಲ್ಕು ಬಾರಿ ಇಂಥ ಕ್ರೀಡಾಕೂಟಗಳನ್ನು ಏರ್ಪಡಿಸುವುದರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಆಸಕ್ತರು ಗೆಲ್ಲುವ ಉದ್ದೇಶದಿಂದ ತರಬೇತಿ ಪಡೆಯಲು ಪ್ರಯತ್ನಿಸುತ್ತಾರೆ. ಆಗ ಪ್ರತಿಯೊಬ್ಬರ ಆರೋಗ್ಯ, ದೈಹಿಕ ಸಾಮರ್ಥ್ಯ ಹೆಚ್ಚಿಸುತ್ತದೆ ಎಂದರು.

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮೂರು ಅಂಗಗಳಂತೆ ಪತ್ರಿಕಾರಂಗವು ನಾಲ್ಕನೆಯ ಅಂಗವಾಗಿ ಸಾಮಾಜಿಕ ಕಳಕಳಿಯ ಸಮಾಜವನ್ನು ತಿದ್ದುವ ತಪ್ಪುಗಳನ್ನು ಎತ್ತಿ ತೋರಿಸುವ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿ ಕೆಲಸ ನಿರ್ವಹಿಸುವ ಪತ್ರಕರ್ತರ ಜವಾಬ್ದಾರಿ ಬಹಳ ಶ್ರೇಷ್ಠವಾದದ್ದು ಅಂತಹ ಪತ್ರಕರ್ತರ ಕ್ರೀಡಾಕೂಟವನ್ನು ಉದ್ಘಾಟಿಸುವಂತಹ ಜವಾಬ್ದಾರಿಯನ್ನು ನನಗೆ ನೀಡಿರುವುದು ಸಂತೋಷವಾಗಿದೆ ಎಂದರು.

ಪೊಲೀಸ್ ಇನ್‌ಸ್ಪೆಕ್ಟರ್ ಎಂ.ಆರ್.ಲವ ಮಾತನಾಡಿ, ಕ್ರೀಡೆ ಎಂಬುದು ಮನರಂಜನೆಗಾಗಿ ಪ್ರಶಸ್ತಿಗಾಗಿ ಅಲ್ಲ ಅದರಲ್ಲಿ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಸ್ನೇಹ ಸಂಬಂಧವನ್ನು ಬೆರೆಸುವ ಕ್ರೀಡಾಕೂಟವನ್ನಾಗಿ ಮಾಡಿಕೊಳ್ಳಿ ಗೆದ್ದವರು ಸೋತವರನ್ನು ಸೋತವರು ಗೆದ್ದವರನ್ನು ಪ್ರೋತ್ಸಾಹಿಸುವ ಜೊತೆಗೆ ಮುಂದೊಂದು ದಿನ ಅವಕಾಶ ಒದಗಿ ಬರುತ್ತದೆ ಎಂಬ ಭಾವನೆಯೊಂದಿಗೆ ಕ್ರೀಡಾಕೂಟವನ್ನು ಎದುರಿಸಿ ಎಂದು ಸಲಹೆ ನೀಡಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ವಡ್ಡರ ಕೊಪ್ಪಲು ಶಿವರಾಮು, ಪ್ರಧಾನ ಕಾರ್ಯದರ್ಶಿ ಎಂ.ಎಸ್.ರವಿಕುಮಾರ್, ಉಪಾಧ್ಯಕ್ಷ ಸಾಲಿಗ್ರಾಮದ ಹರೀಶ್ ಬೇರ್ಯ, ಸಿಸಿ ಮಾದೇವ್, ಖಜಾಂಚಿ ಬೇರ್ಯ ಮಹೇಶ್, ನಿರ್ದೇಶಕರುಗಳಾದ ವಿನಯ್ ದೊಡ್ಡಕೊಪ್ಪಲು ಚೈತನ್ಯ ರಾವ್, ಪಂಡಿತ್ ನಾಟಿಕರ್, ಆನಂದ ಹೊಸೂರ್, ರೋಜಾ ಮಹೇಶ್, ಸದಸ್ಯರಾದ ಕೆಟಿ.ರಮೇಶ್, ಚುಂಚನಕಟ್ಟೆ ಮಧು, ಪ್ರಶಾಂತ, ಶಿಲ್ಪ, ಶ್ರೀನಿವಾಸ್, ಕೃಷ್ಣಮೂರ್ತಿ, ಮಹಮ್ಮದ್, ಸಬೀರ್, ಯೋಗಾನಂದ, ನಾಗೇಗೌಡ, ಜೀಟಿಕೆ ಶಂಕರ್ ಮತ್ತು ಪತ್ರಕರ್ತರ ಕುಟುಂಬದವರು, ಮಕ್ಕಳು, ದೈಹಿಕ ಶಿಕ್ಷಣ ಸಂಯೋಜಕ ಕುಮಾರಸ್ವಾಮಿ ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸ್ಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ** (ಕ): ಸಂ.4.50ಕ್ಕೆ, **ಚೌಕಾಬಾರ** (ಕ): ರಾ.7.50ಕ್ಕೆ, **ಕ್ರಿಡ್ 3** (ಇಂ): ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್** (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್** (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ** (ಮ): ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್** (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6** (ಇಂ): ಮ.2.45ಕ್ಕೆ, ರಾ.7.45ಕ್ಕೆ, **65** (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹಿಡಿಂಬ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೊಲೈ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡಾನ್ ಕುಮಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾವೀರನ್ (ತ)	4 ಪ್ರದರ್ಶನಗಳು
ಸಂಗಂ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ಲಿಡೋ	
ಬೇಬಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಹಿಡಿಂಬ (ತೆ)	4 ಪ್ರದರ್ಶನಗಳು
ಪ್ರಭಾ	
ಮಧುರಕಾವ್ಯ (ಕ)	4 ಪ್ರದರ್ಶನಗಳು

ಉಚಿತ ಆರೋಗ್ಯ ಶಿಬಿರದಲ್ಲಿ 650ಕ್ಕೂ ಹೆಚ್ಚು ಮಂದಿಗೆ ಚಿಕಿತ್ಸೆ



ಸರಗೂರು, ಜು.23– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಸರಗೂರಿನ ಜೆ.ಎಸ್.ಎಸ್ ಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸುಮಾರು 650ಕ್ಕೂ ಹೆಚ್ಚು ರೋಗಿಗಳು ಚಿಕಿತ್ಸೆ ಪಡೆದರು.

ಈ ಶಿಬಿರದಲ್ಲಿ ಸಾಮಾನ್ಯ ವೈದ್ಯಕೀಯ ವಿಭಾಗದ ಡಾ.ಕಿರಣ್ ಹೆಚ್.ಎಸ್. ಹೃದಯ ವಿಭಾಗದ ಡಾ. ಪೂರ್ಣಿಮಾ, ಶಸ್ತ್ರಚಿಕಿತ್ಸಾ ವಿಭಾಗದ ಡಾ.ಹರೀಶ್ ಕುಮಾರ್.ಪಿ, ಚರ್ಮರೋಗ ವಿಭಾಗದ ಡಾ.ವೀರಣ್ಣ, ಕಣ್ಣಿನ ವಿಭಾಗದ ಡಾ. ಅಮೃತಾ.ಎ, ಮಕ್ಕಳ ವಿಭಾಗದ ಡಾ. ನಂದೀಶ್, ಕಿವಿ, ಮೂಗು, ಗಂಟಲು ವಿಭಾಗದ ಡಾ.ಸಂಧ್ಯಾ, ಮೂಳೆ ರೋಗ ವಿಭಾಗದ ಡಾ.ಸುಜನ ತೇಜ ಜೆ.ಎಸ್, ಸ್ತ್ರೀ ರೋಗ ಮತ್ತು ಪ್ರಸೂತಿ ವಿಭಾಗದ ಡಾ. ಹೇಮಪ್ರಿಯ.ಎಲ್, ಶ್ವಾಸಕೋಶ ವಿಭಾಗದ ಮೀಕಾಶ್ ಮೋಹನ್, ದಂತ ಚಿಕಿತ್ಸಾ ವಿಭಾಗದ ಡಾ. ಸುಷ್ಮಾ.ಆರ್, ಹಿರಿಯ ನಾಗರಿಕರ ವಿಭಾಗದ ಡಾ. ಪ್ರತಿಭಾ ಪೆರಿರಾ, ಜಠರ ಕರುಳು ವಿಭಾಗ ದೇವಾಂಶ್, ಮೂತ್ರ ನಾಳ ವಿಭಾಗ ಡಾ. ಮಾಷೂಕ್, ಮೂತ್ರ ಪಿಂಡ ವಿಭಾಗ ಡಾ.ವರುಣ್ ಅವರುಗಳು ಪಾಲ್ಗೊಂಡು ಚಿಕಿತ್ಸೆ ನೀಡಿದರು.

ಸರಗೂರು ಜೆ.ಎಸ್.ಎಸ್ ಶಿಕ್ಷಣ ಸಂಸ್ಥೆಯ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷೆ ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಅಂಜುಮ್ ಪಾಷ, ಗಂಗಾಧರಯ್ಯ, ಮಹದೇವಸ್ವಾಮಿ, ಜೆಎಸ್‌ಎಸ್ ಆಸ್ಪತ್ರೆಯ ಮಾರ್ಕೆಟಿಂಗ್ ವಿಭಾಗದ ವ್ಯವಸ್ಥಾಪಕ ಜಗದೀಶ್, ಮಾರ್ಕೆಟಿಂಗ್ ವಿಭಾಗದ ಪರಶಿವಮೂರ್ತಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಸಿಬ್ಬಂದಿವರ್ಗ, ಶಾಲಾ ಮಕ್ಕಳು, ಜೆಎಸ್‌ಎಸ್ ಆಸ್ಪತ್ರೆ ಸಿಬ್ಬಂದಿವರ್ಗದ ಅಂಬಿಲಿ (ಎಕೋ ಟೆಕ್ನಿಷಿಯನ್), ಕುಸುಮ, ಮಹೇಶ್.ಆರ್, ಸುನೀಲ್‌ಕುಮಾರ್ ಕೆ.ಎನ್, ಸುನೀಲ್ ಕುಮಾರ್, ನವೀನ್ ಸಿ.ಆರ್, ಸ್ಮಿತಾ, ಮಹದೇವಸ್ವಾಮಿ.ಎಂ.ಎನ್, ಶಿವಪ್ರಸಾದ್. ಎಸ್.ಎಲ್, ಬಸವರಾಜು, ರೋಹಿತ್, ನಿತೀನ್ ಇತರರು ಭಾಗವಹಿಸಿದ್ದರು.

ಕೃಷ್ಣಧಾಮದಲ್ಲಿ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಜು.23(ಎಂಟಿವೈ)– ಉಡುಪಿ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂ ಅವರ 36ನೇ ಚಾತುರ್ಮಾಸ್ಯ ವ್ರತದ ಅಂಗವಾಗಿ ಭಾನುವಾರ ಆಯೋಜಿಸಿದ್ದ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಹಲವು ಮಂದಿ ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಕೃಷ್ಣಧಾಮದಲ್ಲಿ ಆಯೋಜಿಸಿದ್ದ 'ಆರೋಗ್ಯ ತಪಾಸಣಾ' ಶಿಬಿರದಲ್ಲಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಅನ್ನಪೂರ್ಣ ಐ ಆಸ್ಪತ್ರೆ, ಜೆಎಸ್ಎಸ್ ದಂತ ವೈದ್ಯಕೀಯ ಕಾಲೇಜು, ನಾರಾಯಣ ಹೃದಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಕಾವೇರಿ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಉದ್ಘಾಟಿಸಿ ಮಾತನಾಡಿ, ಬದಲಾದ ಜೀವನಶೈಲಿ, ಒತ್ತಡದ ಬದುಕಿನಿಂದಾಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಅಲ್ಲದೆ, ಅನೇಕ ಆರೋಗ್ಯ ಸಮಸ್ಯೆಗಳು ಕಾಡುತ್ತಿವೆ. ಜನರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಆರೋಗ್ಯ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಆಶೀರ್ವಚನ ನೀಡಿ, ಇಂಗ್ಲಿಷ್ ಔಷಧಿ ಹಾಗೂ ಚಿಕಿತ್ಸಾ ಪದ್ಧತಿ ಅಂದಾಜು 100 ವರ್ಷಗಳಿಂದ ಚಾಲ್ತಿಯಲ್ಲಿದೆ. ಆದರೆ ಯೋಗ, ಆಯುರ್ವೇದ ಚಿಕಿತ್ಸಾ ಪದ್ಧತಿಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಮ್ಮ ದೇಶ ತಪೋವನ ಇದ್ದಂತೆ. ಇಲ್ಲಿ ಅನೇಕ ಯತಿಗಳು, ಸಾಧು–ಸಂತರು ನಡೆದಾಡಿರುವ ತಪೋಭೂಮಿ. ಇಲ್ಲಿ ಜನಿಸಿದ ನಾವೆಲ್ಲರೂ ಪುಣ್ಯವಂತರು ಎಂದರು.

ಜನರನ್ನು ಚಿಂತೆ ಕಾಡುತ್ತದೆ. ನಾವು ಚಿಂತೆ ಮಾಡುವುದನ್ನು ಬಿಡಬೇಕು. ಚಿಂತೆಯಿಂದಲೇ ಹಲವು ರೋಗಗಳು ನಮ್ಮನ್ನು ಬಾಧಿಸುತ್ತದೆ. ನಮ್ಮ ಪೂರ್ವಜರು ಕಲಿಸಿಕೊಟ್ಟಿರುವ ಯೋಗ, ಧ್ಯಾನ ಮತ್ತು ಆಯುರ್ವೇದ ಪದ್ಧತಿಯನ್ನು ಬಳಸಿಕೊಂಡು ಎಲ್ಲರೂ ಸಮಾಧಾನ ಚಿತ್ತದಿಂದ ಆರೋಗ್ಯವಂತರಾಗಬೇಕು. ಇತ್ತೀಚಿನ ದಿನಗಳಲ್ಲಿ ವಿದೇಶಗಳಲ್ಲಿ ನಮ್ಮ ಯೋಗ ಪದ್ಧತಿ ಕಲಿತು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ನಮ್ಮ ಯೋಗಪದ್ಧತಿ ಹಾಗೂ ಆಯುರ್ವೇದ ಪದ್ಧತಿಯನ್ನು ಭಾರತೀಯರಾದ ನಾವು ಅಳವಡಿಸಿಕೊಳ್ಳಬೇಕು. ಆ.6ರಂದು ನಮ್ಮ ಬೇಬಿ ಗ್ರಾಮದಲ್ಲಿ ಉಚಿತ ಆಯುರ್ವೇದ ತಪಾಸಣೆ ಶಿಬಿರವನ್ನು ಹಮ್ಮಿಕೊಂಡಿದ್ದೇವೆ ಎಂದು ಶ್ರೀಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ರಾಜೀವ್ ಗಾಂಧಿ ಯೂನಿವರ್ಸಿಟಿ ಉಪಕುಲಪತಿ ಡಾ.ಎಂ.ಕೆ.ರಮೇಶ್, ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಡಾ.ಕೆ.ಆರ್. ದ್ರಾಕ್ಷಾಯಿಣಿ, ಡಾ.ರಾಧಾಕೃಷ್ಣ ರಾಮ್ ರಾವ್, ಹಿರಿಯ ಆಯುರ್ವೇದ ತಜ್ಞರಾದ ಡಾ.ಗುರು ಬಸವರಾಜ್, ಸಹಾಯಕ ನಿರ್ದೇಶಕರು, ಜಿಎಆರ್‌ಸಿ ಡಾ.ಲಕ್ಷ್ಮೀ ನಾರಾಯಣ ಶೆಣೈ, ಚಾತುರ್ಮಾಸ ಸಮಿತಿಯ ಅಧ್ಯಕ್ಷ ಎಮ್. ಕೃಷ್ಣದಾಸ್ ಪುರಾಣಿಕ್, ಕಾರ್ಯಾಧ್ಯಕ್ಷ ರವಿ ಶಾಸ್ತ್ರಿ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ತಂತ್ರಿ, ಆರೋಗ್ಯ ಸೇವಾ ಸಮಿತಿಯ ಅಧ್ಯಕ್ಷ ಕೆ.ಎಸ್.ಗುರುರಾಜ್, ವೈದ್ಯರಾದ ಡಾ.ರೂಪಾ, ಡಾ.ಪ್ರಕಾಶ್ ಪ್ರಭು, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ ಇನ್ನಿತರರು ಉಪಸ್ಥಿತರಿದ್ದರು.



ಡಿ.ಸಾಲುಂಡಿ ಡೈರಿ ಪದಾಧಿಕಾರಿಗಳ ಆಯ್ಕೆ

ಮೈಸೂರು, ಜು.23(ಎಸ್‌ಬಿಡಿ)– ತಾಲೂಕಿನ ಜಯಪುರ ಹೋಬಳಿ ಡಿ.ಸಾಲುಂಡಿ ಗ್ರಾಮ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆಯಾಗಿದೆ.

ಆಡಳಿತ ಮಂಡಳಿಗೆ ಡಿ.ಸಾಲುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಸಿದ್ದರಾಮ(173 ಮತ), ಸಿ.ಬಾಸ್ಕರ್(150), ಚಿಕ್ಕಬುದ್ದಿ(137), ಶ್ರೀಕಂಠ(130), ಎಂ.ನಾಗೇಂದ್ರ(110), ಜೆ.ಹರಳೇ ಗೌಡ(109), ಬಿ.ಶಿವಮೂರ್ತಿ(99) ಹಾಗೂ ಶಂಕರ(94) ನೂತನ ನಿರ್ದೇಶಕರಾಗಿ ಆಯ್ಕೆಯಾದರು. ಈ ಮೊದಲೇ ಬಸವನಾಯಕ, ಪ್ರೇಮಕುಮಾರಿ ಹಾಗೂ ನಿಂಗಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೂವರು ಅವಿರೋಧವಾಗಿ ಆಯ್ಕೆಯಾಗಿದ್ದರಿಂದ 8 ಸ್ಥಾನಗಳಿಗೆ ಚುನಾವಣೆ ನಡೆಯಿತು. ಒಟ್ಟು 247ರಲ್ಲಿ 245 ಸದಸ್ಯರು ಮತಚಲಾಯಿಸಿದರು. ವಾಸಿಂ ಪಾಷಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಪೊಲೀಸರು ಬಂದೋಬಸ್ತ್ ಮಾಡಿದ್ದರು. ಈ ಬಾರಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳೇ ನಿರ್ದೇಶಕರಾಗಿ ಆಯ್ಕೆಯಾಗಿರುವುದು ವಿಶೇಷ ಎಂದು ಗ್ರಾಮ ಪಂಚಾಯ್ತಿ ಸದಸ್ಯ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಜೆಡಿಎಸ್–ಬಿಜೆಪಿ ಹೊಂದಾಣಿಕೆ ಆಶಾದಾಯಕ ಬೆಳವಣಿಗೆ

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ

ಮೈಸೂರು, ಜು.23–ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಹೊಂದಾಣಿಕೆ ಮಾಡಿಕೊಳ್ಳುವುದು ಆಶಾದಾಯಕ ಬೆಳವಣಿಗೆ ಎಂದು ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಉಭಯ ಪಕ್ಷಗಳ ಹೊಂದಾಣಿಕೆ ರಾಜ್ಯ ರಾಜಕೀಯದಲ್ಲಿ ಹೊಸ ಅಧ್ಯಾಯನಕ್ಕೆ ವೇದಿಕೆಯಾಗಲಿದೆ. ರಾಷ್ಟ್ರ ಮಟ್ಟದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನಡುವೆ ಉತ್ತಮ ಬಾಂಧವ್ಯವಿದ್ದು, ಲೋಕಸಭಾ ಚುನಾವಣೆಯಲ್ಲಿ ಉಭಯ ಪಕ್ಷಗಳಿಗೂ ಸಹಕಾರಿಯಾಗಲಿದೆ. ಜೆಡಿಎಸ್ ಮತ್ತು ಬಿಜೆಪಿ ಹೊಂದಾಣಿಕೆಯಿಂದ ಸ್ಪರ್ಧಿಸಿದರೆ ರಾಜ್ಯದಲ್ಲಿ ಹೆಚ್ಚಿನ ಸಂಸತ್ ಸ್ಥಾನಗಳನ್ನು ಪಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಲ್ಲದೇ ಸ್ಥಳೀಯವಾಗಿ ಕೂಡ ಅನುಕೂಲವಾಗಲಿದೆ ಎಂದು ಅವರು ತಿಳಿಸಿದ್ದಾರೆ.



ವಾರ್ಷಿಕ ಮಹಾಸಭೆ

ಮೈಸೂರು, ಜು. 23– ಮೈಸೂರಿನ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ವಾರ್ಷಿಕ ಮಹಾಸಭೆ ಜು. 29 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಸಭೆಯನ್ನು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಎಂ.ಸಿ. ಮರಿಸ್ವಾಮಿ ಅಧ್ಯಕ್ಷತೆ ವಹಿಸುವರು. ಉಪ ಆಯುಕ್ತ ಬಿ.ಎಂ. ನಾಣಯ್ಯ ಉಪಸ್ಥಿತರಿರುವರು.



